MOTION.

Re: The Statewide Satyagraha in the Mysore State against the setting up of a one man Commission *re :* the Mysore-Maharashtra Border.

(*Debate continued.*)

ಶ್ರೀ ಸಿದ್ದಯ್ಯಕಾಶೀಮಠ್ (ಶಿರಹಟ್ಟಿ).—ಅಧ್ಯಕ್ಷರೇ, ಈ ಸಭೆಯಲ್ಲಿ ಸತತವಾಗಿ ಕಳೆದ ನಾಲ್ಕು ದಿವಸಗಳಿಂದಲೂ ಮೈಸೂರು—ಮಹಾರಾಷ್ಟ್ರದ ಗಡಿಯ ಸಂಬಂಧವಾಗಿ ಚರ್ಚೆ ನಡೆದು ಮಾನ್ಯ ಸದಸ್ಯರುಗಳನೇಕರು ನಾನಾ ಸಲಹೆಗಳನ್ನು ಮಾಡಿದ್ದಾರೆ. ಆದ್ದರಿಂದ ನಾನು ಈ ವಿಷಯದಲ್ಲಿ ಹೆಚ್ಚಿಗೆ ಹೇಳದೆ ಕೇಳದೆ, ಕೇವಲ ಮಹಾರಾಷ್ಟ್ರ ಏಕೀಕರಣ ಸಮಿತಿಯ ನಮ್ಮ ಸ್ನೇಹಿತ ಸದಸ್ಯರುಗಳು ಆಡಿದ ಚುಚ್ಚು ಮಾತುಗಳನ್ನು ಮಾತ್ರ ಪ್ರಸ್ತಾಪಿಸಿ ಮಾತನಾಡಬಯಸುತ್ತೇನೆ. ಶ್ರೀಮಾನ್ ಸುನ್ತನ್‌ಕರ್ ಅವರು ಮಾತನಾಡುತ್ತಾ 'ಗಡಿಯ ವಿಚಾರ ಏನೂ ಹೇಳಲಿಲ್ಲ. ನಮ್ಮ ಮೈಸೂರು ಜನತೆ ಯಾವ ರೀತಿ ಇದೆಯೆಂದು ಅವಹೇಳನ ಮಾಡುವುದಕ್ಕೆ ಅವರು ಪ್ರಯತ್ನ ಮಾಡಿದರು. ಸತ್ಯಾಗ್ರಹ ನಡೆಸುವುದಕ್ಕಾಗಿ ಜನರನ್ನು ಕೂಲಿಯ ರೂಪವಾಗಿ ಕರೆತಂದು ಸತ್ಯಾಗ್ರಹ ನಡೆಸಿದರು ಎಂದು ಹೇಳುವುದು ಸರಿಯಲ್ಲ. ಅದು ಬಹಳ ದುಷ್ಪರಿಣಾಮಕಾರಿಯೆಂದು ಕೂಡ ನಾನು ಅವರಿಗೆ ತಿಳಿಸ ಬಯಸುತ್ತೇನೆ. ಅಲ್ಲದೆ, ಅವರು ತಿಳಿಯಲಿ, ಎಂದಿಗಾದರೂ ಕನ್ನಡಿಗರು ಕರೆ ಕೊಟ್ಟಾಗ ಮೈಗೆ-ಮೈ ಕೊಟ್ಟು ಸ್ವಯಂಸ್ಫೂರ್ತಿಯಿಂದ ಹೋರಾಡಿದ ಉದಾಹರಣೆಗಳು ಅನೇಕ ಇವೆ, ಅದೇ ಮಹಾರಾಷ್ಟ್ರ ವಿಚಾರ ಹೇಳುವುದಾದರೆ ಗೋವಾದ ಬಗ್ಗೆ ಸತ್ಯಾಗ್ರಹ ನಡೆದ ಕಾಲದಲ್ಲಿ ಮಹರಾಷ್ಟ್ರದಲ್ಲಿ ಸತ್ಯಗ್ರಹಕ್ಕೆ ಜನದ ಕೊರತೆಯುಂಟಾದಾಗದ ಬೆಳಗಾಂ ಪ್ರದೇಶದಿಂದ ಜನರನ್ನು ಕರೆಸಿ ಕೂಲಿ ಕೊಟ್ಟು ಅಲ್ಲಿ ಸತ್ಯಾಗ್ರಹ ನಡೆಸಿದ್ದು ಶ್ರೀಮಾನ್ ಸುನ್ತನಕರ್‌ರವರಿಗೆ ಗೊತ್ತಿಲ್ಲವೋ ಏನೋ. ಇದು ಪತ್ರಿಕೆಗಳಲ್ಲೂ ಬಂದಿತ್ತು. ಶ್ರೀಮಾನ್ ಸುನ್ತನಕರ್‌ರವರು ಹೇಳಿದಂತೆ ಇಲ್ಲಿ ನಡೆದಿರುವ ನಿದರ್ಶನಗಳನ್ನು ಅವರು ತೋರಿಸಲಿ, ನಾನು ಒಪ್ಪುತ್ತೇನೆ. ವರ್ಕಿಂಗ್ ಕಮಿಟಿಯವರು ಏಕ ಸದಸ್ಯ ಆಯೋಗವಾಗಬೇಕೆಂದು ಯಾವಾಗ ನಿರ್ಣಯಿಸಿದರೋ, ಆ ಕೂಡಲೇ ಪ್ರತಿಯೊಬ್ಬ ಕನ್ನಡಿಗನೂ ಮುಂದೆ ಬಂದು ಸ್ವಯಂ ಸ್ಫೂರ್ತಿಯಿಂದ ತನ್ನ ಪ್ರತಿಭಟನೆಯನ್ನು ಸೂಚಿಸಿರುವುದನ್ನು ನಾನು ಅವರಿಗೆ ತೋರಿಸಬಲ್ಲೆ.

ಶ್ರೀ ಕದಂರವರು ಮಾತನಾಡುತ್ತಾ ಬೆಳಗಾಂ, ಕಾರವಾರ ಪ್ರದೇಶಗಳ ಬಗ್ಗೆ ಒಂದು ಮಾತನ್ನು ಹೇಳದರು. ಆ ಜನತೆ ಶೂರರು, ಬಹಳ ಜನರನ್ನು ಮಹಾರಾಷ್ಟ್ರದವರು ಸೈನ್ಯಕ್ಕೆ ಕೊಟ್ಟು ಸೇವೆ ಸಲ್ಲಿಸಿದವರಾಗಿದ್ದಾರೆ ಎಂಬ ಪ್ರತಿಷ್ಠೆಯನ್ನು ಇಲ್ಲಿ ತೋರ್ಪಡಿಸಿದರು. ಅವರು ಬ್ರಿಟಿಷರ ಕಾಲದಲ್ಲಿ ಯಾವ ರೀತಿ ಹೋರಾಡಿದರು ಎಂಬ ಪ್ರತಿಷ್ಠೆಯನ್ನು ಇಂದು ಹೇಳಬೇಕಾಗಿಲ್ಲ ಅವರಿಗೆ ಒಂದೇ ಒಂದು ವಿಷಯ ಹೇಳಿದರೆ ಸಾಕು. ನಾನೇನೂ ಶ್ರೀ ಕದಂರವರ ಸೈನ್ಯ ಯಾವ ರೀತಿ ಇತ್ತು ಎಂದು ಅವಹೇಳನ ಮಾಡುವುದಕ್ಕೆ ಇಷ್ಟಪಡುವುದಿಲ್ಲ. ನಮ್ಮ ಕನ್ನಡಿಗರಂತೂ ಏನೇ ಕಷ್ಟ ಬಂದರೂ ಧೈರ್ಯವಾಗಿ ಹೋರಾಡುವುದಕ್ಕೆ ಮುಂದೆ ಬರುತ್ತಾರೆಂದು ನಾನು ಹೇಳುತ್ತೇನೆ. ಮಾನ್ಯ ಶ್ರೀ ಕದಂರವರು ಹಿಂದೆ ಮಹಾರಾಷ್ಟ್ರದ ಶಾಸನ ಸಭೆಯಲ್ಲಿದ್ದವರು. ಅವರು ಅಲ್ಲಿದ್ದಾಗ ಈ ವಿಷಯ ಬಂದಾಗ ಭಾಷಣ ಮಾಡಿ ಕಾರವಾರ, ನಿಪ್ಪಾಣಿ, ಬೆಳಗಾಂ ಪ್ರದೇಶಗಳು ಕರ್ನಾಟಕಕ್ಕೆ ಹೋಗಕೂಡದು, ಮಹಾರಾಷ್ಟ್ರಕ್ಕೆ ಬರಬೇಕೆಂದು ಒಂದು ಸಾರಿಯೂ ಹೇಳಲಿಲ್ಲ. ಕೇವಲ ಒಂದೆರಡು ಹಳ್ಳಿಗಳು ಮಹಾರಾಷ್ಟ್ರಕ್ಕೆ ಹೋಗಬೇಕೆಂದು ಮಾತ್ರ ವಾದ ಮಾಡಿದರು.

ಶ್ರೀ ಬಿ. ಡಿ. ಜತ್ತಿ (ಆಹಾರ ಶಾಖೆಯ ಮಂತ್ರಿಗಳು).—ನಾನೂ ಅಲ್ಲಿದ್ದವನು. ಕಾರವಾರದ ವಿಷಯದಲ್ಲಿ ಏನೂ ಅವರು ಹೇಳಲಿಲ್ಲ. ಮತ್ತು ಬೆಳಗಾಂ ವಿಷಯದಲ್ಲಿ ಕೂಡ ಎರಡು ರಾಜ್ಯಗಳ ಕಾಂಗ್ರೆಸಿನವರೂ ಕುಳಿತು ಮಾತನಾಡಬೇಕೆಂದು ಹೇಳಿದ್ದರು ಅಷ್ಟೆ. ಆ ಭಾಗವನ್ನು ಸಭೆಯ ನಡೆವಳಿಕೆಗಳಿಂದ ಓದಿ ಹೇಳಿ.

ಶ್ರೀ ಸಿದ್ದಯ್ಯ ಕಾಶೀಮಠ್.—ಅಲ್ಲಿದ್ದ ಶ್ರೀಮಾನ್ ಜತ್ತಿಯವರು ಹೇಳುತ್ತಿದ್ದಾರೆ. ಈ ವಿಷಯವನ್ನು ಅಂದು ಅವರು ಪ್ರಸ್ತಾಪ ಮಾಡಿಯೇ ಇಲ್ಲ. ಆದ್ದರಿಂದ ಕಾರವಾರ, ಬೆಳಗಾಂ, ನಿಪ್ಪಾಣಿ ಬಗ್ಗೆ ಯಾವ ರೀತಿಯಲ್ಲೂ ಭಿನ್ನಾಭಿಪ್ರಾಯವಿರಲಿಲ್ಲವೆಂದು ಹೇಳಬಹುದು. ಇನ್ನೊಂದು ವಿಷಯ ಹೇಳುದಾದರೆ, ಹಿಂದೆ ಸ್ಟೇಟ್ಸ್ ರಿ-ಆರ್ಗನೈಸೇಷನ್ ಬಿಲ್ ಕೇಂದ್ರ ಶಾಸನ ಸಭೆಯ ಮುಂದೆ ಬಂದಾಗ ಆಗ ಗೃಹ ಮಂತ್ರಿಗಳಾಗಿದ್ದ ಗೋವಿಂದವಲ್ಲಭಪಂತ್‌ರವರು ತಮ್ಮ ಪರಿಸಮಾಪ್ತ ಭಾಷಣದಲ್ಲಿ ಹೇಳಿದ್ದು ಗಮನಾರ್ಹವಾಗಿದೆ. ಎಸ್. ಆರ್. ಆಕ್ಟನಲ್ಲಿ ಹೇಳಿರುವುದರ ಮೇಲೆ, ಬೇರೆ ಯಾವ ಚಿಕ್ಕ ಪುಟ್ಟ ಅಡ್ಜಸ್ಟ್‌ಮೆಂಟ್‌ಗಳಿದ್ದರೂ ಅವುಗಳನ್ನು ಸಂಬಂಧಪಟ್ಟವರು ಕಲೆತು ತಮ್ಮಲ್ಲೇ

ಬಗೆಹರಿಸಿಕೊಳ್ಳಬೇಕು ಎಂದು ಸ್ಪಷ್ಟಪಡಿಸಿದ್ದಾರೆ. ಆ ಸಮಯದಲ್ಲಿ ಪಂಡಿತ ನೆಹರೂರವರು ಇದ್ದರು. ಭಾಷೆಯೇ ಹೆಚ್ಚಿನ ಮಹತ್ವದ್ದಲ್ಲ. ಆಡಳಿತ ಸೌಲಭ್ಯ ದೃಷ್ಟಿಯನ್ನು ಗಮನಿಸಿ minor differences ಗಳಿದ್ದರೆ ಅವುಗಳನ್ನು ಪರಸ್ಪರ ಹೊಂದಾಣಿಕೆಯಿಂದ ಬಗೆಹರಿಸಿಕೊಳ್ಳಬೇಕೆಂದು ಹೇಳಿದರು. ಹೀಗಿರುವಲ್ಲಿ ಈ ದಿವಸ ಬಲಪ್ರಯೋಗಮಾಡಿ, ಅನ್ಯಾಯದಿಂದ ಒತ್ತಾಯಪೂರ್ವಕವಾಗಿ ಗಡಿಯ ನಿರ್ಮಾಣದಲ್ಲಿ ಇಲ್ಲದಸಲ್ಲದ ಮಾತುಗಳನ್ನು ಎತ್ತಿರುವುದು ಸರಿಯಲ್ಲವೆಂದು ಅವರ ವಾದವನ್ನು ನಾನು ತಿರಸ್ಕರಿಸುತ್ತೇನೆ.

ಅಲ್ಲದೆ ಅವರ ಮಕ್ಕಳಾದ ಶ್ರೀಮತಿ ಇಂದಿರಾ ಗಾಂಧಿಯವರು ಕೂಡ ಅದನ್ನೆಲ್ಲಾ ಓದಿಕೊಂಡಿದ್ದರೆ, ಅದನ್ನೆಲ್ಲ ಗಣನೆಗೆ ತೆಗೆದುಕೊಂಡಿದ್ದರೆ ಈ ಪ್ರಸ್ತಾಪವನ್ನು ಎತ್ತುತ್ತಿರಲಿಲ್ಲ. ಇವತ್ತು ಗಡಿ ಸಂಬಂಧವಾಗಿ ಮೈನರ್ ಡಿಫರೆನ್ಸಸ್ ಏನಾದರೂ ಇದ್ದರೆ ಅವುಗಳನ್ನು ಈಗ ದೇಶ ಎದುರಿಸುತ್ತಿರತಕ್ಕ ತೊಂದರೆಗಳು ಎಂದರೆ ಆಹಾರಾಭಾವ, ನಿರುದ್ಯೋಗ ಮುಂತಾದುವುಗಳನ್ನು ಹೋಗಲಾಡಿಸುವುದಕ್ಕೆ ಮೊಟ್ಟಮೊದಲನೆಯದಾಗಿ ಆದ್ಯತೆಯನ್ನು ಕೊಟ್ಟು ಮುಂದೂಡಬೇಕು, ಇದಕ್ಕೆ ಅಷ್ಟು ಪ್ರಾಮುಖ್ಯತೆಯನ್ನು ಕೊಡಬಾರದು. ಈಗ ನೇಮಕಮಾಡಬೇಕೆಂದಿರುವ ಏಕ ಸದಸ್ಯ ಆಯೋಗವನ್ನು ಕೂಡ ನಾನು ವಿರೋಧ ಮಾಡುತ್ತೇನೆ. ಇದರಿಂದ ನಮಗೆ ನ್ಯಾಯ ದೊರಕಲಿಕ್ಕಿಲ್ಲ ಎನ್ನುವುದಕ್ಕೆ ಸಾಕಷ್ಟು ಕಾರಣಗಳನ್ನು ನನ್ನ ಸ್ನೇಹಿತರು ಹೇಳಿದ್ದಾರೆ. ಒಂದು ಕಾರಣ ಎಂದರೆ, ಭಾರತದ ಪ್ರಧಾನ ಮಂತ್ರಿಗಳು ಮುಂಬೈನ ಚೌಪಾತಿಯಲ್ಲಿ ಭಾಷಣ ಮಾಡಿದಾಗ ಅಲ್ಲಿನ ಜನ ಹೇಳಿದ ಜೈ ಹಿಂದ್ ಎನ್ನುವುದು ಬೆಳಗಾಂನಲ್ಲಿ ಕೂಡ ಕೇಳಲಿ ಎಂದು ಏನು ಹೇಳಿದ್ದಾರೆ. ಅದರ ಮೇಲೆ ಮಾನ್ಯ ಚವಾಣ್‌ರವರು ಮೇಲಿಂದ ಮೇಲೆ ಏನು ಹೇಳುತ್ತ ಬಂದಿದ್ದಾರೆ ಅದನ್ನೆಲ್ಲ ಗಮನಕ್ಕೆ ತೆಗೆದುಕೊಂಡರೆ ಏಕ ಸದಸ್ಯ ಆಯೋಗದಿಂದ ನಮಗೆ ಅನ್ಯಾಯ ತಟ್ಟಬಹುದು ಎನ್ನುವುದು ಮನದಟ್ಟಾಗಿದೆ. ಅದಕ್ಕಾಗಿ ಏಕ ಸದಸ್ಯ ಆಯೋಗದ ನೇಮಕವನ್ನು ನಾನು ವಿರೋಧ ಮಾಡಬೇಕಾಗಿದೆ.

ಹಿರಿಯರಾದ ದೊಡ್ಡಮೇಟಿಯವರು ಮಾತನಾಡುವಾಗ ಹೇಳಿದರು, ಇವತ್ತು ಮಹಾರಾಷ್ಟ್ರದವರು ಮಿಲಿಟರಿಯನ್ನು ತಂದರೂ ಕೂಡ ನಾವು ನಮ್ಮ ಭಾಗವನ್ನು ಬಿಟ್ಟುಕೊಡುವುದಿಲ್ಲ, ಅವರ ಬಲಪ್ರಯೋಗಕ್ಕೆ ಬಗ್ಗುವುದಿಲ್ಲ, ಎಂದು. ಅದನ್ನು ಶ್ರೀಮಾನ್ ವಿ. ಎಸ್. ಪಾಟೀಲರು, ಇವತ್ತಿನ ದಿವಸ ಹಿಂಸಾಕೃತ್ಯಕ್ಕೆ ನಾವು ಪ್ರಚೋದನೆ ಮಾಡುತ್ತಿದ್ದೇವೆ ಎಂದು ಅರ್ಥ ಬರುವ ಹಾಗೆ ಹೇಳಿದವು ಎಂದು ಉಲ್ಲೇಖ ಮಾಡಿದ್ದಾರೆ. ದೊಡ್ಡಮೇಟಿಯವರ ವಿಷಯ ಇದ್ದದ್ದು ಬೇರೆ. ಅವರು ಮಿಲಿಟರಿ ತಂದರೂ ಕೂಡ ಹೇಗೆ ಬ್ರಿಟಿಷರು ಜಲಿಯನ್‌ವಾಲಾ ಬಾಗ್ ಪ್ರದೇಶಕ್ಕೆ ಸೈನ್ಯವನ್ನು ತಂದಾಗ ಜನರು ತಮ್ಮಷ್ಟಕ್ಕೆ ತಾವೇ ಸ್ವಯಂಸ್ಫೂರ್ತಿಯಿಂದ ಬಂದು ಏನೊಂದೂ ಹಿಂಸೆಯನ್ನೂ ಮಾಡದೆ, ಯಾವ ರೀತಿ ಪ್ರಾಣವನ್ನು ತೆತ್ತರೋ ಅದೇ ರೀತಿಯಾಗಿ ಎಷ್ಟೇ ಕಷ್ಟ ಪರಿಸ್ಥಿತಿ ಬಂದರೂ, ಮಿಲಿಟರಿಯನ್ನು ತಂದು ಗುಂಡು ಹಾರಿಸಿದರೂ ನಮ್ಮ ಜಾಗದ ಮೇಲೆ ನಿಂತು ಪ್ರಾಣವನ್ನಾದರೂ ಕಳೆದುಕೊಳ್ಳುತ್ತೇವೆಯೇ ಹೊರತು ಹಿಮ್ಮೆಟ್ಟುವುದಿಲ್ಲ, ಅನ್ಯಾಯವನ್ನು ಸಹಿಸುವುದಿಲ್ಲ ಎಂದು ಶ್ರೀಮಾನ್ ದೊಡ್ಡಮೇಟಿಯವರು ಹೇಳಿದರು ಎನ್ನುವ ವಿಷಯವನ್ನು ನಾನು ಪುಷ್ಟೀಕರಿಸಬೇಕಾಗಿದೆ. ಪ್ರಶ್ನೋತ್ತರ ಕಾಲದಲ್ಲಿ ಶ್ರೀ ವಿ. ಎಸ್. ಪಾಟೀಲರು ಯಾರ ಅನ್ನವನ್ನು ಊಟ ಮಾಡುತ್ತಾರೆಯೋ ಅವರ ಬೆಂಬಲಿಗರಾಗುತ್ತಾರೆ ಎನ್ನುವ ಮಾತನ್ನು ಮರಾಠಿಯಲ್ಲಿ ಹೇಳಿದರು. ಅದೇ ರೀತಿ ಎಲ್ಲಿಯವರೆಗೆ ಕರ್ಣಾಟಕ ರಾಜ್ಯದಲ್ಲಿ ಅವರು ಇರುತ್ತಾರೆಯೋ ಅಲ್ಲಿಯವರೆಗೂ ಕೂಡ ಅದಕ್ಕೆ ನಿಷ್ಠೆ ಮತ್ತು ಸಹಾನುಭೂತಿ ತೋರತಕ್ಕದ್ದು ಯೋಗ್ಯ; ಅವರು ಏನು ಚುಚ್ಚು ಮಾತುಗಳನ್ನು ಆಡಿದ್ದಾರೆಯೋ ಅದಕ್ಕಿಂತ ಹೆಚ್ಚಿನದಾಗಿ ನಾವೂ ಹೇಳಬಹುದು. ಆದರೆ ಅದು ನಮ್ಮ ಮೂರ್ಖತನವನ್ನು ಪ್ರದರ್ಶನ ಮಾಡಿದ ಹಾಗೆ ಆಗುತ್ತದೆ. ಒಂದು ಕಿವಿ ಮಾತು ಹೇಳಬೇಕು ಎಂದರೆ, ಸಣ್ಣ ಪುಟ್ಟ ಹೊಂದಾಣಿಕೆ ಏನಿದೆಯೋ ಅದನ್ನು ಒಳ್ಳೆಯ ರೀತಿಯಿಂದ ಬಗೆಹರಿಸಿಕೊಳ್ಳೋಣ. ಇವತ್ತು ದೊಡ್ಡದಾದ ನಿಪ್ಪಾಣಿ, ಬೆಳಗಾಂ ಮುಂತಾದ ಪ್ರದೇಶಗಳನ್ನು ಯಾವ ರೀತಿಯಿಂದಲೂ ನಾವು ಬಿಟ್ಟು ಕೊಡಲಿಕ್ಕೆ ಸಾಧ್ಯವಿಲ್ಲ ಎಂದು ಒತ್ತಿ ಹೇಳಬೇಕಾಗಿದೆ. ಆದುದರಿಂದ ಈ ಗಡಿ ವಿಚಾರವಾಗಿ ಏನು ಹೇಳುತ್ತೇನೆ ಎಂದರೆ, ಯಾವುದೇ ತರಹ ಭಿನ್ನಾಭಿಪ್ರಾಯಗಳಿದ್ದರೂ ಕೂಡ ಅದಕ್ಕೆ ಸಂಬಂಧಪಟ್ಟ ಕಾಗದ ಪತ್ರಗಳನ್ನು ಪರಿಶೀಲಿಸಿ ಅದಕ್ಕೆ ಹೊಂದಾಣಿಕೆಯಾಗಬಹುದಾದ ರೀತಿಯಲ್ಲಿ ಕಾನೂನುಬದ್ಧವಾಗಿ ಸಣ್ಣಪುಟ್ಟ ಹೊಂದಾಣಿಕೆಯನ್ನು ಮಾಡಿಕೊಳ್ಳಬಹುದು ಎಂದು ಹೇಳುತ್ತೇನೆ. ನನ್ನ ಸ್ನೇಹಿತರು ಎಲ್ಲ ರೀತಿಯ ವಿಷಯಗಳನ್ನೂ ತಿಳಿಸಿದ್ದಾರೆ. ನಾನು ಆ ಗೊಡವೆಗೆ ಹೋಗದೆ ಈ ಏಕ ಸದಸ್ಯ ಆಯೋಗವನ್ನು ನೇಮಿಸುವುದು ಬಹಳ ತಪ್ಪು, ಈ ವಿಷಯವನ್ನು ಮುಂದೂಡಬೇಕೆಂದು ಹೇಳಿ ನನ್ನ ಭಾಷಣವನ್ನು ಮುಗಿಸುತ್ತೇನೆ.

Sri P. F. D'MELLOW (Nominated).—Mr. Speaker, Sir, when so much is already stated and when so much is already written on the border dispute between Maharashtra and Mysore. It may be asked why

(SRI P. F. D'MELLOW)

I should have anything more to say or add ? But, Sir, if I do not do so, I will be failing in my duty to the State of Mysore and to the citizens whom I represent. My fear arises of certain observations made by certain hon'ble Members of this House, who suggested that there can be only three approaches to this problem: that from the angle of the people of the border who believe that the solution lies in carving away the State and returning to Maharashtra; the other approach put forward by certain hon'ble members is that the solution lies in denying the claims of those who feel that certain areas must be returned to Maharashtra then, again, there was a proposal that there is a third approach and that is, by the State laying claim to areas in our neighbouring States.

Mr. Speaker, Sir, representing as I do, a minority, I feel that it would be very unfortunate the leaders of the two Governments who are shortly meeting, to discuss this matter, were to forget that there are the claims of other citizens of India who happen to have settled in those areas and who feel that there must be other criteria besides just language. Sir, so far as the minority living in these areas is concerned, we feel that the view point of the Mysore Government as set out in this little Hand-Book does represent what is fair and what eminently just. I would like to suggest that there must be some finality about this matter. It appears to my mind that the foreigners who are away from India will think that we are a very controversial people and a very confused people. While we speak and quite rightly too, that our frontieres, our borders with the neighbouring contries like Pakistan and China have been fixed regardless of all the disputes in the previous years, when our late Prime Minister Pandit Nehru said that wishes of the people must be respected, when we say frontiers of Pakistan and Kashmir are already fixed and the wishes of the people have been already determined, I fail to see why we should continue to allow ourselves the latitude that we apperently have because of some lacuna in the State Reorganisation Act.

Sir, I feel that it must be infuriating to our soldiers and air-men on the borders of India to be told that they must be prepared to lay down their lives in defence of the frontiers of India, when we ourselves claim to reopen these questions of our own borders whenever it pleases us or whenever political pressures are brought to bear. Sir, I have no fear if the two leaders are left to themselves, they will have a right approach to the problem because it is only a problem between two governments. The press report shows that the Bombay Congress Committee has now decided that there are other criteria than language and I feel there is a way to solve this problem. After all that is said and done and spoken in this House, I believe the correct attitude today will be not to tie the hands of either leaders who are to meet, by mandates and directions, but allow them the same freedom that we allow to others if it is to be decided that there must be a solution. Sir, I believe the safety of India and the State lies in the hands of these two leaders and as a Member of

the minority, I believe that we must leave it to them to come to conclusions which they consider is in the larger interest of India.

Sir, I say this because we have a very real share and very real interest in the development not only of the larger cities in our State but also little cities that are growing up on our borders. I have only one further observation to make and that is I may be forgiven if I refer to the very unfortunate references that were made yesterday to certain of our fighting forces. I would be failing in my duty if I do not do that since I am a representative of a very large unmber of Ex-Servicemen, being the Vice-President of the Mysore State Ex-Services Co-ordination League. Mr. Speaker, the expression 'mercenary' used when referring to Maharata Light Infantry is most unfortunate. So, regarding our fighting men, I would plead with Hon'ble Members to leave them out of our discussion. It is a very unpleasant thing to hear of references of the nature which I heard yesterday. I am sure nobody meant to say anything disparagingly about fighting soldiers.

Sir, when we see to day a large body of men, scientists, artistes and others leaving their own homes in search of avenues of enployment in other countries merely because the facilities are there, I think we must realise that those who take to soldiering as a prsfession do deserve the same consideration. In a few minutes' time, not very far from this Assembly, will be held a small ceremony where the disabled Goorka soldier will be presented with a wheeled Chair. The disability he suffers from was earned in the service of India. Mr. Speaker, he is a Goorkha and very likely a national of Nepal. He has fought for us and he has given much of his life for the country. Surely, the least we could do is to use expressions that do not sound as though he fights for the pay he receives from a foreign country. I say I feel very strongly that an attack is made on Ex-Service men aud soldiers. When I say that, I am quite sure the Members who used this expression in the heat of the moment did not mean anything disparaging. After all, mercenary cannot have any connotation or meaning it had when a few years ago we were a subject nation. With these remarks, I thank you for the oppartunity given to me.

† ಶ್ರೀ ಎ. ಕೃಷ್ಣ ಶೆಟ್ಟಿ (ಮಂಗಳೂರು-2)—ಅಧ್ಯಕ್ಷರೇ, ಈ ವಿಷಯದಲ್ಲಿ ಮಾತನಾಡುವಾಗ ಮೊಟ್ಟಮೊದಲು ಪ್ರತಿಯೊಬ್ಬರೂ ಗಡಿ ನೇಮಕ ಆಯೋಗಕ್ಕೆ ವಿರೋಧ ಸೂಚಿಸಿ ನಮ್ಮ ಕರ್ಣಾಟಕ ಪ್ರಾಂತದಲ್ಲಿ ಚಳುವಳಿ ನಡೆಸಿದವರಿಗೆ ವಂದನೆಯನ್ನು ಸಲ್ಲಿಸಬೇಕಾಗುತ್ತದೆ. ನಿಜವಾಗಿಯೂ ನಮ್ಮ ಕನ್ನಡ ಜನತೆಯ ಆಶೆಆಕಾಂಕ್ಷೆಗಳಿಗಾಗಿ ಚಳುವಳಿ ನಡೆಸಿದರೆಂಬುದು ವಿಚಾರ ಮಾಡಿದರೆ ಚೆನ್ನಾಗಿ ಗೊತ್ತಾಗುತ್ತದೆ. ಈ ಚಳುವಳಿಯು ಇನ್ನಷ್ಟು ಹರಡಿ ರಾಜ್ಯದಾದ್ಯಂತ ಹಬ್ಬಿ ಕನ್ನಡ ನಾಡಿನಿಂದ ಹೊರಗುಳಿದ ಪ್ರದೇಶಗಳನ್ನು ಪಡೆಯಲು ಅನುಕೂಲವಾಗುವ ಒಂದು ಸ್ಥಿತಿಗೆ ಬರುತ್ತಿರುವಾಗ ಅದನ್ನು ಮುರಿದುದಕ್ಕೆ ನಾನು ತುಂಬಾ ವಿಷಾದ ಪಡುತ್ತೇನೆ. ದಾವಣಗೆರೆ ಮತ್ತು ಹರಿಹರಗಳಲ್ಲಿ ಈ ಹೋರಾಟದಲ್ಲಿ ಪ್ರಾಣಗಳನ್ನು ತೆತ್ತ ಹುತಾತ್ಮರಿಗೆ ಶ್ರದ್ಧಾಂಜಲಿಯನ್ನರ್ಪಿಸಬೇಕಾದ್ದು ನಮ್ಮ ಪ್ರಥಮ ಕರ್ತವ್ಯ. ಏಕೆಂದರೆ, ಅವರು ಈ ಹೋರಾಟದಲ್ಲಿ ಅವರ ಪ್ರಾಣಗಳನ್ನು ತೆತ್ತುದು ನಮ್ಮ ಕನ್ನಡ ಜನತೆಗಾಗಿ. ಹಾಗೆ ಮಾಡುವಾಗ ಅವರದೇನೂ ಸ್ವಾರ್ಥವಿರಲಿಲ್ಲ. ಹಾಗಿರುವಾಗ ಕನ್ನಡ ಜನತೆಗಾಗಿ ಯಾವ ಉದ್ದೇಶಕ್ಕಾಗಿ ಆ ಹುತಾತ್ಮರು ಪ್ರಾಣ ಕೊಟ್ಟಿದ್ದಾರೋ ಆ ಉದ್ದೇಶವನ್ನು ನೆರವೇರಿಸಲು ಕನ್ನಡಿಗರಾದ ನಾವೆಲ್ಲಾ ಒಂದಾಗಿ ಹೋರಾಡಬೇಕಾಗುತ್ತದೆ. ನಾವೂ ಕೂಡ ಹಾಗೆಯೇ ಪ್ರಾಣವನ್ನು ಕೊಡಲು ಸಿದ್ಧರಿದ್ದೇವೆಂದು ಹೇಳಿ ಈ ಸಂದರ್ಭದಲ್ಲಿ ಪಣತೊಡುವುದು ಮತ್ತು ವಚನ ಕೊಡುವುದು ಅಗತ್ಯವಾಗಿದೆ ಎಂಬುದು ನನ್ನ ಬದವಾದ ಅಭಿಪ್ರಾಯ.

(ಶ್ರೀ ಎ. ಕೃಷ್ಣ ಶೆಟ್ಟಿ)

ಸ್ವಾಮಿ, ಭಾಷಾ ಪ್ರಕಾರ ಗಡಿಗಳಾಗಿ ಈಗಾಗಲೇ 10 ವರ್ಷಗಳು ಕಳೆದಿವೆ. ಈ ಸಮಯದಲ್ಲಿ ಹೊರಗಿನಿಂದ ಕೆಲವು ಭಾಗಗಳು ಬರುವುದಿದೆ ಎಂಬುದು ನಮಗೆ ಗೊತ್ತಿದೆ; ಆಂಧ್ರದಿಂದ ಬರುವುದಿದೆ, ತಮಿಳು ನಾಡಿನಿಂದ ಬರುವುದಿದೆ, ಕೇರಳದಿಂದ ಬರುವುದಿದೆ. ಯಾವಾಗಲಾದರೂ ನಮ್ಮ ಸರಕಾರ ಆ ಸರಕಾರಗಳಲ್ಲಿರುವ ಕನ್ನಡ ಜನರನ್ನು ನಮ್ಮ ರಾಜ್ಯಕ್ಕೆ ಸೇರಿಸಿಕೊಳ್ಳಬೇಕು. ಆ ಜವಾಬ್ದಾರಿ ನಮ್ಮ ಸರಕಾರದ ಮೇಲಿದೆ. ಇದು ಸರಕಾರದ ಕರ್ತವ್ಯ. ಸರಕಾರ ಬರೀ ಜನರನ್ನು ಆಳಲು ಆರಿಸಿ ಬಂದಿಲ್ಲ, ಕನ್ನಡ ಭಾಷೆಯಮೇಲೆ ಒಂದು ಪ್ರಾಂತವಾಗುವಾಗ ಕನ್ನಡ ಭಾಷೆ ಮಾತನಾಡುವವರು ಯಾವ ಪ್ರದೇಶದಲ್ಲಿದ್ದಾರೆ ಅವರನ್ನು ನಮ್ಮ ಕನ್ನಡ ರಾಜ್ಯಕ್ಕೆ ತರುವ ಜವಾಬ್ದಾರಿ ವಹಿಸಿ ಕರ್ತವ್ಯ ನಿರ್ವಹಿಸಬೇಕಾಗುತ್ತದೆ. ಆ ಕರ್ತವ್ಯವನ್ನು ಇಷ್ಟರವರೆಗೆ ಅವರು ಮಾಡಿಲ್ಲ. ಈ ಕರ್ತವ್ಯವನ್ನು ಮಾಡದಿರುವುದರಿಂದ ಕನ್ನಡಗರಿಗೆ ನಮ್ಮ ಸರಕಾರ ದ್ರೋಹಮಾಡಿದೆ. ಎರಡನೆಯದಾಗಿ, ಈ ಪ್ರಶ್ನೆ ಎತ್ತುವುದಾದರೆ ಯಾವಾಗ ? ಕಾಸರಗೋಡಿದೆ, ಮಡಕಸಿರಾ ಇದೆ, ತಮಿಳುನಾಡಿನಲ್ಲಿ ನಮಗೆ ಬರುವುದಿದೆ ಎಂದು ಹೇಳಬೇಕಾದ್ದು ಯಾವಾಗ ? ಯಾವಾಗ ಮಹಾರಾಷ್ಟ್ರದವರು ಬೆಳಗಾಂ, ನಿಪ್ಪಾಣಿ, ಕಾರವಾರ ಮುಂತಾದ ಭಾಗಗಳು ತಮಗೆ ಸೇರಬೇಕೆಂದು ಗಲಾಟೆ ಮಾಡಿದರೋ, ಯಾವಾಗ ಆ ಪ್ರಶ್ನೆ ಬಂತೋ ಅಗಲೇ ನಾವೂ ಕೂಡ ನಮಗೆ ಇಂಥ ಪ್ರದೇಶಗಳು ಬರಬೇಕಾಗಿವೆ ಎಂದು ಒತ್ತಾಯ ಮಾಡಬೇಕಾಗಿತ್ತು. ಇದನ್ನು ಚದುರಂಗದ ಆಟದ ಕಾಯಿಗೆ ಹೋಲಿಕೆ ಮಾಡಬಹುದು. ಬೇರೆ ಪ್ರಾಂತಗಳಲ್ಲಿರುವ ಕನ್ನಡದ ಭಾಗಗಳನ್ನು ಪಡೆಯಲು ಬೇರೆ ರಾಜ್ಯಗಳವರು ನಮ್ಮ ರಾಜ್ಯದಲ್ಲಿರುವ ಭಾಗಗಳನ್ನು ಪಡೆದುಕೊಳ್ಳಲು ಮಾಡಿದ ಪ್ರಯತ್ನದಂತೆ ನಮ್ಮ ಸರಕಾರ ಬೇಕಾದ ಸಹಾಯಮಾಡಿ ಸರಿಯಾದ ಕೆಲಸಮಾಡಿಲ್ಲ. ಇದು ನಾವು ಮುಖ್ಯವಾಗಿ ಗಮನಿಸಬೇಕಾದ ವಿಷಯ. ಯಾವಾಗಲೂ ನಮ್ಮದು ಡಿಫೆನ್ಸಿವ್, ಅಫೆನಿಕ್ಸ್ ಕೇಸಲ್ಲ. ಈಗ ನಮಗೆ ಬರಬೇಕಾಗಿರುವುದರ ಪ್ರಶ್ನೆ ತೆಗೆದುಕೊಳ್ಳಬೇಕು. ನಮ್ಮ ಪ್ರಶ್ನೆಗೆ ಸಂಬಂಧಪಟ್ಟಂತೆ ನಾವು ತಕ್ಕಷ್ಟು ಹೋರಾಟ ಮಾಡಿರುವುದಿಲ್ಲ. ಹಾಗಿ ಮಾಡದಿರುವುದರಿಂದ ಕನ್ನಡನಾಡಿಗೆ ಯಾವ ಪ್ರದೇಶಗಳು ಬರಬೇಕೋ ಆ ಭಾಗಗಳನ್ನು ಪಡೆದುಕೊಳ್ಳುವುದಕ್ಕೆ ಅವಕಾಶವಾಗಿಲ್ಲ. ಅದಕ್ಕಿಂತ ಹೆಚ್ಚಾಗಿ ನಮ್ಮಲ್ಲಿರುವ ಭಾಗಗಳನ್ನು ಕಳೆದುಕೊಳ್ಳುವುದಕ್ಕೆ ಅವಕಾಶವಾಗಿದೆ. ಇದನ್ನು ಕನ್ನಡಿಗಳು ಕೇಳುವ ಅಗತ್ಯವುಂಟು.

ಇನ್ನೊಂದು ವಿಷಯ. ಈ ವಿಚಾರ ಪಾರ್ಲಿಮೆಂಟಿನಲ್ಲಿ ಬರದೆ ಕಾಂಗ್ರೆಸ್ ವರ್ಕಿಂಗ್ ಕಮಿಟಿಯಲ್ಲೇಕೆ ಬಂತು ಎಂದು ಪ್ರಶ್ನೆಮಾಡಬೇಕಾಗಿದೆ. ಈ ಗಡಿ ಪ್ರಶ್ನೆ, ಮೈಸೂರು ಮತ್ತು ಮಹಾರಾಷ್ಟ್ರಕ್ಕೆ ಸಂಬಂಧಿಸಿದ ಈ ವ್ಯವಹಾರ ಪ್ರಸ್ತಾಪಮಾಡುವಾಗ ಗೋವಿಂದವಲ್ಲಭಪಂತರು ಹೇಳಿದ ಅಂಶವನ್ನೇಕೆ ಹೇಳುವುದಿಲ್ಲ ? ಅವರು ಇದು ಬರೀ ಒಂದು ಪಕ್ಷದ ಪ್ರಶ್ನೆಯಲ್ಲ, ಜನತೆಯ ಪ್ರಶ್ನೆ, ಎಲ್ಲಾ ಪಕ್ಷ ಪಂಗಡಗಳ ಪ್ರಶ್ನೆ ಇದು ಎಂದು ಹೇಳಿದ್ದಾರೆ. ನಮಗೆ ಗಡಿ ವಿವಾದಕ್ಕೆ ಸಂಬಂಧಪಟ್ಟ ಅಂಶಗಳನ್ನೊಳಗೊಂಡಿರುವ ಪುಸ್ತಕವನ್ನು ಒದಗಿಸುವುದರಲ್ಲಿ ಒಂದನೆಯ ಪುಟದಲ್ಲಿ ಗೋವಿಂದವಲ್ಲಭ ಪಂತರು ಸೂಚಿಸಿದ್ದಾರೆ.

This is what Sri Govind Ballabh Pant said in Parliament :—

"A statute that has been passed by Parliament that carried with it not only the support of many members of a particular party, but virtually of the entire House, deserves still greater respect than an ordinary Act that may be passed now and then."

Mr. DEPUTY SPEAKER.—The House will now adjourn for tea and will meet again at 10-30 A.M.

The House adjourned for Recess at Ten of the Clock and re-assembled at Thirty Minutes past Ten of the Clock.

[MR. DEPUTY SPEAKER in the Chair].

ಶ್ರೀ ಎ. ಕೃಷ್ಣಶೆಟ್ಟಿ.—ಈಗ ಪಾರ್ಲಿಮೆಂಟಿನ ಮುಂದೆ ಈ ವಿಷಯ ಬರಬೇಕಾಗಿತ್ತು ಮೊದಲು ಕಾಂಗ್ರೆಸ್ ವರ್ಕಿಂಗ್ ಕಮಿಟಿಯಲ್ಲಿ ಬಂದು ಆಮೇಲೆ ಆಖೈರು ತೀರ್ಮಾನಕ್ಕೆ ಪಾರ್ಲಿಮೆಂಟ್ ಮುಂದೆ ಬರುವಂತಹ ಪರಿಸ್ಥಿತಿ ಬಂದಿದೆ. ಇದು ಒಂದು ಪಾರ್ಟಿ ಪ್ರಶ್ನೆಯಲ್ಲ, ಇಡೀ ರಾಜ್ಯದ ಜನತೆಯ ಪ್ರಶ್ನೆ. ಪ್ರತಿಯೊಬ್ಬರ ನ್ಯಾಯವೂ ಕೂಡ ಇದರಲ್ಲಿ ಸೇರಿದೆ. ಭಾಷೆ, ಸಂಸ್ಕೃತಿ, ಸದಾಚಾರಗಳು, ಬಾಕಿ ನಡವಳಿಕೆಗಳು, ಸಮಾಜಿಕ ವ್ಯವಹಾರ ಇದೆಲ್ಲಾ ಬರುತ್ತದೆ. ಹೀಗಿರುವಾಗ ಇದು ಒಂದು ಪಾರ್ಟಿ ಪ್ರಶ್ನೆಯಾಗುವುದಿಲ್ಲ. ಹೀಗೆ ಬೇರೆ ರಾಜ್ಯದಲ್ಲಿ ಇದನ್ನು ಯಾವ ರಾಜ್ಯದಲ್ಲೂ ಮಾಡಲಿಲ್ಲ. ಎರಡನೆಯದಾಗಿ, ಮುಂಬೈ ತೆಗೆದುಕೊಳ್ಳಿ ಅವರು ಇದನ್ನು ಒಂದು ಜನತೆಯ ಪ್ರಶ್ನೆಯನ್ನಾಗಿ ಮಾಡಿದರು, ವಿರೋಧ ಪಕ್ಷದವರನ್ನು, ಬಾಕಿ ಜನರೆಲ್ಲರನ್ನೂ ವಿಶ್ವಾಸಕ್ಕೆ ತೆಗೆದುಕೊಂಡು, ಹೆಚ್ಚಿನ ಶಕ್ತಿಯನ್ನು ಪಡೆದುಕೊಂಡು ಈ ಪ್ರಶ್ನೆಯನ್ನು ಮುಂದೆ ತಂದರು. ಅವರು ಈ ಪ್ರಶ್ನೆಯನ್ನು ನೋಡುವುದು ಬರೀ ಒಂದು ಪಾರ್ಟಿಯ ಪ್ರಶ್ನೆಯ ರೀತಿಯಲ್ಲಿ ಅಲ್ಲ. ನಮ್ಮಲ್ಲಿ ಬರೀ ಒಂದು ಪಾರ್ಟಿಯ ಪ್ರಶ್ನೆಯ ರೀತಿಯಲ್ಲಿ ನೋಡಿದ್ದರಿಂದ ನಮಗೆ ಬಹಳ ದೊಡ್ಡ ತೊಂದರೆಯಾಗಿದೆ. ನಾವು ಯಾವಾಗಲೂ ಈ ಪ್ರಶ್ನೆಯನ್ನು ಇದು ಬಂದಾಗ ಅಫೆನ್ಸ್‌ನಲ್ಲಿ ಇಲ್ಲದೇ, ಡಿಫೆನ್ಸ್‌ನಲ್ಲಿ ಇದ್ದದ್ದೇ ಆದರೆ, ಲೆನಿನ್ ಅವರು ಹೇಳುತ್ತಾರೆ ಏನೆಂದರೆ: ಯಾವ ಒಂದು ನ್ಯಾಯ ಲಭಿಸಲಿಕ್ಕೆ ಇದೆಯೋ ಅಂತಹ ನ್ಯಾಯದಲ್ಲಿ ನಾವು ಹಿಂದೆ ಬಿದ್ದರೆ ಅದು ಸೋಲಿಲ್ಲದೇ, ಪ್ರಯೋಜನಕ್ಕೆ ಬರಲಿಕ್ಕೆ ಇಲ್ಲ ಅಂತ. ಆದ್ದರಿಂದ ಈ ಸಂದರ್ಭದಲ್ಲಿ ನಮ್ಮ ಸರ್ಕಾರದವರು ವಿರೋಧ ಪಕ್ಷಗಳನ್ನು ವಿಶ್ವಾಸಕ್ಕೆ ತೆಗೆದುಕೊಂಡು, ಡಿಫೆನ್ಸ್‌ನಿಂದ ಅಫೆನ್ಸಿಗೆ ಹೋಗಬೇಕು. ಅದು ಹೇಗೆಂದರೆ, ಒಂದು ಹೆಜ್ಜೆ ಬಿದ್ದಿದ್ದೇವೆ ಇನ್ನು ಎರಡು ಹೆಜ್ಜೆ ಮುಂದೆ ಹೋಗಬೇಕು. ಏಕೆಂದರೆ ನಮಗೆ ಸೇರಿದ್ದ 5 ಎಕರೆ ಪ್ರದೇಶವನ್ನು ಮೊನ್ನೆ ಕೋಲಾರ ಜಿಲ್ಲೆಯಿಂದ ಆಂಧ್ರ ಪ್ರದೇಶಕ್ಕೆ ಬಿಟ್ಟು ಕೊಟ್ಟಿದ್ದೇವೆ. ನೀಲಗಿರಿ ಪ್ರದೇಶವನ್ನು ಬಿಟ್ಟು ಕೊಟ್ಟಿದ್ದೇವೆ. ಇದು ವ್ಯಕ್ತಿಯ ಪ್ರಶ್ನೆಯಲ್ಲ, ವ್ಯಕ್ತಿಯ ಪ್ರತಿಷ್ಠೆಯ ಪ್ರಶ್ನೆಯಲ್ಲ. ಜನತೆಯ ಪ್ರಶ್ನೆ, ಹೀಗಿರುವಾಗ ನಾವು ನಮ್ಮ ನಿಲುವನ್ನು ಹೇಳಬೇಕಾಗುತ್ತದೆ. ನಮ್ಮನ್ನು, ವಿರೋಧ ಪಕ್ಷದವರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಮೊದಲು ಕನ್ನಡ ನಾಡಿಗೆ ಬರುವ ಪ್ರದೇಶವನ್ನು ತೀರ್ಮಾನ ಮಾಡಿ ಮುಗಿಸೋಣ. ಏಕೆಂದರೆ, ನಮಗೆ ಬಹಳ ದೊಡ್ಡ ಅನ್ಯಾಯವಾಗಿದೆ, ಕಾಸರಗೋಡಿನ ಮಟ್ಟಿಗೆ ಅನ್ಯಾಯವಾಗಿದೆ. ಮೊನ್ನೆ ಮಾಡಿದ ಠರಾವಿನವೊಳಗೆ ಕಾಸರಗೋಡಿನ ಪ್ರಶ್ನೆ ಸಿಕ್ಕಿಸಿದ್ದಾರೆ. ಶ್ರೀಮಾನ್ ವಿ. ಪಿ. ನಾಯಕ್ ಅವರು ಮಾತನಾಡುವಾಗ, ಅವರನ್ನು ಕರೆದಿದ್ದೇವೆ, ನಮ್ಮ ಮುಖ್ಯ ಮಂತ್ರಿಗಳು ಅವರೊಡನೆ ಮಾತನಾಡುವಾಗ ಕಾಸರಗೋಡಿನ ಪ್ರಶ್ನೆಯನ್ನು ತೆಗೆದು ಹಾಕುವುದಕ್ಕೆ ಅವರಿಗೆ ಹೇಗೆ ಅಧಿಕಾರ ಬರುತ್ತದೆ? ಇದೇ ಹೊತ್ತಿನಲ್ಲಿ ಇನ್ನೊಬ್ಬರು ಪಾಪ್ಯುಲರ್ ಗವರ್ನ್ಮೆಂಟ್, ಜನತಾ ಸರ್ಕಾರ ಬರುವವರೆಗೂ ಈ ಪ್ರಶ್ನೆಯನ್ನು ಒಪ್ಪುವುದಿಲ್ಲ ಎಂದು ಹೇಳಿದರು. ಹೀಗಿರುವಾಗ ವಿ. ಪಿ ನಾಯಕರೊಡನೆ ಚರ್ಚೆ ಮಾಡುವುದಕ್ಕೆ ಸಂದರ್ಭ ಎಲ್ಲಿ ಬರುತ್ತದೆ? ಹಾಗಾದರೆ ಬರೇ ಮಹಾರಾಷ್ಟ್ರ ಪ್ರಶ್ನೆ ಮತ್ತು ಮೈಸೂರಿನ ಪ್ರಶ್ನೆ ಇದನ್ನು ಮಾತ್ರ ತೆಗೆದುಕೊಂಡು ಚರ್ಚೆ ಮಾಡಿದ್ದೇ ಆದರೆ ನಮಗೆ ನಿಜವಾಗಿಯೂ ಬಹಳ ದೊಡ್ಡ ಅನ್ಯಾಯವಾಗುತ್ತದೆ, ನಮ್ಮ ರಾಜ್ಯಕ್ಕೆ, ಕನ್ನಡಿಗರಿಗೆ ಅನ್ಯಾಯವಾಗುತ್ತದೆ ಆದ್ದರಿಂದ ನಾವು ಆ ಪ್ರಶ್ನೆಯನ್ನು ತೆಗೆದುಕೊಳ್ಳಲಿಕ್ಕೆ ಅವಕಾಶ ಇರದೇ ಇದ್ದದ್ದನ್ನು ಬಿಟ್ಟು ಬಿಟ್ಟು ಯಾವುದು ಬರುತ್ತದೆ ಅದನ್ನು ತೆಗೆದುಕೊಳ್ಳತಕ್ಕ ಸ್ಥಿತಿಗೆ ಬಂದರೆ ಬಹಳ ದೊಡ್ಡ ಅನಾಹುತಕ್ಕೆ ಈಡಾಗುತ್ತೇವೆ. ಇದನ್ನು ತಪ್ಪಿಸುವುದು ಅಗತ್ಯವುಂಟು ಎಂದು ಸರ್ಕಾರದವರಿಗೆ ಈ ಸಂದರ್ಭದಲ್ಲಿ ಎಚ್ಚರಿಕೆ ಕೊಡಲಿಕ್ಕೆ ತಯಾರಾಗಿದ್ದೇನೆ.

ಮುಖ್ಯವಾಗಿ ಮಹಾರಾಷ್ಟ್ರ ಬಂಧುಗಳು ಮತ್ತು ಎಂ. ಈ. ಎಸ್. ಅವರಿಗೆ ನಾನು ಹೇಳುವುದೇನೆಂದರೆ, ನಾವು ಸಹೋದರರ ರೀತಿಯಿಂದ, ಸೋದರ ಭಾವನೆಯಿಂದ ವರ್ತಿಸಬೇಕು, ನಾವೆಲ್ಲರೂ ಹಿಂದೂಸ್ಥಾನದವರು ಮೊದಲು, ನಂತರ ಬಾಕಿ ಎಲ್ಲಾ ಬರುತ್ತದೆ. ಹತ್ತು ವರ್ಷಕಾಲದಿಂದ ಇಲ್ಲೇ ಇದ್ದೇವೆ. ಹೀಗಿರುವಾಗ ಕನ್ನಡ ನಾಡಿಗೆ ಅನ್ಯಾಯವಾಗುವುದನ್ನು ತಪ್ಪಿಸಲಿಕ್ಕೆ ಅವಕಾಶ ಮಾಡಿಕೊಡಬೇಕು, ಅವಕಾಶ ಮಾಡಿಕೊಟ್ಟು ಈ ಪ್ರಶ್ನೆಯನ್ನು ನೋಡಬೇಕು. ಬಳ್ಳಾರಿ ಬರಲಿಕ್ಕೆ ಸಹಾಯ ಮಾಡಿದ್ದೀರಿ, ಇನ್ನೂ ಇದೇ ರೀತಿಯಲ್ಲಿ ಇತರ ಸಹಾಯಗಳನ್ನೂ ಮಾಡಿದ್ದೀರಿ. ನಿಮ್ಮ ಪ್ರಯತ್ನ ಇದ್ದರೆ ಕನ್ನಡ ನಾಡಿಗೆ ಯಾವ ಪ್ರದೇಶ ಬರಲಿಕ್ಕೆ ಉಂಟೋ ಅದನ್ನು ಬರುವ ಹಾಗೆ ಮೊಟ್ಟಮೊದಲು ಮಾಡಬೇಕು. ಸರ್ಕಾರ ಕೂಡ ಈ ಪ್ರಶ್ನೆಯನ್ನು ತೆಗೆದುಕೊಂಡು ಪ್ರತಿ ಪಕ್ಷದವರನ್ನು, ವಿರೋಧ ಪಕ್ಷದವರನ್ನು ಸಹಾಯಕ್ಕೆ ತೆಗೆದುಕೊಂಡು, ವಿಶ್ವಾಸಕ್ಕೆ ತೆಗೆದುಕೊಂಡು ಇದನ್ನು ಮೊದಲು ಬಗೆಹರಿಸಬೇಕೆಂದು ಹೇಳುತ್ತೇನೆ.

(ಶ್ರೀ ಎ. ಕೃಷ್ಣಶೆಟ್ಟಿ)

ಈ ದಿವಸ ಆ ಕಾಸರಗೋಡಿನ ಪ್ರಶ್ನೆ ಈ ಮಟ್ಟ ಮುಟ್ಟಿರುವುದನ್ನು ನೋಡಿದರೆ ನಿಜವಾಗಿಯೂ ನನಗನಿಸುತ್ತಿದೆ—ಯಾವಾಗ ಮಹಾರಾಷ್ಟ್ರದವರು ಕನ್ನಡ ರಾಜ್ಯದಲ್ಲಿ ಕೆಲವು ಭಾಗಗಳನ್ನು ಕೇಳುವುದಕ್ಕೆ ಮುಂದೆ ಬಂದರೋ ಆಗ ಅವರ ಒಂದು ಪ್ರಶ್ನೆ ಉದ್ಭವಿಸಿದುದರಿಂದ ಈ ಕಾಸರಗೋಡಿನ ಪ್ರಶ್ನೆಯೂ ಬಂದಿತೇ ವಿನಾ ಇದನ್ನೇ ಪ್ರತ್ಯೇಕವಾಗಿ ಕೇಂದ್ರ ಸರ್ಕಾರದವರು ಮುಂದೆ ತರಬೇಕೆಂಬ ಆಲೋಚನೆ ನಮ್ಮ ಸರ್ಕಾರಕ್ಕಿರಲಿಲ್ಲ ಎಂದು ಹೇಳಬಹುದು. ಕಾಸರಗೋಡಿನ ವಿಚಾರವನ್ನೇ ಪ್ರತ್ಯೇಕವಾಗಿ ತರುವುದಕ್ಕೆ ನಮ್ಮ ಸರ್ಕಾರಕ್ಕೆ ಅವಕಾಶವಿತ್ತು. ಅದು ಹೇಗೆಂದರೆ, ಇತ್ತೀಚೆಗೆ ನಡೆದ ಚುನಾವಣೆಗಳ ಕಾಲದಲ್ಲಿ ನಮ್ಮ ಮುಖ್ಯ ಮಂತ್ರಿಗಳು ದಕ್ಷಿಣ ಕನ್ನಡ ಜಿಲ್ಲೆಯ ಪ್ರವಾಸವನ್ನು ಕೈಗೊಂಡು ಅಲ್ಲಿಗೆ ಬಂದ್ದಾಗ ಅಲ್ಲಿರತಕ್ಕ ಜನರೆಲ್ಲಾ ಈ ಪ್ರಶ್ನೆಯನ್ನು ಮೊದಲು ತೀರ್ಮಾನ ಮಾಡಬೇಕೆಂದು ಅವರಿಗೆ ಮನವಿಗಳನ್ನು ಮಾಡಿಕೊಳ್ಳಲಾಗಿತ್ತು. ಅಲ್ಲಿಯಜನರೂ ಸಹಾ ಇದನ್ನು ಪದೇ ಪದೇ ಎಚ್ಚರಿಸುತ್ತಲೇ ಇದ್ದರು. ಆದಾಗ್ಯೂ ಇದನ್ನು ನಮ್ಮ ಸರ್ಕಾರ ಇಲ್ಲಿಯವರೆಗೂ ತೀರ್ಮಾನ ಮಾಡದೆ ಇದನ್ನು ಹಾಗೇ ಹಿಂದಕ್ಕೆ ತಳ್ಳಿದ್ದರು. ನಾನು ಈ ದಿವಸ ಇಲ್ಲಿರತಕ್ಕ ರಿಪೋರ್ಟನ್ನು ನೋಡುವುದಾದರೆ ನಮ್ಮ ಕರ್ಣಾಟಕದಲ್ಲಿ ಬೆಳಗಾಂನಲ್ಲಿ ಕರ್ಣಾಟಕ ಲಿಬರಲ್ ಎಜುಕೇಷನ್ ಸೊಸೈಟಿ ಎಂಬ ಒಂದು ಸಂಸ್ಥೆ ಇದೆ. ಆದರೆ ಆ ಕಾಸರಗೋಡಿನಲ್ಲಿ ಇಂಥ ಯಾವ ಸೊಸೈಟಿಯೂ ಇಲ್ಲ. ಬೆಳಗಾಂನಲ್ಲಿಗತಕ್ಕ ಸಂಸ್ಥೆಯ ಮೊದಲಿನ ಹೆಸರು ಕರ್ಣಾಟಕ ಲಿಂಗಾಯತ್ ಎಜುಕೇಷನ್ ಸೊಸೈಟಿ ಎಂದು ಇದ್ದುದನ್ನು ಇತ್ತೀಚೆಗೆ ಲಿಬರಲ್ ಎಜುಕೇಷನ್ ಸೊಸೈಟಿ ಎಂಬುದಾಗಿ ಬದಲಾವಣೆ ಮಾಡಿದ್ದಾರೆ. ಇಂಥ ಒಂದು ಮಠ ಅಥವಾ ಒಂದು ಸೊಸೈಟಿ ಆ ಕಾಸರಗೋಡಿನಲ್ಲಿದ್ದರೆ ಈ ಕಾಸರಗೋಡಿನ ಪ್ರಶ್ನೆಗೂ ಒಂದು ಪ್ರಾಶಸ್ತ್ಯ ಬರುತ್ತಿತ್ತು. ಅಂಥಾದ್ದು ಅಲ್ಲಿಲ್ಲದ ಕಾರಣ ಅದಕ್ಕೆ ಪ್ರಾಮುಖ್ಯತೆ ಇಲ್ಲಿಯವರೆಗೂ ಬಂದಿರಲಿಲ್ಲ. ಈಗ ಮಹರಾಷ್ಟ್ರದ ಪ್ರಶ್ನೆ ಉದ್ಭವವಾದ್ದರಿಂದ ಇದು ಮುಂದೆ ಬರಲಿಕ್ಕೆ ಅವಕಾಶವಾಯಿತು. ನಾನು ಈ ಪ್ರಶ್ನೆಗೆ ಒಂದು ಪ್ರಾಶಸ್ತ್ಯವನ್ನು ಏಕೆ ಕೊಡಬೇಕು ಎಂದು ಹೇಳುತ್ತಿದ್ದೇನೆಂದರೆ—ಆ ಪ್ರದೇಶದಿಂದ ಇಲ್ಲಿಗೆ ಎಷ್ಟು ಜನ ಸದಸ್ಯರು ಬಂದಿದ್ದಾರೆಂಬುದನ್ನು ನೋಡಲಿ, ಅಷ್ಟೇ ಅಲ್ಲದೆ ಅಲ್ಲಿಯ ಜನರೆಷ್ಟು ಮಂದಿ ಇಲ್ಲಿಗೆ ಬಂದು ಕಂಟ್ರಾಕ್ಟ್ ಇತ್ಯಾದಿ ಕೆಲಸಗಳನ್ನು ನಡೆಸುತ್ತಿದ್ದಾರೆ ಎಂಬುದನ್ನು ನೋಡಿದರೆ ಕಾಸರಗೋಡು ನೇರವಾಗಿ ಕನ್ನಡ ರಾಜ್ಯಕ್ಕೆ ಸೇರಬೇಕು ಎಂಬುದು ಎದ್ದು ಕಾಣುತ್ತದೆ. ಅಷ್ಟಿದ್ದರೂ ಆ ಭಾಗವನ್ನು ಕನ್ನಡ ರಾಜ್ಯಕ್ಕೆ ಸೇರಿಸಿಕೊಳ್ಳಲು ನಮ್ಮ ಸರ್ಕಾರದವರಿಗೆ ಇಲ್ಲಿಯವರೆಗೂ ಸಾಧ್ಯವಾಗಿಲ್ಲ. ಇದು ನಮ್ಮ ಸರ್ಕಾರದ ಅಲಕ್ಷ್ಯಮನೋಭಾವ ಮತ್ತು ಅದಕ್ಷತೆಯನ್ನು ತೋರಿಸುತ್ತದೆ. ಆದರೆ ಈ ದಿವಸ ಆ ಕಾಸರಗೋಡಿನ ಪ್ರಶ್ನೆಯನ್ನು ಈಗ ನೇಮಕ ಆಗಲಿರುವ ಆಯೋಗದಲ್ಲಿ ಅಡಕ ಮಾಡಿದ್ದರೂ ಅಲ್ಲಿಯ ಗೌರ್ನರ್ ಅವರು ಅಲ್ಲಿರತಕ್ಕ ಜನರನ್ನು ಕರೆದು ಅವರ ಅಭಿಪ್ರಾಯವೇನು ಎಂಬುದನ್ನು ತಿಳಿದು ಸಹಕಾರ ನೀಡಬಹುದಾಗಿತ್ತು, ಇದೇನೂ ಒಂದು ಪಾರ್ಟಿಯ ಪ್ರಶ್ನೆಯಲ್ಲ, ಅಲ್ಲಿನ ಎಲ್ಲಾ ಜನರನ್ನೂ ಕರೆದು ಒಂದು ತೀರ್ಮಾನ ತೆಗೆದುಕೊಳ್ಳಬಹುದಾಗಿತ್ತು. ಆದರೆ ಅವರು ಅದನ್ನು ಮಾಡಲಿಲ್ಲ. ಈ ದಿವಸ ಆಯೋಗದ ನೇಮಕದ ಪ್ರಶ್ನೆಯೇನಿದೆ ಅದು ಬರೀ ಒಂದು ಕಾಂಗ್ರೆಸ್ ಸಂಸ್ಥೆಗೆ ಸಂಬಂಧಪಟ್ಟ ಪ್ರಶ್ನೆಯಲ್ಲ. ಅದು ದೇಶದಲ್ಲಿರತಕ್ಕ ಇಡೀ ಜನರಿಗೆ ಸೇರಿದಂಥ ಪ್ರಶ್ನೆ. ಆದಕಾರಣ ಆದರ ಬಗ್ಗೆ ಓಟನ್ನು ಪಡೆಯುವಾಗ ಕಾಂಗ್ರೆಸ್ಸಿನವರು ತಮ್ಮ ಓಟನ್ನು ಸ್ವತಂತ್ರವಾಗಿ ಮತ ನೀಡತಕ್ಕ ಅವಕಾಶವನ್ನು ಕೊಡಬೇಕೆಂಬ ಅಂಶವನ್ನು ನಾವೀಗ ವಿಚಾರ ಮಾಡಬೇಕಾಗಿದೆ. ಈ ವಿಚಾರದಲ್ಲಿ ಒಂದು ಫ್ರೀ ಬ್ಯಾಲೆಟ್ಟನ್ನು ತೆಗೆದುಕೊಳ್ಳುವುದು ಬಹಳ ಅಗತ್ಯ ಎಂದು ನಾನು ತಮ್ಮಲ್ಲಿ ಬಹಳ ಕಳಕಳಿಯಿಂದ ಕೇಳಿಕೊಳ್ಳುತ್ತೇನೆ. ಇದರ ಬಗ್ಗೆ ಓಟನ್ನು ಸ್ವತಂತ್ರವಾಗಿ ನೀಡತಕ್ಕ ಅವಕಾಶ ಎಲ್ಲರಿಗೂ ಇರಬೇಕು ಎನ್ನುವುದು ನನ್ನ ಆಶೆ. ನಾವು ಈ ದಿವಸ ಆ ನೇಮಕವಾಗಲಿರುವ ಏಕ ಸದಸ್ಯ ಆಯೋಗವನ್ನು ವಿರೋಧಿಸುತ್ತಿರುವುದಾದರೂ ಏಕೆ ? ಅದಕ್ಕೆ ಕಾರಣವೇನು ? ಅದರ ಸ್ವರೂಪವನ್ನು ನೋಡಿದರೆ ಯಾರಾದರೂ ಆ ಸ್ಥಾನಕ್ಕೆ ಬರತಕ್ಕವರು ನಾಳೆ ಯಾರದಾದರೂ ಒತ್ತಾಯಕ್ಕೆ ಬಲಿಬೀಳಬಹುದು ; ಅಥವಾ ಬಿದ್ದಾರು ಅನ್ನುವುದೇ ಆಗಿದೆ. ಆದರೆ ಇಂಥ ಒಂದು ಆಯೋಗದ ಕಾರ್ಯವ್ಯಾಪ್ತಿಯೇನು ಎಂಬುದನ್ನು ನಮ್ಮ ಪಾರ್ಲಿಯಮೆಂಟು ಇದುವರೆಗೆ ತಿರ್ಮಾನ ಮಾಡಿದ್ದರೆ ಅಂಥ ಆಯೋಗವನ್ನು ನಾವು ವಿರೋಧಿಸುವುದಕ್ಕೆ ಅವಕಾಶವಾಗುತ್ತಿರಲಿಲ್ಲ. ಈಗಲಾದರೂ ನಮ್ಮ ಸರ್ಕಾರದವರು ನಮ್ಮ ಕನ್ನಡ ರಾಜ್ಯಕ್ಕೆ ಬರಬೇಕಾಗಿರತಕ್ಕ ಭಾಗಗಳು ಯಾವು ಯಾವುವು ಎಂಬುದನ್ನು ತೀರ್ಮಾನ ಮಾಡಲು ಆಡಳಿತಪಕ್ಷ, ಇದು ಆ ಪಕ್ಷ ಈ ಪಕ್ಷ ಎಂಬ ಭಾವನೆಯನ್ನು ಬಿಟ್ಟು ಇದು ದೇಶದ ಇಡೀ ಜನರ ಪ್ರಶ್ನೆಯೆಂಬುದಾಗಿ ಭಾವಿಸಿ ಎಲ್ಲಾ ಪಕ್ಷಗಳನ್ನೂ ತನ್ನ ವಿಶ್ವಾಸಕ್ಕೆ ತೆಗೆದುಕೊಂಡು ನಮಗೆ ಬರಬೇಕಾಗಿರುವ ಕನ್ನಡ ಭಾಗಗಳು ನಮಗೆ ಮೊದಲು ಬರುವಂತೆ ಮಾಡತಕ್ಕಂಥ ಒಂದು ಉಚ್ಚಮಟ್ಟದ ಸಮಿತಿಯನ್ನು ನೇಮಕ

ಮಾಡಬೇಕೆಂದೂ ಮತ್ತು ಆ ಸಮಿತಿಯಲ್ಲಿ ಮೈಸೂರು ಮಹಾರಾಷ್ಟ್ರದ ಒಬ್ಬೊಬ್ಬ ಗಣ್ಯ ಸದಸ್ಯರಿರಬೇಕೆಂದೂ, ಗ್ರಾಮಗಳ ಘಟಕದಲ್ಲಿ ಮಾತ್ರ ಅದರ ವ್ಯಾಪ್ತಿಯನ್ನು ಇಡಿಸಿ ನಮ್ಮ ಕನ್ನಡ ರಾಜ್ಯಕ್ಕೆ ಕೇರಳ, ತಮಿಳು ನಾಡು ಮತ್ತು ಆಂಧ್ರ ಪ್ರದೇಶಗಳಿಂದ ಬರತಕ್ಕ ಭಾಗಗಳನ್ನು ನಮಗೊಪ್ಪಿಸಿ ಮಹಾರಾಷ್ಟ್ರದವರಿಗೆ ಹೋಗತಕ್ಕದ್ದನ್ನು ಅವರಿಗೊಪ್ಪಿಸುವಂತೆ ಒಂದು ತೀರ್ಮಾನ ಮಾಡಬೇಕು. ಈ ದಿವಸ ಏಕ ಸದಸ್ಯ ಆಯೋಗ ರಚನೆಯನ್ನು ವಿರೋಧಿಸುತ್ತಿರುವುದು ಏಕೆ? ಅದು ಆಡಳಿತದ ಒಂದು ಪಕ್ಷದ ತೀರ್ಮಾನದಿಂದ ಆಗತಕ್ಕದ್ದಾಗಿದೆ, ಆದರೆ ಅದು ಕೈಗೊಳ್ಳುವ ಕಾರ್ಯ ಇಡೀ ದೇಶದ ಜನತೆಗೆ ಸಂಬಂಧಪಟ್ಟಿದ್ದು. ಇಂಥ ಸಮಿತಿಗಳ ನೇಮಕದಿಂದ ಹಿಂದಿನಿಂದಲೂ ಕನ್ನಡಿಗರಿಗೆ ಬಹಳ ಅನ್ಯಾಯವಾಗಿದೆ. ಇನ್ನಾದರೂ ಅಂಥ ಅನ್ಯಾಯಗಳು ನಡೆಯಲು ಅವಕಾಶವಿಲ್ಲದ ರೀತಿಯಲ್ಲಿ ಸಮಿತಿಯನ್ನು ನೇಮಕಮಾಡಬೇಕೆಂದು ಹೇಳಿ ನಾನು ಇಷ್ಟಕ್ಕೇ ಮುಗಿಸುತ್ತೇನೆ.

†ಶ್ರೀ ಎನ್. ಎ. ಕರಿಲಿಂಗಣ್ಣನವರ್ (ಗೋಕಾಕ್-1).—ಮಾನ್ಯ ಅಧ್ಯಕ್ಷರೇ, ನಾಲ್ಕು-ಐದು ದಿನಗಳಿಂದಲೂ ಮೈಸೂರು-ಮಹಾರಾಷ್ಟ್ರ ಗಡಿಗೆ ಸಂಬಂಧಿಸಿದ ಚರ್ಚೆ ನಡೆದಿದೆ. ಇಲ್ಲಿಯವರೆಗೂ ನಮ್ಮ ಪ್ರಧಾನ ಮಂತ್ರಿಗಳು ಏನು ಒಂದು ತೀರ್ಮಾನಕ್ಕೆ ಬಂದಿದ್ದಾರೋ ಅದನ್ನು ನಾನು ವಿರೋಧಿಸಬೇಕಾಗಿರುವುದರಿಂದ ನಾಲ್ಕು ಮಾತುಗಳನ್ನಾಡ ಬಯಸುತ್ತೇನೆ. ಈ ಹಿಂದೆ ಫಜಲಾಲಿ ಸಮಿತಿ ಒಂದಲ್ಲದೆ ಅನೇಕ ಸಮಿತಿಗಳು ಈಗ ಉದ್ಭವಿಸಿರತಕ್ಕ ಗಡಿಗಳ ವಿಚಾರದಲ್ಲಿ ಒಂದು ನಿರ್ಣಯವನ್ನು ಕೊಟ್ಟು, ಅದು ನಮ್ಮ ಪಾರ್ಲಿಯಮೆಂಟಿನ ಮುಂದೆ ಬಂದು ಐಕ್ಯರಾಗಿ ತೀರ್ಮಾನವಾಗಿದೆ. ಅದನ್ನು ನಾವು ಈ ದಿವಸ ಪುನಃ ಎತ್ತುವಂತಿಲ್ಲ. ಹಾಗಿದ್ದರೂ ನಮ್ಮ ಮೇಲಿರತಕ್ಕ ಕೆಲವು ಮುಖಂಡರುಗಳು ಇದನ್ನು ಮತ್ತೆ ಎತ್ತಿ ಜನರ ಮನಸ್ಸನ್ನು ಕಲಕುವುದಕ್ಕೆ ಪ್ರಯತ್ನ ಮಾಡಿದ್ದಾರೆ. ನಮ್ಮ ಮುಖಂಡರ ನಿಲುವನ್ನು ನೋಡಿ ನನಗೆ ಆಶ್ಚರ್ಯ ಮತ್ತು ದುಃಖ ಎರಡೂ ಆಗುತ್ತಿವೆ. ಈ ದಿವಸ ಈ ಸಭೆಯಲ್ಲಿ ನಮ್ಮ ಮುಂದೆ ಕಾಣತಕ್ಕ ಫೋಟೋಗಳೇನಿವೆ ಅವುಗಳಲ್ಲಿ ಕಾಣತಕ್ಕ ಪೂಜ್ಯ ಗಾಂಧೀಜಿಯವರಾಗಲೀ ಅಥವಾ ವಲ್ಲಭಾಯಿ ಪಾಟೇಲರಾಗಲೀ ಜೀವಂತರಾಗಿದ್ದರೆ, ಮಹಾರಾಷ್ಟ್ರದ ಮುಖಂಡರು ಯಾರಾದರೂ ಹೋಗಿ ಅವರ ಕಿವಿಯಲ್ಲಿ ಏನಾದರೂ ಇಂಥ ವಿಚಾರಗಳನ್ನು ಹಾಕಿದ್ದರೆ ಅದರ ಪರಿಣಾಮವೇನಾಗುತ್ತಿತ್ತೋ ತಿಳಿಯದು. ಆದರೆ ಈ ದಿವಸ ಅಂಥ ಮುಖಂಡರು ಜೀವಂತವಾಗಿಲ್ಲದಿರುವುದರಿಂದ ಇಂಥ ಒಡಕು ಶಬ್ದಗಳು ಈಚೆಗೆ ಬರಲು ಅವಕಾಶವಾಯಿತು.

ಅದೂ ಅಲ್ಲದೆ ನಮ್ಮ ಮಾನ್ಯ ಮಹಾರಾಷ್ಟ್ರದ ಕೆಲವೊಂದು ಮಿತ್ರರು ಸತ್ಯಾಗ್ರಹದ ಸಲುವಾಗಿ ಮಾತನಾಡಿದ್ದಾರೆ. ಈ 5—6 ಜನ ಮಾನ್ಯ ಸದಸ್ಯರೇನಿದ್ದಾರೆ, ಅವರಿಗೆ ಸತ್ಯಾಗ್ರಹವೇನೆಂಬುದು ಗೊತ್ತಿಲ್ಲ. ಮೊನ್ನೆ ಮೊನ್ನೆಯಿಂದ ಅದರ ಬಗ್ಗೆ ಮಾತಾಡುವುದನ್ನು ಕಲಿತುಕೊಂಡಿದ್ದಾರೆ. ನಮ್ಮ ದೇಶದಿಂದ ಬ್ರಿಟಿಷರನ್ನು ಹೊರಗೆ ಕಳಿಸಬೇಕಾದರೆ ನಾವೆಲ್ಲಾ ಸತ್ಯಾಗ್ರಹ ಮಾಡಿದಾಗ ಮಹಾರಾಷ್ಟ್ರದವರು ಸುಮ್ಮನೆ ಕುಳಿತುಬಿಟ್ಟಿದ್ದರು. ಈಗ ನಾವು ಮಾಡಿದಂಥ ಸತ್ಯಾಗ್ರಹವನ್ನು ವೀರ ಸತ್ಯಾಗ್ರಹವನ್ನು ದೇಶವನ್ನು ಸ್ವತಂತ್ರಗೊಳಿಸುವುದಕ್ಕೆ ಕಾರಣರಾದ ನಮ್ಮನ್ನು ಕೂಲಿ ಸತ್ಯಾಗ್ರಹ ಮಾಡಿದ್ದಾರೆಂದು ತಿಳಿದುಕೊಂಡಿದ್ದಾರೆ. ಹಿಂದೆ ಸ್ವಾತಂತ್ರ್ಯಕ್ಕಾಗಿ ಸತ್ಯಾಗ್ರಹ ಮಾಡಿದ ಜನರನ್ನು ಮಹಾರಾಷ್ಟ್ರದ ಮಿಲಿಟೆರಿಯವರು ಗುಂಡಿಟ್ಟು ಹೊಡೆಯುತ್ತಿದ್ದರು. ಈಗಿನ ಮಹಾರಾಷ್ಟ್ರದ ಮಿಲಿಟೆರಿಯವರು ಪಾಕಿಸ್ತಾನ ಮತ್ತು ಚೈನಾದೇಶದ ವಿರುದ್ಧವಾಗಿ ಹೋರಾಟ ಮಾಡುತ್ತಿದ್ದಾರೆ. ಆದ್ದರಿಂದ ಮಿಲಟ್ರಿ ಜನರನ್ನು ನಾನು ಅಭಿನಂದಿಸುತ್ತೇನೆ. ಮಾನ್ಯ ಕದಂರವರು ಹೇಳಿದರು, ಮಹಾರಾಷ್ಟ್ರದ ಮಿಲಿಟ್ರಿಯವರು ಸ್ವತಂತ್ರಕ್ಕಾಗಿ ಬಹಳ ಕೆಲಸ ಮಾಡಿದ್ದಾರೆಂದು. ಆದರೆ ಅವರು ತಿಳಿಯಬೇಕು, ಕರ್ನಾಟಕದ ಕೆಲಭಾಗವನ್ನು ತೆಗೆದುಕೊಳ್ಳಬೇಕೆನ್ನುವುದು ಸರಿಯಲ್ಲವೆಂದು. ಸಾಮಾನ್ಯ ಜನರಾರೂ ಈ ಪ್ರಶ್ನೆಯನ್ನು ಎತ್ತಿಲ್ಲ. ಈ 7—8 ಜನ ಏನಿದ್ದಾರೆ, ಇವರು ಮಾತ್ರ ಗೊಂದಲಮಾಡುತ್ತಿದ್ದಾರೆ. ಶ್ರೀ ಚವ್ಹಾಣರನ್ನು ಶಿವಾಜಿಗೆ ಹೋಲಿಸಿ ಅವರ ಒಂದು ಬೆಂಬಲದ ಮೇಲೆ ಈ ಸಮಸ್ಯೆಯನ್ನು ಉದ್ಭವ ಮಾಡಿದ್ದಾರೆ. ಕರ್ನಾಟಕದ ಒಂದು ಅಂಗುಲ ಜಾಗ ಮಹಾರಾಷ್ಟ್ರಕ್ಕೆ ಹೋಗುವುದಕ್ಕೆ ಕರ್ನಾಟಕದ ಜನ ಬಿಡುವುದಿಲ್ಲವೆಂದು ಮಹಾರಾಷ್ಟ್ರದವರು ತಿಳಿಯಬೇಕು. ಹಾಗೇನಾದರೂ ತಿಳಿದಿದ್ದರೆ ಅದು ತಪ್ಪು. ಅವರು ಎಷ್ಟು ಜನ ಸತ್ಯಾಗ್ರಹ ಮಾಡಿದ್ದಾರೆ, ನಮ್ಮಲ್ಲಿ ಎಷ್ಟು ಜನ ಸತ್ಯಾಗ್ರಹ ಮಾಡಿದ್ದೇವೆಂದು ಎಲ್ಲರಿಗೂ ಗೊತ್ತಿದೆ. ಕರ್ನಾಟಕದಲ್ಲಿ ಏನೇನು ಸತ್ಯಾಗ್ರಹ ನಡೆಯಿತೆಂದು ಗೊತ್ತಿದೆ. ಇಡೀ ಕರ್ನಾಟಕದ ತುಂಬ ಸತ್ಯಾಗ್ರಹ ನಡೆಯಿತು. ರೈಲು ಸತ್ಯಾಗ್ರಹ ನಡೆಯಿತು. ಗೋಕಾಕ್‌ನಲ್ಲಿ 18 ಸಾವಿರ ಜನ ರೈಲ್‌ಗಾಡಿ ಕೆಳಗೆ ಕುಳಿತು ಸತ್ಯಾಗ್ರಹ ಮಾಡಿದರು. ಪ್ರಾಣವನ್ನು ಕೊಡಲು ಸಹ ಸಿದ್ಧರಾಗಿದ್ದರು. ಸತ್ಯಾಗ್ರಹದಲ್ಲಿ ಮಹಾರಾಷ್ಟ್ರದವರು ಸಹ ಬಹಳಷ್ಟು ಮಂದಿ ಭಾಗವಹಿಸಿದ್ದರು. ತಾವು ತಿಳಿದುಕೊಳ್ಳಬೇಕು, ಬೆಳಗಾಂನಲ್ಲಿರುವ ಅನೇಕ ಜನರು ಮಹಾರಾಷ್ಟ್ರದಿಂದ ವಲಸೆ ಬಂದಂಥವರು.

Sri B. P. KADAM (Karwar).—Point of order. " ವಲಸೆ ಬಂದಿದ್ದಾರೆ ", Is it parliamentary ? It must be expunged.

Mr. DEPUTY SPEAKER.—Order, order.

Sri L. B. BIRJE.—[*Marathi*].

ಉಪಾಧ್ಯಕ್ಷರು.—ಮಾನ್ಯ ಸದಸ್ಯರು ಅಧ್ಯಕ್ಷರನ್ನು ಸಂಬೋಧಿಸಿ ಮಾತನಾಡಬೇಕು.

Sri L. B. BIRJE.—[*Marathi*].

ಶ್ರೀ ಎನ್. ಎ. ಕರಿಲಿಂಗಣ್ಣನವರ್.—ಅವರೇ ಹೊರಗಡೆಯಿಂದ ವಲಸೆ ಬಂದು ನಮ್ಮನ್ನು ಹೊರ ಹಾಕಲಿಕ್ಕೆ ಬಂದಿದ್ದಾರೆ.

Sri B. P. KADAM.—Is it parliamentary ?

Mr. DEPUTY SPEAKER.—I do not think there is anything unparliamentary in saying that a person has come to eke out his livelihood. So many people emigrate for purposes of livelihood. There is nothing unparliamentary in that expression.

Sri K. LAKKAPPA (Hebbur).—These challenges should not be allowed.

Mr. DEPUTY SPEAKER.—Order, order.

Sri N. O. SAMAJI.—[*Marathi*].

ಶ್ರೀ ಕರಿಲಿಂಗಣ್ಣನವರ್.—ಹುತ್ತದೊಳಗೆ ಹಾವು ಬಂದು ಸೇರಿಕೊಂಡು ನಂತರ ಆ ಪ್ರದೇಶದಲ್ಲಿರುವವರನ್ನೇ ಕಚ್ಚುತ್ತದೆ. ಇಂಥ ಸರ್ಪಕ್ಕೆ ನಾವು ಅಂಜುವುದಿಲ್ಲ.

Mr. DEPUTY SPEAKER.—The member may please come to the point.

Sri B. P. KADAM.—He seems to have lost his balance. He is pointing his fingers to us. Let him be brought to order.

ಶ್ರೀ ಎನ್. ಎ. ಕರಿಲಿಂಗಣ್ಣನವರ್.—ಈ ಸರ್ಪವನ್ನು ಏನು ಮಾಡಬೇಕೆಂಬುದನ್ನು ನಾವು ಮುಂದಿನ ತಿಂಗಳು 7ನೇ ತಾರೀಖಿನೊಳಗೆ ತೋರಿಸುತ್ತೇವೆ. ಕೇಂದ್ರ ಸರ್ಕಾರದವರಿಗೆ ನಾವು ಮಾಡಿದ ಸತ್ಯಾಗ್ರಹ ಗೊತ್ತಾಗಿದೆ. ಕರ್ನಾಟಕದ ಒಂದು ಅಂಗುಲ ಜಾಗ ಮಹಾರಾಷ್ಟ್ರಕ್ಕೇನಾದರೂ ಹೋಗುವ ಸಂದರ್ಭ ಬಂದರೆ, ಮಾನ್ಯ ಮುಖ್ಯಮಂತ್ರಿಗಳ ನೇತೃತ್ವದಲ್ಲಿ ಇಡೀ ಕರ್ನಾಟಕದ ಜನರೆಲ್ಲಾ ಸೇರಿ ಕರ್ನಾಟಕದ ಒಂದು ಅಂಗುಲ ಜಾಗ ಹೋಗದಂತೆ ಹೋರಾಟ ಮಾಡುತ್ತೇವೆಂದು ಹೇಳುತ್ತೇನೆ. ಆದ್ದರಿಂದ ಇನ್ನಾದರೂ ನೀವೆಲ್ಲಾ ನಮ್ಮ ನೆಲೆಯೊಳಗೆ ಇದ್ದು ಹೊಂದಿಕೊಂಡು ಹೋಗಬೇಕೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಸಿ. ಎಂ. ರೇವಣಸಿದ್ದಯ್ಯ (ಸಿರಗುಪ್ಪಾ).—ಮಾನ್ಯ ಸಭಾಪತಿಗಳೇ, ಮೈಸೂರು ಮತ್ತು ಮಹಾರಾಷ್ಟ್ರ ಗಡಿಯ ಇತ್ಯರ್ಥಕ್ಕೆ ಏಕ ಸದಸ್ಯ ಆಯೋಗವನ್ನು ನೇಮಿಸಬೇಕೆಂದು ಕೇಂದ್ರ ಕಾರ್ಯಕಾರಿ ಸಮಿತಿಯವರು ಮಾಡಿರುವ ನಿರ್ಣಯವನ್ನು ನಾನು ವಿರೋಧಿಸುತ್ತೇನೆ. ಏಕೆಂದರೆ, ಇಂಥ ಒಂದು ತೀರ್ಮಾನ ಈ ಸಂದರ್ಭದಲ್ಲಿ ಅನುಚಿತ, ಅಪ್ರಾಸಂಗಿಕ, ಅಪ್ರಬುದ್ಧವೆಂದು ಸಾಮಾನ್ಯ ಮನುಷ್ಯನಿಗೂ ತಿಳಿಯುತ್ತದೆ. ಏಕೆಂದರೆ, ದೇಶವು ನಾನಾ ರೀತಿಯ ಮುಖ್ಯವಾದ ಪ್ರಸಂಗಗಳನ್ನು ಎದುರಿಸಬೇಕಾದ ಸಂದರ್ಭದಲ್ಲಿ, ಒಂದು ಮುಗಿದುಹೋದ ಪ್ರಶ್ನೆಯನ್ನು 10 ವರ್ಷದ ನಂತರ ಮತ್ತೆ ಎತ್ತಿ ಇಲ್ಲದ ಗೊಂದಲವನ್ನು ಎಬ್ಬಿಸುತ್ತಿದ್ದಾರೆಂದು ನನಗೆ ಕಾಣಿಸುತ್ತದೆ. ಹಿಂದೆ ಬ್ರಿಟೀಷರು ನಮ್ಮನ್ನು ಇಬ್ಭಾಗವಾಗಿ ಮಾಡಿ ಆಳುತ್ತಿದ್ದರು. ಅದೇ ರೀತಿ ಕೇಂದ್ರ ಸರ್ಕಾರದವರು ರಾಜ್ಯ ರಾಜ್ಯದ ಮಧ್ಯೆ ಯಾವುದೋ ಒಂದು ಪ್ರಶ್ನೆಯನ್ನು ಜೀವಂತವಾಗಿ ಇಟ್ಟುಕೊಂಡು ತಮ್ಮ ಒಂದು ಲೀಡರ್‌ಗಿರಿಯನ್ನು ಮುಂದುವರಿಸಿಕೊಂಡು ಹೋಗಬೇಕು ಎಂಬ ಕಾರಣದಿಂದ ಮೈಸೂರು ಮಹಾರಾಷ್ಟ್ರದ ಮಧ್ಯೆ ಗೊಂದಲ ಎಬ್ಬಿಸುತ್ತಿದ್ದಾರೆ. ಕೇಂದ್ರದವರಿಗೆ ಇನ್ನೂ ಅನೇಕ ಪ್ರಶ್ನೆಗಳಿದ್ದರೂ ಸಹ ಮಹಾರಾಷ್ಟ್ರದವರ ಕರೆಗೆ ಓಗೊಟ್ಟು ತಮ್ಮ ಒಂದು ಮುಖಂಡತ್ವವನ್ನು ಸಾಧಿಸಲಿಕ್ಕೆ ನಮ್ಮ ನಮ್ಮಲ್ಲಿ ಜಗಳ ತಂದಿಟ್ಟಿದ್ದಾರೆಂದು ನನಗಾದರೂ ಅನ್ನಿಸುತ್ತದೆ. ಮೈಸೂರು ಗಡಿ ಪ್ರಶ್ನೆ

ಅಂದರೆ ಕರ್ನಾಟಕ ಮತ್ತು ಮಹಾರಾಷ್ಟ್ರದ ಗಡಿ ಪ್ರಶ್ನೆ ಒಂದೇ ಅಲ್ಲ, ಇದೇ ರೀತಿ ಅನೇಕ ಪ್ರಶ್ನೆಗಳಿವೆ. ನಮ್ಮ ಕನ್ನಡ ಮಾತನಾಡುವ ಬಂಧುಗಳು ಆಂಧ್ರದಲ್ಲಿ ಇದ್ದಾರೆ, ಕೇರಳದಲ್ಲಿದ್ದಾರೆ, ಮದ್ರಾಸ್‌ನಲ್ಲಿದ್ದಾರೆ, ಅಲ್ಲದೆ ಮಹಾರಾಷ್ಟ್ರದಲ್ಲೂ ಇದ್ದಾರೆ. ಎಂದಮೇಲೆ ಈ ಒಂದು ಏಕ ಸದಸ್ಯ ಸಮಿತಿ ಬರೀ ಮೈಸೂರು ಮತ್ತು ಮಹಾರಾಷ್ಟ್ರದ ಗಡಿ ಪ್ರಶ್ನೆಯನ್ನು ಮಾತ್ರ ತೀರ್ಮಾನ ಮಾಡುವಹಾಗಿಲ್ಲ. ಏಕ ಸದಸ್ಯ ಸಮಿತಿ ಅಥವಾ ಬಹು ಸದಸ್ಯ ಸಮಿತಿಯೇನಾದರೂ ನೇಮಕವಾದರೆ ನಮ್ಮ ಕರ್ನಾಟಕ ಭಾಗದಿಂದ ಹೊರಕ್ಕೆ ಏನು ಹೋಗಿವೆ ಅವೆಲ್ಲಾ ನಮಗೆ ಸೇರುವ ಹಾಗೆ ತೀರ್ಮಾನ ಮಾಡುವುದಾದರೆ ಒಪ್ಪಬಹುದಾಗಿತ್ತು. ಆದುದರಿಂದ ಏಕ ಸದಸ್ಯ ಸಮಿತಿಯನ್ನು ನಾವು ಅನಿವಾರ್ಯವಾಗಿ ವಿರೋಧಿಸಬೇಕಾಗಿದೆ.

[Mr. SPEAKER in the Chair].

11-00 A.M.

1953 ರಲ್ಲಿ ಮದರಾಸಿನಲ್ಲಿದ್ದ ಬಳ್ಳಾರಿ ಜಿಲ್ಲೆಯ ಕೆಲವು ಭಾಗಗಳು ಮೈಸೂರಿಗೆ ಸೇರಿದುವು. ಇನ್ನು ಕೆಲವು ಭಾಗ ಆಂಧ್ರದಲ್ಲಿ ಸೇರಿತು. ಆಗ ಆಂಧ್ರ ಪ್ರಾಂತ ಎಂದು ಹೊಸದಾಗಿ ಆಯಿತು. ಹಾಗೆ ಆಂಧ್ರ ಪ್ರಾಂತವಾದಾಗ ನಮ್ಮ ಬಳ್ಳಾರಿಗೆ ನ್ಯಾಯವಾಗಿ ಬರಬೇಕಾದ ಭಾಗಗಳು ಬಾರದೆ ಇನ್ನೂ ಅರ್ಧ ಭಾಗ ಆಂಧ್ರದಲ್ಲೇ ಉಳಿದು ಹೋದವು. ಇದನ್ನು ನಮ್ಮ ರಾಜ್ಯಕ್ಕೆ ಪಡೆಯಬೇಕು ಎಂದು ಆಗ ಕೆ. ಪಿ. ಸಿ. ಸಿ. ಸದಸ್ಯರಾಗಿದ್ದ ಮತ್ತು ಈಗ ಮುಖ್ಯ ಮಂತ್ರಿಗಳಾಗಿರುವ ನಿಜಲಿಂಗಪ್ಪನವರನ್ನು ಇಲ್ಲಿರುವ ನಾಲ್ಕು ಲಕ್ಷ ಕನ್ನಡ ಜನ ಬಳ್ಳಾರಿ ಜಿಲ್ಲೆಗೆ ಸೇರಬೇಕೆಂದು ಕೇಳುತ್ತಿದ್ದರೂ ಇನ್ನೂ ಈ ಪ್ರಶ್ನೆ ಹಾಗೇ ಉಳಿದಿದೆ. ಇದರ ವಿಚಾರವನ್ನು ಆಗ ಇಲ್ಲಿಗೆ ಬಂದಿದ್ದ ಕಾಂಗ್ರೆಸ್ಸು ಅಧ್ಯಕ್ಷರಾದ ಡೇಭರರಿಗೂ ಹಾಗೂ ಪ್ರಧಾನಿಗಳಾಗಿದ್ದ ಶ್ರೀ ನೆಹರೂರವರಿಗೂ ಹಾಗೂ ನಮ್ಮ ಮಾನ್ಯ ಮುಖ್ಯ ಮಂತ್ರಿಗಳಾದ ಶ್ರೀ ನಿಜಲಿಂಗಪ್ಪನವರಿಗೂ ಹೇಳಿದರು. ಇದರ ಬಗ್ಗೆ ಇನ್ನೂ ಏನೂ ಆಗಲಿಲ್ಲ. ಇಂತಹ ಅನೇಕ ಭಾಗಗಳು ಇನ್ನೂ ಅಲ್ಲಲ್ಲೇ ಉಳಿದಿರುತ್ತವೆ. ಇದರ ಬಗ್ಗೆ ನಾವು ಹೋರಾಟ ಮಾಡಬೇಕಾಗಿದೆ. ಬಳ್ಳಾರಿ ಜಿಲ್ಲೆ ಬಗ್ಗೆ ಪ್ರಾಂತಪುನರ್ವಿಂಗಡಣಾ ಆಯೋಗದವರು ಸುಮ್ಮನೆ ಬಿಟ್ಟು ಬಿಟ್ಟರು ಎಂದು ಮಾನ್ಯ ಸದಸ್ಯರಾದ ಶ್ರೀ ವಿ. ಎಸ್. ಪಾಟೀಲ್‌ರವರು ಇಲ್ಲಿ ಹೇಳಿದರು. ನಾವು ಬಳ್ಳಾರಿಯನ್ನು ಭಿಕ್ಷೆ ಬೇಡಿ ತೆಗೆದುಕೊಂಡಿಲ್ಲ. ಹಿಂದೆ ಮಿಶ್ರರವರ ಅವಾರ್ಡು 1953 ರಲ್ಲಿ ಪಾಸಾದಂತೆ ಮಾಡಿದ್ದುದರಿಂದ ಎಸ್. ಆರ್. ಸಿ. ರಿಪೋರ್ಟ್‌ನಲ್ಲಿ ಇದನ್ನು ಮುಟ್ಟಲಿಲ್ಲ ಎಂದು ಮಾನ್ಯ ಸದಸ್ಯರಾದ ಶ್ರೀ ವಿ. ಎಸ್. ಪಾಟೀಲ್‌ರವರು ಹೇಳುವುದು ಸರಿಯಲ್ಲ. ಬಳ್ಳಾರಿಯ ಜನ ಕನ್ನಡ ರಾಜ್ಯದಲ್ಲಿಯೇ ಉಳಿಯುತ್ತಾರೆ ಎನ್ನುವುದನ್ನು ಇಲ್ಲಿ ಸ್ಪಷ್ಟಪಡಿಸುತ್ತೇನೆ. ಶ್ರೀ ಕದಂರವರು ಇಲ್ಲಿ ಮಾತನಾಡುತ್ತ ಮಹಾರಾಷ್ಟ್ರದವರೆಲ್ಲಾ ವೀರರು ಎಂದು ಹೇಳಿದರು. ಅವರಿಗೆ ನಾನು ಹೇಳುವುದು ಚರಿತ್ರೆ ನೋಡಿದರೆ ಅವರಿಗೇ ಗೊತ್ತಾಗುತ್ತದೆ. ಹಿಂದೆ ಬ್ರಿಟಿಷರು ನಮ್ಮ ರಾಜ್ಯದ ಮೇಲೆ ಹೋರಾಟ ಮಾಡಿದಾಗ ಆಗ ಇದ್ದ ಹೈದರಾಲಿ ಹಾಗೂ ಟಿಪ್ಪೂಸುಲ್ತಾನರೊಡಗೂಡಿ ಹೋರಾಡಿದ ಜನ ಕನ್ನಡ ಜನರೇ ಹೊರತು ಮಹಾರಾಷ್ಟ್ರದವರಲ್ಲ. ಆದರೆ ಮರಾಠಿಯವರಂತೆ ಕನ್ನಡ ಜನ ಹೋರಾಟ ಮಾಡಲು ಸಿದ್ಧರಾಗಿಲ್ಲ ಎನ್ನುವುದನ್ನು ಅವರು ಮನಗಾಣಬೇಕು. ನಾನು ಇಷ್ಟೇ ಹೇಳುವುದು. ಈಗ ಮಾಡಬೇಕೆಂದಿರುವ ಏಕ ಸದಸ್ಯ ಆಯೋಗವನ್ನು ಅನಿವಾರ್ಯವಾಗಿ ವಿರೋಧಿಸಬೇಕಾಗಿದೆ. ಕನ್ನಡ ನಾಡಿನ ಇನ್ನೂ ಎಷ್ಟೋ ಭಾಗಗಳು ಮದ್ರಾಸಿನಲ್ಲಿ ಹಾಗೂ ಆಂಧ್ರದಲ್ಲಿ ಉಳಿದಿವೆ. ಇದಕ್ಕಾಗಿ ಇನ್ನೂ ಯಾವ ಸಮಿತಿ ಮಾಡುವುದಕ್ಕೆ ಬರುವುದಿಲ್ಲ. ಇಷ್ಟು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಚನ್ನಪ್ಪವಾಲಿ ಸಂಪಗಾವ್.—ಸ್ವಾಮೀ, ನಾನು ಈಗ ಎರಡು ಮಾತು ಹೇಳಿ ಹೋಗುತ್ತೇನೆ. ಯಾವ ರೀತಿಯಾಗಿ ಇಲ್ಲಿ ಚರ್ಚೆಗೆ ಅವಕಾಶ ಸಿಗುತ್ತಿದೆ ಎನ್ನುವುದನ್ನು ವಿಷಾದದಿಂದ ಹೇಳಬೇಕಾಗಿ ಬಂದಿದೆ. ಗಡಿಯಲ್ಲಿ ಹೋರಾಟ ಮಾಡಿದಂತಹ ಜನರು ಇಲ್ಲಿ ಅನೇಕರಿದ್ದಾರೆ. ಇಂತಹ ಜನ ಇಲ್ಲಿ ಮಾತನಾಡಲು ಕಳೆದ ಐದು ದಿನಗಳಿಂದಲೂ ಅವಕಾಶ ಕೊಡಿ ಎಂದು ಕೇಳುತ್ತಿದ್ದರೂ ನಮಗೆ ಅವಕಾಶ ಸಿಕ್ಕುತ್ತಾ ಇಲ್ಲ. ಇದರಲ್ಲಿ ನಿಮಗೆ ಯಾವ ದ್ವೇಷ ಭಾವನೆ ಇದೆಯೋ ನಮಗೆ ಗೊತ್ತಾಗುತ್ತಿಲ್ಲ. ಬೆಳಗಾವಿ ಜಿಲ್ಲೆಯ ಕ್ಷೇತ್ರದಿಂದ ಈ ಅಸೆಂಬ್ಲಿಗೆ ಬಂದು ಇಷ್ಟು ದಿವಸಗಳಾದರೂ ಇಲ್ಲಿಯತನಕ ನಾನು ಮಾತನಾಡಲಿಲ್ಲ. ತಮ್ಮಂತಹವರು ಇಂತಹ ಸ್ಥಾನದಲ್ಲಿರುವುದು ಗೌರವವೂ ಅಲ್ಲ. ನೀವು ಇಲ್ಲಿರುವ ತನಕ ನಾನು ಮಾತನಾಡುವುದಿಲ್ಲ ಎಂದು ವ್ಯಸನದಿಂದ ಹೇಳಿ ಹೊರಗೆ ಹೋಗುತ್ತೇನೆ.

(*At this stage the Hon'ble member walked out of the House*).

Mr. SPEAKER.—I am surprised at the conduct of this Hon'ble member. Hon'ble member's name was sent by the whip and not by him. I have been trying to lock at his seat as to where he is, but he was not found anywhere. Members send names and go away. I am surprised. I do not know whether the House carries the impression that this member has not been given a fair chance. Names of 47 members, who were arrested and went to Jail, have been read by me. I have given chance to many of them. The Hon'ble members of the M. E. S. will kindly recollect that except Sri N. O. Samaji everybody has spoken, and I am also giving a chance to Sri Samaji. I am surprised that a statement of this type should come from a member of a party which is in power, casting reflection upon the Speaker. The Hon'ble member may be informed that if he so desires he may come and I will give him the very next chance. But, if he does not choose to do so, it is his mistake and he takes the consequences. He never attracted my eye. I would have given time to those who have participated in the agitation, because it is they who have to express themselves. If there are any other members who would like to participate in the debate, I would like to know irrespective of the slips they have sent. Let the debate take place for ten days, it does not matter.

I may take the House into confidence in mentioning that I am making changes in the Agenda, because the Hon'ble Minister concerned is indisposed. I am sending a supplementary agenda. I am trying to coordinate the maximum quantity of work within any unit of time.

Sri SIDDAIAH KASIMATH (Shirahatti).—Since there are some more members willing to participate in the debate, the time may be extended, Sri.

Mr. SPEAKER.—It may be extended for 20 days; I don't mind. Why don't you put it before the Business Advisory Committee meeting ? This unilateral decision is coming ! at the end of 4½ days ! Members may kindly come and guide me.

I call upon Sri K. Lakkappa to participate in the debate.

† ಶ್ರೀ ಕೆ. ಲಕ್ಕಪ್ಪ.—ಸ್ವಾಮಿ, ಈಗ ಮಹಾರಾಷ್ಟ್ರ ಹಾಗೂ ಮೈಸೂರು ಗಡಿ ವಿವಾದಗಳ ಬಗ್ಗೆ ವಿರೋಧಪಕ್ಷದ ನಾಯಕರಾದ ಶ್ರೀಮಾನ್ ಶಿವಪ್ಪನವರು ಕಳುಹಿಸಿರುವ ನಿರ್ಣಯದ ಮೇಲೆ ಇಲ್ಲಿ ಚರ್ಚೆ ಮಾಡುತ್ತಿದ್ದಾರೆ. ಈ ಸಭೆಯಲ್ಲಿ ಇದನ್ನು ಚರ್ಚೆ ಮಾಡತಕ್ಕ ಕಾಲದಲ್ಲಿ ಮಹಾರಾಷ್ಟ್ರವಾದಿಗಳೂ ಹಾಗೂ ಕರ್ಣಾಟಕವಾದಿಗಳೂ ಕೂಡ ಇದರಲ್ಲಿ ಭಾಗವಹಿಸುತ್ತಿದ್ದಾರೆ. ಅನೇಕ ಸಾರಿ ಉದ್ವೇಗದಿಂದ ಬಿಸಿಯಾದ ವಾತಾವರಣವನ್ನೂ ಈ ಸಭೆಯಲ್ಲಿ ಮಾತನಾಡಿದ ಸದಸ್ಯರುಗಳು ಹೊರಪಡಿಸಿದ್ದಾರೆ. 1956 ರ ಎಸ್. ಆರ್. ಸಿ. ರಿಪೋರ್ಟಿನ ಪ್ರಕಾರ ಭಾಷೆಯ ಆಧಾರದ ಮೇಲೆ ಪ್ರಾಂತಗಳು ಆಗಬೇಕು ಎಂದು ಆಗ ಪುನರ್ವಿಂಗಡಣೆ ನಡೆಯಿತು. ಭಾಷೆಯ ಆಧಾರದ ಮೇಲೆ ಪುನರ್ವಿಂಗಡಣೆಯಾದಾಗ ದೇಶದಲ್ಲಿ ಬಹು ಉಗ್ರವಾದ ಚಳುವಳಿಗಳೂ ನಡೆದವು. ಇದನ್ನು ಗಮನದಲ್ಲಿಟ್ಟುಕೊಂಡು ಕೇಂದ್ರ ಸರಕಾರದವರು ಎಸ್. ಆರ್ ಸಿ. ರಿಪೋರ್ಟಿನಂತೆ ಜಾರಿಗೆ ತಂದು ಹತ್ತು ವರ್ಷಗಳಾದವು. ಆ ರೀತಿ ಪ್ರಾಂತಗಳಾದ ಮೇಲೂ ಅನೇಕ ವಾದ ವಿವಾದಗಳು ತಲೆದೋರಿ ದೇಶದ ಭದ್ರತೆಗೆ ಮತ್ತು ದೇಶದ ಒಗ್ಗಟ್ಟಿಗೆ ಅಪಾಯಕಾರಿಯಾದಂತಹ ಕೆಲವು ಸಮಸ್ಯೆಗಳು ದೇಶದಲ್ಲಿ ಎದ್ದು ನಿಂತಿವೆ.

ಅಧ್ಯಕ್ಷರೇ, ಮುಖ್ಯವಾಗಿ ಭಾಷಾವಾರು ಪ್ರಾಂತಗಳ ರಚನೆ ಈಗ ಆಗಬಾರದು ಮತ್ತು ಅದರಿಂದ ಅನೇಕ ಗೊಂದಲಗಳು ಹಾಗೂ ತೊಂದರೆಗಳು ಉಂಟಾಗಿ ದೇಶದ ಐಕ್ಯತೆಗೆ ಭಂಗ ಬರುವಂತಹ ಕೃತ್ಯಗಳಾಗುತ್ತವೆಂದು ಅನೇಕ ವಿದ್ವಾಂಸರು ಮತ್ತು ಅನೇಕ ತಜ್ಞರು ಹೇಳಿದ್ದಾರೆ.

ಸರ್ವೋದಯ ನಾಯಕರಾದ ಶ್ರೀ ಜಯಪ್ರಕಾಶ್ ನಾರಾಯಣ್ ಅವರು ಈಗ ದೇಶಾದ್ಯಂತ ನಡೆದಂಥ ಚಳುವಳಿಯ ಬಗ್ಗೆ ಮಾತನಾಡುತ್ತ ಈಗ ಭಾಷಾವಾರು ಪ್ರಾಂತಗಳು ಆಗಲೇಬಾರದಾಗಿತ್ತು ಎಂದು ಹೇಳಿದ್ದಾರೆ.

Sri C. J. MUCKANNAPPA (Sira).—A few minutes back what has happened is not really in keeping with the dignity of this House. It is an insult to the Hon'ble Speaker, and it is an insult to this House. I am requesting the Chair to deal with the member to whichever party he belongs, whether it is the ruling party, whether it is the P.S.P. or whether it is the Communist party. It is a disgrace on the part of the member and also on rhe part of the ruling party to behave in such a way towards the Chair.

Mr. SPEAKER.—I think the House knows very well what has happened in the immediate past. So the impression cannot be wiped out. I see there is no personal element here. I have vindicated the honour of the House and such things cannot be said. I think it is best to close the chapter.

Sri C. J. MUCKANNAPPA.—That is true. But it is pricking me. What he said was "that till Sri Baliga is occupying the Chair, I am not going to speak".

Mr. SPEAKER.—That is right. He does not take away my right, my intrinsic power and intrinsic merit. He said that he is not going to participate. Let him not. It is not an iusult either to the House or to me.

Sri C. J. MUCKANNAPPA.—It is not Mr. Magavi that is controlling. There is the Chair to whom we submit. It is an insult to the Chair, Sir............

Mr. SPEAKER.—If Sri, Lakkappa yields, I will ask Sri C. J. Muckannappa to speak. Otherwise it is not possible.

(Sri Lakkappa did not yield)

Mr. SPEAKER.—If there is anything, let us see, but not now. I want the debate to be concluded.

ಶ್ರೀ ಕೆ. ಲಕ್ಕಪ್ಪ.—ಈಗ ಭಾಷಾವಾರು ಪ್ರಾಂತಗಳ ರಚನೆಯ ಪ್ರಶ್ನೆಯನ್ನು ತೆಗೆದುಕೊಂಡ ಮೇಲೆ ದೇಶಾದ್ಯಂತ ಗಲಭೆಗಳು, ಗೊಂದಲಗಳು, ಚಳವಳಿಗಳು ಮತ್ತು ಸತ್ಯಾಗ್ರಹಗಳು ಉಗ್ರ ಸ್ವರೂಪವನ್ನು ತಾಳಿವೆ. ಇದನ್ನು ತಿಳಿದಂಥ ಸರ್ವೋದಯ ನಾಯಕ ಶ್ರೀ ಜಯಪ್ರಕಾಶ ನಾರಾಯಣ ಅವರು ಈಗ ಪ್ರಾಂತಗಳ ರಚನೆ ಆಗಬಾರದಾಗಿತ್ತು, ಇದರಿಂದ ಅನೇಕ ಘೋರ ಪರಿಣಾಮವುಂಟಾಗಿದೆಯೆಂದು ಹೇಳಿದರು. ಈ ಕರ್ನಾಟಕ ಗಡಿ ಪ್ರಶ್ನೆ ಪ್ರಾಂತ ಪುನರ್ವಿಂಗಡಣಾ ವರದಿಯ ಪ್ರಕಾರ ಪುನಃ ಈ ಸಭೆಯಲ್ಲಾಗಲೀ, ಕಾಂಗ್ರೆಸ್ ಪಕ್ಷದಲ್ಲಾಗಲೀ, ಕಾಂಗ್ರೆಸ್ ಅಧಿವೇಶನದಲ್ಲಾಗಲೀ, ಕಾಂಗ್ರೆಸ್ ಪ್ರಶ್ನೆಯಂತೆ ಅಥವಾ ದೇಶದ ಜನತೆಯ ಪ್ರಶ್ನೆಯಂತೆ ಹಿಂದೆಯೇ ವಿಚಾರವಾಗಿರತಕ್ಕಂಥಾದ್ದನ್ನು ಈಗ ಎತ್ತಲು ಯಾರಿಗೂ ಅವಕಾಶವಿಲ್ಲ. ಆದರೆ ಅನೇಕ ಸದಸ್ಯರು ಹೇಳಿದರು, ಮಹಾರಾಷ್ಟ್ರದವರ ಒತ್ತಾಯಕ್ಕೆ, ಪ್ರಭಾವಕ್ಕೆ ಮತ್ತು ಅವರ ಒಂದು ಬೆದರಿಕೆಗೆ ಹೆದರಿ ಈ ದೇಶವನ್ನೇ ಅಕ್ರಮಣಮಾಡತಕ್ಕಂಥ ವಿಚಾರಗಳಿಗೆ ಇವರು ಮಣಿದರು ಎಂದು. ಇವರು ಏಕ ಸದಸ್ಯ ಗಡಿ ಆಯೋಗವನ್ನು ರಚಿಸಬೇಕೆಂದು ನಿದ್ರಾವಸ್ಥೆಯಲ್ಲಿ ಒಪ್ಪಿಕೊಂಡು ಬಂದರು ಎಂಬುದಾಗಿ ನಾನು ಹೇಳುತ್ತೇನೆ. ಆಗ ಎ.ಐ.ಸಿ.ಸಿ. ವರ್ಕಿಂಗ್ ಕಮಿಟಿ ರಾತ್ರಿಯಲ್ಲಾ ನಡೆಯುತ್ತಿತ್ತು. ಮೊದಲನೆಯದಾಗಿ ಕಾಂಗ್ರೆಸ್ಸಿನವರು ಈ ಪ್ರಶ್ನೆಯನ್ನು ಕಾಂಗ್ರೆಸ್ ಪ್ರಶ್ನೆಯಾಗಿ ಇತ್ಯರ್ಥಮಾಡಿದ್ದು ದೇಶದ ಜನತೆಯಲ್ಲಿ ಒಂದು ಘೋರವಾದ ಉದ್ರೇಕವನ್ನು ಉಂಟುಮಾಡಿದೆ ಎಂಬುದಾಗಿ ಶ್ರೀಮಾನ್ ನಿಜಲಿಂಗಪ್ಪನವರು ಹೇಳಿದರು. ಇಲ್ಲಿ ಮೈಸೂರು ಪ್ರದೇಶ ವರ್ಕಿಂಗ್ ಕಮಿಟಿ

(ಶ್ರೀ ಕೆ. ಲಕ್ಕಪ್ಪ)

ಯಲ್ಲಿ ತೀರ್ಮಾನವಾದಂಥ ಅಭಿಪ್ರಾಯವನ್ನು ಕ್ರೋಢೀಕರಿಸಿ ಅಖಿಲಭಾರತ ವರ್ಕಿಂಗ್ ಕಮಿಟಿಯು ಬೊಂಬಾಯಿಯಲ್ಲಿ ಸೇರಿದ್ದಾಗ ನಮ್ಮ ಮಾನ್ಯ ಮುಖ್ಯ ಮಂತ್ರಿಗಳು ಸರಿಯಾದ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಿದ್ದರೆ ಬಹುಶಃ ಇಂತಹ ಒಂದು ಗೊಂದಲಕ್ಕೆ ನಾವು ಸಿಕ್ಕುತ್ತಿರಲಿಲ್ಲ. ಈಗ ಆ ಒಂದು ಬಲೆಯಲ್ಲಿ ಇವರು ಸಿಕ್ಕಿಹಾಕಿಕೊಂಡಿದ್ದಾರೆ. ಆ ಒಂದು ಪರಿಸ್ಥಿತಿಯಿಂದ ಇವರು ಜನತೆಯ ಹಿತವನ್ನು ರಕ್ಷಣೆಮಾಡದೆ, ಅಸಮರ್ಥ ನಾಯಕತ್ವವನ್ನು ಹೊಂದಿರತಕ್ಕಂಥ ನಾಯಕತ್ವವನ್ನು ಇವರು ಹಿಡಿದಿದ್ದಾರೆಂಬ ಮಾತು ಸರ್ವ ಜನಾಂಗದಲ್ಲಿಯೂ ಮೂಡಿದೆ. ಅದರಿಂದಾಗಿ ನಮ್ಮ ಕರ್ಣಾಟಕದಲ್ಲಿ ಚಳವಳಿ ಒಂದು ಉಗ್ರವಾದಂಥ ಸ್ವರೂಪ ತಾಳಿತು. ಎಲ್ಲ ಜನರೂ ಈ ದೇಶದಲ್ಲಿ ಏಕ ಸದಸ್ಯ ಆಯೋಗ ರಚನೆಯನ್ನು ವಿರೋಧಮಾಡಿದರು. ಇವರು ಅಲ್ಲಿ ಇದಕ್ಕೆ ಒಪ್ಪಿಕೊಂಡು ಬಂದು ಎಂ.ಪಿ.ಸಿ.ಸಿ. ಮೀಟಿಂಗ್‌ನಲ್ಲಿ ಎಲ್ಲರನ್ನೂ ಇನ್‌ಸ್ಟಿಗೇಟ್ ಮಾಡಿ ಈ ರೀತಿಯಾಗಿ ಸತ್ಯಾಗ್ರಹ ವನ್ನು ಮಾಡಬೇಕೆಂದು ಅಡ್ಡದಾರಿಯಲ್ಲಿ ಜನತೆಯನ್ನು ಒಯ್ದು ಚಳವಳಿಯನ್ನು ಮಾಡಬೇಕೆಂದು ಪ್ರಚೋದನೆಯನ್ನು ಮಾಡಿದರು. ಕರ್ಣಾಟಕ ಗಡಿ ಪ್ರಶ್ನೆ ಬಗ್ಗೆ ಪ್ರಧಾನಿಯವರಾದ ಶ್ರೀಮತಿ ಇಂದಿರಾಗಾಂಧಿಯವರಾಗಲೀ, ಶ್ರೀ ಚವಾಣರೇ ಆಗಲೀ ಕೊಟ್ಟಂಥ ನಿಲುವನ್ನು ಅಥವಾ ಮಹಾರಾಷ್ಟ್ರದವರು ಆಕ್ರಮಣ ಪ್ರಭಾವದಿಂದ ಮಾಡಿದಂಥಹ ನಿಲುವನ್ನಾಗಲೀ ಈ ಸಭೆಯ ಮುಂದೆ ಇಡುವುದಕ್ಕೆ ಹಕ್ಕನ್ನು ಪಡೆದಿಲ್ಲ.

ಮುಖ್ಯವಾಗಿ ಈ ಪ್ರಶ್ನೆ ಪಾರ್ಲಿಮೆಂಟಿನಲ್ಲಿಯೇ ಇತ್ಯರ್ಥವಾಗಬೇಕು. ಈ ಪ್ರಶ್ನೆಯನ್ನು ಪುನಃ ಪುನಃ ಎತ್ತಬೇಕಾದರೆ ಬಹುಶಃ ಈಗ ಹೇಳಿದ ಮಾತು ಸಮರ್ಪಕವಾಗಿದೆ. ಇದರಿಂದಲೇ ಈ ದೇಶದ ನಾಯಕತ್ವ ಇಷ್ಟು ಬಲಹೀನತೆಯನ್ನು ಪಡೆದಿದೆಯೆಂದು ನಾನು ಹೇಳುತ್ತೇನೆ. ಮೈಸೂರು ಕಾಂಗ್ರೆಸ್ ಚಳುವಳಿಯನ್ನು ನಡೆಸಿದ ರೀತಿನೀತಿ ನೋಡಿದರೆ ಈ ದೇಶದ ಹಿತದೃಷ್ಟಿ ಕಾಂಗ್ರೆಸ್ಸಿನವರಿಗೆ ಬೇಕಿಲ್ಲವೆಂಬುದು ಗೊತ್ತಾಗುತ್ತದೆ. ಗಡಿ ಪ್ರದೇಶಗಳು ಎಲ್ಲಾದರೂ ಹೋಗಲಿ ಬೆಳಗಾಂ ಮಹಾರಾಷ್ಟ್ರಕ್ಕೇ ಹೋಗಲಿ, ಅಥವಾ ಇನ್ನೆಲ್ಲಾದರೂ ಹೋಗಲಿ, ಕಾಸರಗೋಡು ಕೇರಳಾಕ್ಕೆ ಹೋಗಲಿ, ಬಾಕಿ ಪ್ರದೇಶಗಳು ಆಂಧ್ರಕ್ಕೇ ಹೋಗಲಿ, ನಮ್ಮ ಅಧಿಕಾರ ಶಾಶ್ವತವಾಗಿ ಇರಬೇಕು ಎನ್ನುವುದು ಯಾವರೀತಿ ಅವರಲ್ಲಿ ವ್ಯಕ್ತಿಗತವಾಗಿದೆ ಎಂಬುದನ್ನು ಮೊನ್ನೆ ದಾವಣಗೆರೆಯಲ್ಲಿ ಚುನಾವಣೆ ನಡೆಯಿತಲ್ಲಾ ಅಲ್ಲಿ ತೋರಿಸಿದ್ದಾರೆ. ಎಲ್ಲರನ್ನೂ ಉಳಿಸಿ ಕೊಳ್ಳತಕ್ಕದ್ದು ಎಲ್ಲರಿಗೂ ಸೀಟು ಕೊಟ್ಟು ಓಟು ಕೊಡಿ ಎನ್ನುವ ರೀತಿಯಲ್ಲಿ ವರ್ಕಿಂಗ್ ಕಮಿಟಿಯವರು ಚುನಾವಣೆಯನ್ನು ದೃಷ್ಟಿಯಲ್ಲಿಟ್ಟುಕೊಂಡು ನಿರ್ಣಯ ಮಾಡಿದ್ದಾ ರೆಂದು ತೋರಿಸುತ್ತದೆ. ಜನತೆಯ ಹಿತ ರಕ್ಷಣೆ ಮರೆತು ಚುನಾವಣೆಯ ಸ್ಟಂಟ್ ಮಾಡತಕ್ಕ ಕಾರ್ಯದಲ್ಲಿ ಕೈಹಾಕಿದ್ದಾರೆ. ಈ ಗಡಿ ಸಮಸ್ಯೆ ಬಗ್ಗೆ ಹರಿಹರ ದಾವಣಗೆರೆಯಲ್ಲಿ ಆದಂಥ ಗೋಲೀ ಬಾರ್ ಪ್ರಕರಣದ ಬಗ್ಗೆ ನ್ಯಾಯಾಂಗ ತನಿಖೆ ಮಾಡಬೇಕಾಗಿತ್ತು. ಅದನ್ನು ಮಾಡದೇ ಇರತಕ್ಕದ್ದು ನೋಡಿದರೆ ಎಷ್ಟರಮಟ್ಟಿಗೆ ಮೈಸೂರು ಕಾಂಗ್ರೆಸ್ ದೇಶದ ಹಿತ ರಕ್ಷಣೆ ಮಾಡಬಲ್ಲದು ಎಂದು ತಿಳಿದುಕೊಳ್ಳಬಹುದು. ಈಗ ಮಹಾರಾಷ್ಟ್ರವಾದಿಗಳು ಸಭೆಯಲ್ಲಿ ಏನು ಇದ್ದಾರೆ ಅವರಿಗೆ ನಾನು ಒಂದು ಮಾತನ್ನು ಹೇಳಬೇಕಾಗಿದೆ. ಮಹಾರಾಷ್ಟ್ರೀಯರಿಗೆ ಈ ಕರ್ನಾಟಕದಲ್ಲಿ ಇರತಕ್ಕ ಯಾವ ಭಾಗ ಗಳೂ ಸೇರಬೇಕಾಗಿಲ್ಲ ಎನ್ನುವ ಸ್ಪಷ್ಟೋಕ್ತಿಯನ್ನು ಏಕಕಂಠದಿಂದ ರಾಜ್ಯದ ಜನತೆ ಹೇಳಿದ್ದಾರೆ. ತಾವು ಬಹುಶಃ ಅದನ್ನು ಒಪ್ಪಿಕೊಳ್ಳಲೇಬೇಕು, ಆ ಬಗ್ಗೆ ಯಾವ ಪ್ರಶ್ನೆಯನ್ನೂ ಕೂಡ ಸಭೆಯಲ್ಲಾಗಲಿ ಹೊರಗಡೆ ಆಗಲಿ ಎಸ್.ಆರ್.ಸಿ. ರಿಪೋರ್ಟ್ ವಿರುದ್ಧ ಎತ್ತತಕ್ಕಂಥದ್ದು ಕಾನೂನಿಗೆ ವಿರೋಧೀ ನಮ್ಮಲ್ಲಿ ಏನು ಪ್ರದೇಶ 10 ವರ್ಷಗಳ ಲಾಗಾಯಿತು ನಮ್ಮ ಸ್ವಾಧೀನದಲ್ಲಿ ತೆಗೆದುಕೊಂಡಿದ್ದೇವೊ. ಅದರ ಮೇಲೆ ಪ್ರಶ್ನೆ ಎತ್ತುವುದಕ್ಕೆ ಕಾನೂನಿನಲ್ಲೂ ಕೂಡ ಅಧಿಕಾರ ಇಲ್ಲ ಎಂದು ಸ್ಪಷ್ಟವಾದ ಮಾತನ್ನು ಹೇಳಬೇಕಾಗಿದೆ. ಮಹಾರಾಷ್ಟ್ರೀಯರು ಹೇಳುತ್ತಿರುವಂತೆ ಅನೇಕ ಪ್ರದೇಶಗಳು ಬರಬೇಕು ಎಂದು ನಾವೂ ಕರ್ನಾಟಕದ ವಿಸ್ತರಣೆ ವಿಚಾರವನ್ನು ನಾವೂ ಹೇಳುವುದಾದರೆ, ಮಹಾರಾಷ್ಟ್ರದ ಎಲ್ಲಾ ಭಾಗಗಳೂ ಹಾಗೂ ಕಾಶ್ಮೀರದ ಅನೇಕ ಭಾಗಗಳೂ ಕೂಡ ಕರ್ನಾಟಕಕ್ಕೆ ಸೇರಬೇಕು ಎಂದು ಇತಿಹಾಸದಲ್ಲೂ ಕೂಡ ಇದೆ ಎಂದು ನಾವು ಹೇಳಬಹುದು. ಹಳ್ಳಿಯಲ್ಲಿ ಕೆಲವು ಕಡೆ ನಾಟಕ ಆಡುತ್ತಾರೆ. ಆ ನಾಟಕದಲ್ಲಿ ಅಂಗ, ವಂಗ, ಕಳಿಂಗ ಇತ್ಯಾದಿ ಚಪ್ಪನ್ನಾರ ದೇಶಗಳು ಕರ್ನಾಟಕಕ್ಕೆ ಸೇರಿ, ಈ ಕರ್ನಾಟಕ ರಾಜ್ಯ ವಿಸ್ತಾರವಾಗಿತ್ತು ಎಂದು ಹೇಳುತ್ತಾರೆ. ಇದು ಎಲ್ಲರಿಗೂ ಗೊತ್ತಿಲ್ಲ ಎಂದು ಕಾಣುತ್ತದೆ. ಆ ಬಯಲು ನಾಟಕ ನೋಡಿದರೆ ಅನೇಕ ವಿಷಯಗಳು ತಿಳಿಯುತ್ತವೆ. ನಾವು ಆ ಚಪ್ಪನ್ನಾರು ದೇಶಗಳನ್ನೂ ಆಕ್ರಮಣ ಮಾಡಬೇಕು ಎಂದು. ಆದರೆ ನಾವು ಆಕ್ರಮಣಕಾರಿ ಅಭಿಪ್ರಾಯ ಹೊಂದಿಲ್ಲ. ದೇಶವನ್ನು ವಿಸ್ತರಣೆ ಮಾಡತಕ್ಕ ಅಭಿಪ್ರಾಯ ಮಾಡಿದವರು ಮಹಾರಾಷ್ಟ್ರೀಯರೇ ಹೊರತು ಕರ್ನಾಟಕದವರು ಅಲ್ಲ ಎಂದು ತಾವು ಚೆನ್ನಾಗಿ ಅರ್ಥ

ಮಾಡಿಕೊಳ್ಳಬೇಕು. ಎಸ್.ಆರ್.ಸಿ. ರಿಪೋರ್ಟಿನ ಮೇಲೆ ಸರ್ಕಾರದವರೇ ಒದಗಿಸಿರತಕ್ಕ ಅಂಕಿ ಅಂಶಗಳನ್ನು ಮೊದಲೇ ಬಹುಶಃ ಒದಗಿಸಬಹುದಾಗಿತ್ತು. ಆ ಬಗ್ಗೆ ಮಾರ್ಗದರ್ಶನ ಸರ್ಕಾರ ಮಾಡಿಲ್ಲ ಎಂದು ವಿಷಾದ ಪಡಬೇಕಾಗಿದೆ. ಅದರಲ್ಲಿ ಹೇಳಿದ್ದಾರೆ:

> " No doubt nearly ten years have elapsed since the re-organisation of States has come into effect. On the one hand, it may be taken as a sufficiently long period for solving a boundary dispute. But on the other hand, it may also be reckoned as an experimental period during which the difficulties, harassments or other injuries, if any, caused to the Marathi speaking people on account of their residing in Karnataka might come to light''.

ಈಗ ಇರತಕ್ಕಂಥ ಭಾಗಗಳಲ್ಲಿ ಮಹಾರಾಷ್ಟ್ರ ಭಾಷೆಯನ್ನು ಮಾತನಾಡತಕ್ಕ ಜನರಿಗೆ ವೈದ್ಯಕೀಯ ಸೌಕರ್ಯವಾಗಲಿ ಸ್ಕೂಲ್‌ಗಳ ಸೌಕರ್ಯವಾಗಲಿ ಕಡಿಮೆ ಮಾಡಿರತಕ್ಕದ್ದು ಅಥವಾ ಅವರ ಮನಸ್ಸಿನ ಮೇಲೆ ಯಾವರೀತಿಯ ನೋವನ್ನು ಉಂಟುಮಾಡತಕ್ಕದ್ದು ಧೃಢ ಆಗಿದ್ದರೆ, ಆ ಸಣ್ಣ ವಿಚಾರವನ್ನು ಚರ್ಚೆ ಮಾಡುವುದಕ್ಕೆ ಮಾತ್ರ ಅವಕಾಶವನ್ನು ಎಸ್.ಆರ್.ಸಿ. ರಿಪೋರ್ಟಿನಲ್ಲಿ ಕೊಟ್ಟಿದ್ದಾರೆ. ಆ ಬಗ್ಗೆ ಒಂದು ಪ್ರಶ್ನೆಯನ್ನಾಗಲೀ ವಿವಾದವನ್ನಾಗಲೀ ಇದುವರೆಗೂ ಕೂಡ ಈ ಸಭೆಯಲ್ಲಾಗಲೀ, ನಮ್ಮ ಸರ್ಕಾರಕ್ಕೆ ಆಗಲಿ ಕಳಿಸಿರತಕ್ಕ ನಿದರ್ಶನಗಳನ್ನು ಅವರು ಹೇಳಬೇಕೆಂದು ಕೋರುತ್ತೇನೆ. ಕರ್ನಾಟಕ ಭಾಗದಲ್ಲಿ ಸೇರಿರತಕ್ಕ ಬೆಳಗ್ಗಾಂ ಜಿಲ್ಲೆಯಲ್ಲಿ ಮಹಾರಾಷ್ಟ್ರ ಭಾಷೆ ಮಾತನಾಡತಕ್ಕವರಿಗೆ ಯಾವ ವಿಚಾರದಲ್ಲಿ ತೊಂದರೆಯಾದರೂ ಅದನ್ನು ಸರಿಪಡಿಸಿಕೊಳ್ಳತಕ್ಕ ಮತ್ತು ಒಳ ಆಡಳಿತಕ್ಕೆ ಸಂಬಂಧಪಟ್ಟ ವಿಚಾರವನ್ನು ಚರ್ಚೆ ಮಾಡತಕ್ಕ ಅವಕಾಶ ಇದೆಯೇ ಹೊರತು, ಬೆಳಗಾಂ ಮಹಾರಾಷ್ಟ್ರಕ್ಕೆ ಸೇರಬೇಕು, ಕಾರವಾರ ಮಹಾರಾಷ್ಟ್ರಕ್ಕೆ ಸೇರಬೇಕು, ಮಹಾರಾಷ್ಟ್ರಕ್ಕೆ ಬೀದರ್ ಜಿಲ್ಲೆ ಸೇರಬೇಕು, ಎನ್ನುವ ವಾದವನ್ನು ಹೂಡುವುದಕ್ಕೆ ಯಾವ ಅವಕಾಶವೂ ಕೂಡ ಎಸ್.ಆರ್.ಸಿ. ರಿಪೋರ್ಟ್ ಪ್ರಕಾರ ಅವರಿಗೆ ಇಲ್ಲ.

ಸ್ವಾಮಿ, ಈರೀತಿ ಚಳುವಳಿಯನ್ನು ಮತ್ತು ಉಗ್ರಪ್ರತಿಭಟನೆಯನ್ನು ಮಹಾರಾಷ್ಟ್ರವಾದಿಗಳು ಮಾಡಿ ದೇಶದಲ್ಲಿ ಬಿಕ್ಕಟ್ಟನ್ನು ಉಂಟು ಮಾಡುವುದಾದರೆ, ನಾನು ಮತ್ತು ನಮ್ಮ ಭಾಗದವರು ಈಗಾಗಲೇ ಹೇಳಿದಂತೆ, ದೇಶಾದ್ಯಂತ ಈ ಭಾಷಾವಾರು ಪ್ರಶ್ನೆ ಉಲ್ಬಣವಾಗುತ್ತದೆ. ಉಚ್ಚ ಮಟ್ಟದ ನ್ಯಾಯಾಲಯವನ್ನೋ ಟ್ರಿಬ್ಯೂನಲ್‌ನ್ನೊ ನೇಮಿಸಿ, ದೇಶಾದ್ಯಂತ ಸಣ್ಣಪುಟ್ಟ ವಿಚಾರಗಳನ್ನು ಇತ್ಯರ್ಥ ಮಾಡುವುದಕ್ಕೆ ಎಲ್ಲರೂ ಸೇರಿ, ಪಾರ್ಲಿಮೆಂಟಿನಲ್ಲಿ ತೀರ್ಮಾನವಾಗತಕ್ಕ ಕಾನೂನು ರಚನೆ ಮಾಡಿ ಇತ್ಯರ್ಥ ಮಾಡಬೇಕಾಗುತ್ತದೆ. ಈಗ ಏಕ ಸದಸ್ಯ ಆಯೋಗವನ್ನು ಮಾಡಿರುವಂಥಾದ್ದು ಶುದ್ಧ ಅವಿವೇಕತನ ಮತ್ತು ದೇಶದ ದೌರ್ಭಾಗ್ಯ ಎಂದು ಹೇಳುತ್ತೇನೆ. ಇದಕ್ಕೆ ಪ್ರತಿಭಟನೆ ಮಾಡಬೇಕು. ಒಂದುವೇಳೆ ಕಾಂಗ್ರೆಸ್ ಸರ್ಕಾರ ನಮ್ಮ ಅಹವಾಲಿಗೆ ಒಪ್ಪದೆ, ಮಣಿಯದೆ ಹಿತರಕ್ಷಣೆ ಮಾಡದೇ ಹೋದರೆ ನಾನು ಹೇಳುತ್ತೇನೆ, ಯೂನಿಟರಿ ಟೈಪ್ ಆಫ್ ಗವರ್ನಮೆಂಟ್ ಆಗಬೇಕು. ಕಾಂಗ್ರೆಸ್ ತಾನೇ ಅಧಿಕಾರವನ್ನು ಮಾಡಬೇಕು ಎಂದು ಅಧಿಕಾರದ ಮಮತೆಯಿಂದ ದೇಶದ ಭದ್ರತೆ ಕಾಪಾಡದೇ ಇರತಕ್ಕ ಪರಿಸ್ಥಿತಿ ನೋಡಿದರೆ ದೇಶದಲ್ಲಿ ಈ ಫೆಡರಲ್ ಸ್ಟೇಟ್ ವ್ಯವಸ್ಥೆ ಹೋಗಬೇಕು. ಆಡಳಿತ ದೃಷ್ಟಿಯಿಂದ ದೇಶವನ್ನು ಘಟಕಗಳನ್ನಾಗಿ ಮಾಡಿ ಯೂನಿಟರಿ ಟೈಪ್ ಆಫ್ ಗವರ್ನಮೆಂಟ್ ದೇಶದಲ್ಲಿ ಬರಬೇಕು. ನಮಗೆ ಶ್ರೀ ನಿಜಲಿಂಗಪ್ಪನವರ ನಾಯಕತ್ವ ಬೇಡ. ನಮಗೆ ವಿ.ಪಿ. ನಾಯಕರ ನಾಯಕತ್ವ ಬೇಡ. ಎಲ್ಲಾ ಮುಖ್ಯಮಂತ್ರಿಗಳನ್ನೂ ರದ್ದುಮಾಡಿ ಯೂನಿಟರಿ ಟೈಪ್ ಆಫ್ ಗವರ್ನಮೆಂಟ್ ಜಾರಿಗೆ ತಂದರೆ ಬಹುಶಃ ಪ್ರಜಾಪ್ರಭುತ್ವ ಯಶಸ್ವಿಯಾಗುವುದಕ್ಕೆ ಕಾರಣವಾಗಬಹುದು ಎನ್ನತಕ್ಕಂಥ ಹೊಸ ವಿಚಾರಗಳು ಜನತೆಯ ಮನಸ್ಸಿನಲ್ಲಿ ಬರುತ್ತಾ ಇವೆ. ಈ ವಿಚಾರವಾಗಿ ಅನೇಕ ತಜ್ಞರು ಅಲ್ಲಲ್ಲಿ ಹೇಳಿಕೆಯನ್ನು ಕೊಟ್ಟಿದ್ದಾರೆ, ಭಾಷಾವಾರು ಪ್ರಾಂತಗಳ ವಿಂಗಡಣೆ ವಿಚಾರದಲ್ಲಿ, ಈಗಾಗಲೇ ಗಡಿ ಇತ್ಯರ್ಥವಾಗಿರತಕ್ಕ ಎಲ್ಲ ಸ್ಟೇಟ್‌ಗಳಲ್ಲಿಯೂ ಕೂಡ ಭಿನ್ನಾಭಿಪ್ರಾಯಗಳು ತಲೆದೋರಿ ಚೈನಾ ಮತ್ತು ಪಾಕೀಸ್ಥಾನದವರು ಧಾಳಿ ಮಾಡಲು ಉದ್ಯುಕ್ತರಾಗಿರುವ ಈ ಸಮಯದಲ್ಲಿ ದೇಶದ ಐಕ್ಯತೆಗೆ ಒಗ್ಗಟ್ಟಿಗೆ ಚ್ಯುತಿ ಬರತಕ್ಕ ಪರಿಸ್ಥಿತಿ ಉಂಟಾಗಬಾರದು ಇದು ಆಗುವುದಾದರೆ, ನಾವು ಏಕಕಂಠದಿಂದ ಕೇಂದ್ರಿಕೃತವಾದ ಯೂನಿಟರಿ ಟೈಪ್ ಆಫ್ ಗವರ್ನಮೆಂಟ್ ಆಗಬೇಕು. ಅದರಿಂದ ಬಹಳ ದೇಶದ ಸುಭದ್ರತೆ ಉಳಿಯಬಹುದು ಎಂದು ಅಭಿಪ್ರಾಯಪಟ್ಟು ಕಾಂಗ್ರೆಸ್ಸಿನವರು ಮಾಡಿರತಕ್ಕ ಏಕ ಸದಸ್ಯ ಆಯೋಗವನ್ನು ರದ್ದು ಮಾಡಬೇಕು ಎಂದು ಹೇಳುತ್ತೇವೆ. ಅವರು ರದ್ದು ಮಾಡದೇ ಹೋದರೆ ಇದರಿಂದ ಅನೇಕ ದುಷ್ಪರಿಣಾಮಗಳನ್ನು ಎದುರಿಸಬೇಕಾಗುತ್ತದೆಂದು ಕಾಂಗ್ರೆಸ್ಸಿನವರಿಗೆ ಎಚ್ಚರಿಕೆ ಕೊಟ್ಟು ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಜಿ. ವಿ. ಗೌಡ (ಪಾಳ್ಯ).—ಮಾನ್ಯ ಅಧ್ಯಕ್ಷರೇ, ಈ ನಿರ್ಣಯವನ್ನು 4 ದಿವಸದಿಂದಲೂ ಚರ್ಚೆ ಮಾಡುತ್ತಾ ಇದ್ದೇವೆ. ಚರ್ಚೆ ಮಾಡಿದ ಒಂದು ಪ್ರಯೋಜನ ಏನು ಎಂದು ಹೇಳಿ ನನಗಾದರೂ ಅರ್ಥವಾಗುತ್ತಾ ಇಲ್ಲ ಈ ಮಾನ್ಯ ಸಭೆ ಒಂದು ಸ್ಪಷ್ಟವಾದ ನಿಲುವನ್ನು ಈ ವಿಚಾರದಲ್ಲಿ ತೆಗೆದುಕೊಳ್ಳದೆ ಇದ್ದರೆ ಬಹುಶಃ ಚರ್ಚೆ ಅಪ್ರಯೋಜಕ ಆದೀತು ಎನ್ನತಕ್ಕ ವಿಚಾರವನ್ನು ಮಾತ್ರ ನಾನು ಹೇಳುತ್ತಾ ಇದ್ದೇನೆ. ಮೈಸೂರು ಸರ್ಕಾರ ಏಕ ಸದಸ್ಯ ಆಯೋಗ ನೇಮಿಸಲಿಕ್ಕೆ ಬಹುಶಃ ಒಪ್ಪಿಕೊಂಡಿದೆ ಎಂದು ನಾನಾದರೂ ತಿಳಿದುಕೊಂಡಿದ್ದೇನೆ. ಮಹಾರಾಷ್ಟ್ರದ ಮುಖ್ಯ ಮಂತ್ರಿಗಳು ಇಲ್ಲಿಗೆ 7ನೇ ತಾರೀಖು ದಯಮಾಡಿಸುತ್ತಾ ಇದ್ದಾರೆ. ನಮ್ಮ ಮುಖ್ಯ ಮಂತ್ರಿಗಳು ಮತ್ತು ಅವರಲ್ಲಿ ಈ ಬಗ್ಗೆ ವಿಚಾರ ವಿನಿಮಯ ಆಗಬೇಕಾಗುತ್ತದೆ. ಆದರೆ, ಇಲ್ಲಿಯವರೆಗೆ ಮೈಸೂರು ದೇಶದ ನಾಯಕತ್ವ ಹಾಗೂ ಮೈಸೂರು ಸರ್ಕಾರ ಈ ಗಡಿ ಸಮಸ್ಯೆ ಪರಿಹಾರದಲ್ಲಿಯಾಗಲಿ, ಹೊರಗೆ ಇರತಕ್ಕ ಕನ್ನಡ ಪ್ರದೇಶಗಳನ್ನು ಮೈಸೂರಿನಲ್ಲಿ ಸೇರಿಸುವುದರಲ್ಲಿಯಾಗಲೀ ವಿಫಲವಾಗಿದೆ. ಈ ಮಾನ್ಯ ಸಭೆ ಈ ವಿಷಯವನ್ನು ಗಮನಕ್ಕೆ ತೆಗೆದುಕೊಂಡು ವಿಚಾರವಿನಿಮಯ ಮಾಡುವ ಕಾಲದಲ್ಲಿ ಸ್ಪಷ್ಟವಾಗಿ ನಮ್ಮ ಅಭಿಪ್ರಾಯವನ್ನು ಇಡಬೇಕಾದ್ದು ಅಗತ್ಯ ಎಂದು ನಾನಾದರೂ ಭಾವಿಸುತ್ತೇನೆ. ಏಕೆಂದರೆ ತಪ್ಪೋ ಅಥವಾ ಅಲ್ಲವೋ, ಆಯೋಗ ಆಗಬೇಕು ಎನ್ನುವ ವಿಚಾರವಾಗಿದೆ. ಮುಖ್ಯ ಮಂತ್ರಿಗಳು ಈ ವಿಚಾರದಲ್ಲ ಮಾತನಾಡುತ್ತಾ ಇದ್ದಾರೆ.

11-30 A.M.

ಆದರೆ ಮುಖ್ಯವಾಗಿ ಈ ಗಡಿ ಸಮಸ್ಯೆಗೆ ಸಂಬಂಧಪಟ್ಟಹಾಗೆ ಈ ಸಭೆಯ ಸ್ಪಷ್ಟವಾದ ಅಭಿಪ್ರಾಯ ಏನು ಎನ್ನತಕ್ಕಂಥಾದ್ದನ್ನು ತಿಳಿದುಕೊಂಡು ಆ ವಿಚಾರದಲ್ಲಿ ಒಂದು ಸ್ಪಷ್ಟವಾದ ಧೋರಣೆಯನ್ನು ತಳೆಯಬೇಕಾದ್ದು ಅನಿವಾರ್ಯ ಎಂದು ನಾನು ಭಾವಿಸುತ್ತೇನೆ. ಗಡಿ ಸಮಸ್ಯೆಯನ್ನ ನಾವು ರಾಜ್ಯಾಂಗ ಶಾಸನ ಕಾನೂನು ಹಾಗೂ ವ್ಯವಹಾರಿಕ ದೃಷ್ಟಿಯಿಂದ ನೋಡಬೇಕಾದ್ದು ಅಗತ್ಯ. ಗಡಿಗಳ ಪ್ರದೇಶದಲ್ಲಿ ಇರತಕ್ಕ ಸಣ್ಣಪುಟ್ಟ ವ್ಯತ್ಯಾಸಗಳನ್ನು ಸಣ್ಣಪುಟ್ಟ ಗಡಿ ಹೊಂದಾಣಿಕೆಗಳನ್ನು ಬೇಕಾದರೆ ವಿಚಾರ ಮಾಡಬಹುದು. ಆದರೆ ಯಾವ ಒಂದು ತೀರ್ಮಾನ ಬೇರೆ ಬೇರೆ ಪ್ರದೇಶಗಳ ಬಗ್ಗೆ ಆಗಿದೆಯೋ ಆ ತೀರ್ಮಾನವನ್ನು ಪುನರ್‌ವಿಮರ್ಶೆ ಮಾಡತಕ್ಕಂಥಾದ್ದು ರಾಜ್ಯಾಂಗ ಬಾಹಿರವಾಗುತ್ತದೆ. ಯಾವುದಾದರೂ ಒಂದು ವಿಷಯವನ್ನು ರಿವ್ಯೂ (review) ಮಾಡಬೇಕಾದರೆ ಅದರ ಬಗ್ಗೆ ಒಂದು ತೀರ್ಮಾನವನ್ನು ಕೈಗೊಂಡಮೇಲೆ ಕೆಲವೇ ದಿವಸಗಳಲ್ಲಿ ಅದರಲ್ಲಿ ಏನಾದರೂ ತಪ್ಪು ನೆಪ್ಪುಗಳಿದ್ದರೆ ಅವುಗಳನ್ನು ಸರಿಪಡಿಸಬಹುದು. ಆದರೆ ಅದನ್ನು ಪುನರ್ವಿಮರ್ಶೆ ಮಾಡುವುದಕ್ಕೆ ಅವಕಾಶವಿಲ್ಲ. ಒಂದು ವಿಷಯ ಸ್ಪಷ್ಟವಾಗಿ ಇತ್ಯರ್ಥವಾಗಿ 10 ವರ್ಷಗಳು ಕಳೆದಮೇಲೆ ಅದನ್ನು ರಿವ್ಯೂ ಮಾಡತಕ್ಕ, ಪುನರ್ವಿಮರ್ಶೆ ಮಾಡತಕ್ಕ ಪ್ರಶ್ನೆ ಉದ್ಭವಿಸುತ್ತದೆಯೋ ಎಂಬುದು ನಮ್ಮ ಮಾನ್ಯ ಅಧ್ಯಕ್ಷರಿಗೆ ಚೆನ್ನಾಗಿ ಗೊತ್ತಿದೆ. ಅಂದ ಮೇಲೆ ಈಗಾಗಲೇ ತೀರ್ಮಾನವಾಗಿರತಕ್ಕ ಗಡಿ ವಿಷಯಗಳನ್ನು ಈಗ ಪುನರ್ವಿಮರ್ಶೆ ಮಾಡುವುದಕ್ಕೆ ಆಸ್ಪದವಿಲ್ಲ, ಅವಕಾಶವಿಲ್ಲ ಎಂಬುದನ್ನು ನಾವುಗಳೆಲ್ಲರೂ ತಿಳಿದುಕೊಳ್ಳಬೇಕಾಗಿದೆ. ಏಕಸದಸ್ಯ ಆಯೋಗವನ್ನು ನೇಮಕ ಮಾಡತಕ್ಕಂಥ ಉದ್ದೇಶ ಗಡಿ ಪ್ರದೇಶದಲ್ಲಿ ಸಣ್ಣಪುಟ್ಟ ವ್ಯತ್ಯಾಸಗಳ, ಸಣ್ಣಪುಟ್ಟ ಹೊಂದಾಣಿಕೆಗಳ ಬಗ್ಗೆ ವಿಚಾರ ವಿನಿಮಯ ಮಾಡಿಕೊಂಡು ಒಂದು ತೀರ್ಮಾನಕ್ಕೆ ಬರುವುದಕ್ಕೆ ಸಾಧ್ಯ ಎಂಬುದನ್ನು ಪರ್ಯಾಲೋಚನೆ ಮಾಡಲಿಕ್ಕೆ ಇರಬಹುದು ಎಂದು ನಾನು ಭಾವಿಸುತ್ತೇನೆ. ಆದ್ದರಿಂದ ಮಾನ್ಯ ಮುಖ್ಯ ಮಂತ್ರಿಗಳು ಈ ಮಾನ್ಯ ಸಭೆಯನ್ನು ವಿಶ್ವಾಸಕ್ಕೆ ತೆಗೆದುಕೊಂಡು ಈ ಬಗ್ಗೆ ಈ ಸಭೆಯವರ ಅಭಿಪ್ರಾಯ ಏನಿದೆ ಎಂಬುದನ್ನು ತಿಳಿದುಕೊಂಡು ಅದರಂತೆ ಒಪ್ಪತಕ್ಕದ್ದು ಅಗತ್ಯ ಎಂದು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ. ಆಮೇಲೆ ಗಡಿ ಸಮಸ್ಯೆಯ ಬಗ್ಗೆ ಸಣ್ಣಪುಟ್ಟ ಹೊಂದಾಣಿಕೆಯ ವಿಚಾರವನ್ನು ಮಾತನಾಡುವಾಗ ಅದಕ್ಕೆ ಮಾತ್ರ ವಿಚಾರ ವಿನಿಮಯ ಮಾಡಲು ಅವಕಾಶವಿದೆಯೇ ಹೊರತು ಬೇರೆ ವಿಚಾರಗಳನ್ನು ಮಾತನಾಡಲು ಅವಕಾಶ ಇರುವುದಿಲ್ಲ ಎಂದು ಮಾನ್ಯ ಮುಖ್ಯಮಂತ್ರಿಗಳು ಸ್ಪಷ್ಟವಾಗಿ ಹೇಳಬೇಕು. ಮತ್ತು ಈ ವಿಚಾರಗಳನ್ನು ಮಾತನಾಡುವಾಗ ನಮ್ಮ ದೇಶದ ಭದ್ರತೆ ಮತ್ತು ನಮ್ಮ ದೇಶದ ಹಿತದೃಷ್ಟಿಯನ್ನು ಗಮನದಲ್ಲಿಟ್ಟುಕೊಂಡು ಸ್ಪಷ್ಟವಾಗಿ ಅದನ್ನು ಚರ್ಚೆ ಮಾಡಬೇಕು. ಟರ್ಮ್ಸ್ ಆಫ್ ರೆಫರೆನ್ಸಸ್ ಏನು, ಯಾವ ವಿಚಾರವನ್ನು ಪರಿಶೀಲನೆ ಮಾಡುವುದಕ್ಕೆ ಏಕಸದಸ್ಯ ಆಯೋಗವನ್ನು ನೇಮಿಸಬೇಕೆಂಬುದನ್ನು ಸ್ಪಷ್ಟಪಡಿಸುವುದಕ್ಕೆ ಮೊದಲೇ ಇಂಥಾ ಆಯೋಗವನ್ನು ನೇಮಿಸುತ್ತೇವೆಂದು ಹೇಳತಕ್ಕಂಥ ಮಾತಿನಲ್ಲಿ ಎಷ್ಟರಮಟ್ಟಿನ ಪ್ರಯೋಜನವಿದೆ ಎಂಬುದನ್ನು ತಿಳಿದುಕೊಳ್ಳಬೇಕಾಗಿದೆ. ಆದ್ದರಿಂದ ಇಡೀ ಒಂದು ವಿಚಾರವನ್ನು ತೆಗೆದುಕೊಳ್ಳುವುದಾದರೆ, ಆ ಬಗ್ಗೆ ನಮ್ಮ ಕನ್ನಡ ನಾಡಿನ ಜನತೆಯ ಅಭಿಪ್ರಾಯ ಏನಿದೆ ಎಂಬುದನ್ನು ತಿಳಿದುಕೊಳ್ಳದೆ ಏಕಸದಸ್ಯ ಆಯೋಗವನ್ನು ನೇಮಿಸಬೇಕೆಂದು

ಕಾಂಗ್ರೆಸ್ ವರ್ಕಿಂಗ್ ಕಮಿಟಿಯವರು ಒಂದು ನಿರ್ಣಯವನ್ನು ತೆಗೆದುಕೊಂಡಿದ್ದರಿಂದ ಅದನ್ನು ವಿರೋಧಿಸಲು, ಪ್ರತಿಭಟಿಸಲು ಕನ್ನಡ ನಾಡಿನ ಜನತೆ ಒಂದು ಚಳುವಳಿಯನ್ನು ನಡೆಸಿದ್ದಾರೆ. ಎಂದಮೇಲೆ ಕನ್ನಡ ನಾಡಿನ ಜನತೆಯ ಅಭಿಪ್ರಾಯ ಏನು ಎನ್ನುವುದು ಸರ್ಕಾರಕ್ಕೆ ಗೊತ್ತಿದೆ. ಜನತೆಯ ಅಭಿಪ್ರಾಯಕ್ಕೆ ಸರ್ಕಾರ ಮನ್ನಣೆಯನ್ನು ಕೊಡದಿದ್ದರೆ ಇವೊತ್ತಿನ ದಿವಸ ಪ್ರಜಾ ಪ್ರಭುತ್ವಕ್ಕೆ ಹಾನಿಯಾಗುತ್ತದೆ ಎನ್ನತಕ್ಕಂಥಾದ್ದನ್ನು ಮಾನ್ಯ ಮುಖ್ಯಮಂತ್ರಿಗಳಾಗಲೀ, ಸರ್ಕಾರ ವಾಗಲೀ ತಿಳಿದುಕೊಂಡು ಆ ವಿಚಾರವನ್ನು ಮುಂದೆ ಪರಿಶೀಲನೆ ಮಾಡಬೇಕಾದ್ದು ಅನಿವಾರ್ಯ ಎಂದು ನಾನು ಸರ್ಕಾರಕ್ಕೆ ಒತ್ತಾಯಪೂರ್ವಕವಾಗಿ ಹೇಳುತ್ತೇನೆ.

ಇನ್ನು, ಸ್ವಾಮಿ, ತಮಗೆ ಗೊತ್ತಿರುವ ಹಾಗೆ ಭಾಷಾವಾರು ಪ್ರಾಂತ ರಚನೆಯಿಂದ ನಮಗೆ ಬಹಳವಾಗಿ ಕೆಟ್ಟ ಪರಿಣಾಮಗಳು ಆಗಿವೆ ಎನ್ನುವ ವಿಚಾರವನ್ನು ಅನುಭವಿಗಳು ದೊಡ್ಡ ದೊಡ್ಡ ಪರಿಣತರೇ ಹೇಳುತ್ತಿದ್ದಾರೆ. ಮತ್ತು ನಾವು ಕೂಡ ಅದನ್ನು ಕಣ್ಣಾರೆ ನೋಡುತ್ತಿದ್ದೇವೆ. ಯಾರು ಭಾಷಾವಾರು ಪ್ರಾಂತವನ್ನು ರಚಿಸುವುದಕ್ಕೆ ಹೋರಾಟವನ್ನು ನಡೆಸಿದರೋ ಅಂಥವರ ಮನಸ್ಸೂ ಸಹ ಈಗ ಪರಿವರ್ತನೆಯಾಗಿದೆ. ದೇಶದ ಒಂದು ಭದ್ರತೆಗೆ, ದೇಶದ ಒಂದು ಭಾವೈಕ್ಯತೆಗೆ ಅವಕಾಶವನ್ನು ಕೊಡದೇ ಇರತಕ್ಕ ರೀತಿಯಲ್ಲಿ ಕೆಲಸಗಳು ಆಗುತ್ತಿವೆ. ಈಗ ಪರಿಣತರು ಅಭಿಪ್ರಾಯ ಪಟ್ಟಿರುವಂತೆ ಉಂಟಾಗಿರತಕ್ಕ ಕೆಟ್ಟ ಪರಿಣಾಮಗಳನ್ನು ಇನ್ನು ಮುಂದೆಯಾದರೂ ಸರಿಪಡಿಸು ವಂತಹ ಯೋಚನೆಯನ್ನು ಮಾಡದಿದ್ದರೆ ನಿಜವಾಗಿಯೂ ಜನತೆ ಸರ್ಕಾರದಿಂದ ಏನನ್ನು ನಿರೀಕ್ಷಣೆ ಮಾಡಿದೆಯೋ ಅದನ್ನು ಕೊಡುವುದಕ್ಕೆ ಸಾಧ್ಯವಾಗುವುದಿಲ್ಲ. ಭಾಷೆಯ ಆಧಾರದಮೇಲೆ ಒಂದು ರಾಜ್ಯವನ್ನು ಕಟ್ಟುತ್ತೇವೆ ಎಂದು ಹೊರಟರೆ ಆಗ ಕೆಲವರು ಆಡಳಿತಕ್ಕೆ ಅನುಗುಣವಾಗಿ ರಾಜ್ಯ ವನ್ನು ವಿಂಗಡಣೆ ಮಾಡಬೇಕು ಎಂದು ಹೇಳಬಹುದು. ಒಂದು ರಾಜ್ಯದಲ್ಲಿ ಅಥವಾ ಒಂದು ಪ್ರಾಂತದಲ್ಲಿ ಶೇಕಡಾ 70 ರಷ್ಟು ಜನ ಒಂದೇ ಭಾಷೆಯನ್ನು ಮಾತನಾಡುವವರು ಇದ್ದರೆ ಆಡಳಿತಕ್ಕೆ ಅನುಕೂಲವಾಗುತ್ತದೆ ಎನ್ನುವ ದೃಷ್ಟಿಯಿಂದ ಅದನ್ನೇ ಆಧಾರವಾಗಿಟ್ಟುಕೊಂಡು ರಾಜ್ಯವನ್ನು ವಿಂಗಡಣೆ ಮಾಡಬೇಕೆಂದು ಹೇಳಿದರೆ ಬಹುಶಃ ಒಂದು ಭಾಷೆಯ ಜನ ಒಂದೇ ರಾಜ್ಯದಲ್ಲಿ ಇರಬೇಕು ಎಂದು ಹೇಳಿದ ಹಾಗಾಗುತ್ತದೆ. ಈ ಒಂದು ಸೂತ್ರ ನಮಗೆ ಎಲ್ಲಿಯೂ ಕಂಡಬರುವುದಿಲ್ಲ. ಆ ರೀತಿ ನಮ್ಮ ಪರಿಣತರು ಯೋಚನೆ ಮಾಡಿಲ್ಲ. ಆಡಳಿತದ ಹಿತದೃಷ್ಟಿಯಿಂದ, ಭೌಗೋಳಿಕವಾಗಿ, ಸಾಂಸ್ಕೃತಿಕವಾಗಿ ಜನತೆಯ ಭಾಷೆಯ ಹೊಂದಾಣಿಕೆಯನ್ನು ನೋಡಿಕೊಂಡು ರಾಜ್ಯವನ್ನು ವಿಂಗಡಣೆ ಮಾಡಿದರೆ ರಾಷ್ಟ್ರದ ಭದ್ರತೆ ಚೆನ್ನಾಗಿ ಆಗಬಹುದು, ರಾಜ್ಯದ ಆಡಳಿತ ಸುಸೂತ್ರವಾಗಿ ನಡೆಯುವ ಹಾಗೆ ಆಗಬಹುದು ಎನ್ನುವ ದೃಷ್ಟಿಯಿಂದ ಪ್ರಾಂತ ಪುನರ್ವಿಂಗಡಣೆಯನ್ನು ಮಾಡಿ ದರು. ಆದರೆ ಅದರ ರೋಗ ಈಗ ವಿಪರೀತವಾಗಿ ಪರಿಣಮಿಸಿದೆ. ಇದೇ ರೀತಿ ಮುಂದುವರಿದರೆ ಬಹುಶಃ ಪ್ರತಿಯೊಂದು ರಾಜ್ಯದವರು ಇಂಥಾ ಒಂದು ಸಣ್ಣ ದಾರಿಯನ್ನು ಹಿಡಿದದ್ದೇ ಆದರೆ ಅದು ದೇಶದ ಭದ್ರತೆಗೆ ಅಪಾಯವಾಗುತ್ತದೆ ಎಂದು ಸರ್ಕಾರದವರು ಸ್ಪಷ್ಟವಾಗಿ ತಿಳಿದುಕೊಳ್ಳಬಹುದು. ಮಾನ್ಯ ಮುಖ್ಯ ಮಂತ್ರಿಗಳು ಈ ವಿಚಾರದಲ್ಲಿ ಈ ಮಾನ್ಯ ಸಭೆಯ ಸ್ಪಷ್ಟವಾದ ಅಭಿಪ್ರಾಯವನ್ನು ಮುಂದೆ ಸಮಾಲೋಚನೆ ಮಾಡುವ ಸಂದರ್ಭದಲ್ಲಿ ಹೇಳಬೇಕು. ಈಗಾಗಲೇ ಮಹಾರಾಷ್ಟ್ರದ ಮುಖ್ಯಮಂತ್ರಿಗಳು ಅಲ್ಲಿಯ ಶಾಸನ ಸಭೆಯವರ ಒಮ್ಮತ ಅಭಿಪ್ರಾಯವನ್ನು ತಿಳಿದುಕೊಂಡು ಇಲ್ಲಿ ಮಾನ್ಯ ಮುಖ್ಯಮಂತ್ರಿಗಳೊಡನೆ ಚರ್ಚೆ ಮಾಡಲು ಬೆಂಗಳೂರಿಗೆ ಈ ತಿಂಗಳು 7ನೆಯ ತಾರೀಖು ಬರುವವರಾಗಿದ್ದಾರೆ. ಅದೇ ರೀತಿ ನಮ್ಮ ಮಾನ್ಯ ಮುಖ್ಯಮಂತ್ರಿಗಳೂ ಸಹ ಈ ಗಡಿಯ ಸಮಸ್ಯೆಯ ವಿಚಾರದಲ್ಲಿ ಈ ಸಭೆಯ ಸ್ಪಷ್ಟವಾದ ಅಭಿಪ್ರಾಯ ಏನು ಎಂಬುದನ್ನು ಮನಗಾಣ ಬೇಕು. ಈ ಅಭಿಪ್ರಾಯವನ್ನು ಸ್ಪಷ್ಟವಾಗಿ ಅವರ ಮುಂದೆ ಇಡಬೇಕು. ನಮ್ಮ ಮುಖ್ಯಮಂತ್ರಿ ಗಳು ಬಹಳ ಒಳ್ಳೆಯವರೆಂದು ಅನೇಕ ಜನ ಹೇಳುತ್ತಾರೆ. ನಾನು ಅದನ್ನು ಇಲ್ಲ ಎಂದು ಹೇಳು ವುದಿಲ್ಲ. ಅವರ ಒಳ್ಳೆಯ ತ್ಯಾಗ ಬುದ್ಧಿಯನ್ನು ನಾನು ಒಪ್ಪಿಕೊಳ್ಳುತ್ತೇನೆ. ಆದರೆ ಈ ಗಡಿ ಸಮಸ್ಯೆಯ ವಿಷಯದಲ್ಲಿ ಅವರು ಈ ಮಾನ್ಯ ಸಭೆಯ ಅಭಿಪ್ರಾಯ ಏನಿದೆ ಎಂಬುದನ್ನು ತಿಳಿದು ಕೊಂಡು ಅದರ ಕಾರ್ಯವ್ಯಾಪ್ತಿಯಲ್ಲಿ ಧೈರ್ಯವಾಗಿ ಸ್ವಲ್ಪ ಗಟ್ಟಿ ಮನಸ್ಸು ಮಾಡಿ ಅವರು ವಿಚಾರ ವಿನಿಮಯ ಮಾಡಬೇಕು. ಇಲ್ಲದೇ ಹೋದರೆ ಮೈಸೂರಿಗೆ ಹಾನಿಯಾಗುತ್ತದೆ ಎನ್ನುವ ವಿಚಾರ ವನ್ನು ನಾನು ಹೇಳುತ್ತೇನೆ. ತಮಗೆ ಗೊತ್ತಿದೆ. ಈಗಾಗಲೇ ಕಾರ್ಯಗತವಾಗಿರತಕ್ಕ ಮೂರು ಪಂಚವಾರ್ಷಿಕ ಯೋಜನೆಗಳಲ್ಲಿ ಸಾಮಾನ್ಯ ಮನುಷ್ಯನಿಗೆ ಬೇಕಾದ ಮೂಲಭೂತ ಅವಶ್ಯಕತೆಗಳನ್ನು ಪೂರೈಸುವುದಕ್ಕೆ ಸಾಧ್ಯವಾಗಿಲ್ಲ. ಇದಕ್ಕೆ ಅನೇಕ ಕಾರಣಗಳಿವೆ. ಆಡಳಿತ ಲೋಪದೋಷಗಳೂ ಇವೆ. ಮತ್ತು ಇನ್ನೂ ಇತರ ಬೇಕಾದಷ್ಟು ಕಾರಣಗಳು ಇವೆ. ಇವೊತ್ತಿನದಿವಸ ಯಾವ ಒಂದು ಸಂಸ್ಥೆಯವರು ಸರ್ಕಾರದ ಆಡಳಿತವನ್ನು ಇಟ್ಟುಕೊಂಡಿದ್ದಾರೆಯೋ ಅವರು ಮೊಟ್ಟಮೊದಲನೆಯ ದಾಗಿ ದೇಶದ ಭದ್ರತೆಗೆ, ದೇಶದ ಜನಜೀವನ ಸುಗಮವಾಗುವುದಕ್ಕೆ ಏನು ಕರ್ತವ್ಯಗಳನ್ನು ಮಾಡ ಬೇಕೋ ಅದರ ಕಡೆಗೆ ಅವರು ದೊಡ್ಡ ಪ್ರಮಾಣದಲ್ಲಿ ಗಮನವನ್ನು ಕೊಡಬೇಕು. ಇವೊತ್ತು ಆಡಳಿತ

(ಶ್ರೀ ಜಿ. ವಿ. ಗೌಡ)

ಪಕ್ಷದವರು ಇಲ್ಲದ ಸಲ್ಲದ ವಿಚಾರಗಳಿಗೆ ಮನಸ್ಸು ಕೊಟ್ಟು ಇಲ್ಲದೆ ಇರುವ ಸಮಸ್ಯೆಗಳು ಉದ್ಭವವಾಗುತ್ತವೆ. ಅವುಗಳನ್ನು ಪರಿಹಾರಮಾಡುವಾಗ ಗೊಂದಲ ಉಂಟಾಗುತ್ತದೆ. ಅದರಿಂದ ದೇಶಕ್ಕೆ ನಷ್ಟವೂ ಆಗುತ್ತದೆ, ಮತ್ತು ಹಾನಿಯೂ ಆಗುತ್ತದೆ, ಮತ್ತು ಕಾಲವೂ ವ್ಯಯವಾಗುತ್ತದೆ. ಇಂಥಾ ಒಂದು ಹಿನ್ನೆಲೆಯಲ್ಲಿ, ಸನ್ನಿವೇಶದಲ್ಲಿ ನಾವು ಈ ವಿಚಾರಗಳನ್ನು ಯೋಚನೆ ಮಾಡುವುದು ಅಗತ್ಯ ಎಂದು ನಾನು ಹೇಳುತ್ತೇನೆ. ಇವೊತ್ತು ನಮ್ಮ ದೇಶದಲ್ಲಿ ಆರ್ಥಿಕ ಅಭಿವೃದ್ಧಿಯಾಗಬೇಕು, ದೇಶದಲ್ಲಿ ಅಭಿವೃದ್ಧಿ ಕಾರ್ಯಗಳು ನಡೆಯಬೇಕು, ಜನಜೀವನವನ್ನು ಉತ್ತಮಪಡಿಸಬೇಕು ಎಂದು ಹೇಳುವಂತಹ ಸಮಯದಲ್ಲಿ ಈ ಗಡಿ ಸಮಸ್ಯೆಯ ವಿಚಾರದಲ್ಲಿ ಇಂಥಾ ಒಂದು ತೀರ್ಮಾನವನ್ನು ತೆಗೆದುಕೊಳ್ಳುವಾಗ ಕಾಂಗ್ರೆಸ್ ಕಾರ್ಯ ಸಮಿತಿಯವರಾಗಲೀ, ಸರ್ಕಾರದವರಾಗಲೀ ಯಾವ ಒಂದು ವಿಷಯವನ್ನೂ ಸಹ ಯೋಚನೆ ಮಾಡಿಲ್ಲ. ದೇಶದಲ್ಲಿ ಕಷ್ಟ ಪರಿಸ್ಥಿತಿ ಇರುವ ಸಮಯದಲ್ಲಿ ಜನಗಳಿಗೆ ಯಾವ ಅನುಕೂಲಗಳೂ ಇಲ್ಲದೇ ಇರತಕ್ಕ ಮತ್ತು ಗೊಂದಲವನ್ನುಂಟುಮಾಡತಕ್ಕ 4-6 ಕೆಲಸಗಳನ್ನು ಸರ್ಕಾರದವರು ಮಾಡಿದ್ದಾರೆ. ಇವೊತ್ತಿನ ಪರಿಸ್ಥಿತಿಯಲ್ಲಿ ಪಂಜಾಬಿಸುಬಾವನ್ನು ರಚನೆ ಮಾಡತಕ್ಕ ಅವಶ್ಯಕತೆ ಏನಿತ್ತು? ಇಂಥಾ ಕಷ್ಟಕಾಲದಲ್ಲಿ ರೂಪಾಯಿ ಅಪಮೌಲ್ಯ ಮಾಡಿದ್ದು ಸರಿಯೇ? ಜನಜೀವನಕ್ಕೆ ಯಾವರೀ ಯಲ್ಲಿಯೂ ಅನುಕೂಲ ಇಲ್ಲದೆ ಇರತಕ್ಕಂಥ, ಸಾರ್ಥಕ ಇಲ್ಲದೇ ಇರತಕ್ಕ ಕೆಲಸಗಳನ್ನು ಸರ್ಕಾರದವರು ಮಾಡಿದ್ದಾರೆ. ಗಂಡಾಂತರಕಾರಿಯಾದ, ಜನತೆಗೆ ಯಾವ ಅನುಕೂಲತೆಯೂ ಇಲ್ಲದೆ ಇರತಕ್ಕಂಥ, ಒಂದು ದೊಡ್ಡ ಗೊಂದಲವನ್ನು ಉಂಟುಮಾಡತಕ್ಕ ಕೆಲಸಗಳನ್ನು ಮಾಡಿದ್ದು ಬುದ್ಧಿವಂತಿಕೆಯ ಲಕ್ಷಣವೇ ಎಂದು ನಾನು ಪ್ರಶ್ನೆ ಮಾಡಬೇಕಾಗಿದೆ.

ಈ ಗಡಿ ಸಮಸ್ಯೆಯ ವಿಚಾರ ಮಾನ್ಯ ಶ್ರೀ ಬಸಪ್ಪನವರು ಬಹಳ ಚೆನ್ನಾಗಿ ವಾದ ಮಾಡಿದರು. ಎಸ್. ಆರ್. ಆಕ್ಟ್‌ನಲ್ಲಿ ಒಂದು ಅವಕಾಶ ಇದೆ. ಅದರಲ್ಲಿ ಸಣ್ಣಪುಟ್ಟ ಹೊಂದಾಣಿಕೆಗಳಿಗೆ ಜೋನಲ್ ಕೌನ್ಸಿಲ್ ಮುಖಾಂತರ ಅವಕಾಶವಿದೆ. ಅಂಥ ಅವಕಾಶವನ್ನು ಮಹಾರಾಷ್ಟ್ರದವರಾಗಲೀ, ಮೈಸೂರಿನವರಾಗಲೀ ಒಪ್ಪಿಲ್ಲವೇ ಎಂದು ನಾನು ಕೇಳುತ್ತೇನೆ. ಬಹುಶಃ ಇವತ್ತಿನ ದಿವಸ ಅನೇಕ ಮಾನ್ಯ ಸದಸ್ಯರು ಅದರಲ್ಲೂ ಆಡಳಿತ ಪಕ್ಷದವರು ಹೇಳುತ್ತಿದ್ದಾರೆ, ಕೆಲವು ಕನ್ನಡ ಪ್ರದೇಶಗಳು ಈಗ ಹೊರಗಿವೆ. ಈ ಮಾತು ಯಾವಾಗಲೂ ಬರುತ್ತಾ ಇದೆ. ಇತ್ತೀಚೆಗೆ ನಾಲ್ಕು ವರ್ಷಗಳಿಂದಲೂ ನಾನು ಗೌರ್ನರ್ ಅಡ್ರೆಸ್ಸಿಗೆ ಅಮೆಂಡ್‌ಮೆಂಟ್‌ಗಳನ್ನು ಸಹ ಕಳುಹಿಸುತ್ತಿದ್ದೇನೆ. ಇಂದು ನಮ್ಮ ಕನ್ನಡ ಪ್ರದೇಶಗಳನ್ನು ಉಳಿಸಿಕೊಳ್ಳುವುದಕ್ಕೆ ಯಾವ ಕಾರ್ಯಕ್ರಮಗಳನ್ನೂ ತೆಗೆದುಕೊಳ್ಳುತ್ತಾ ಇಲ್ಲ. ನಾವು ತಿದ್ದುಪಡಿ ಕಳಿಸಿದರೂ ಕೂಡ ನಮ್ಮ ಸರ್ಕಾರದವರು ಸುಮ್ಮನಿದ್ದಾರೆ. ಈಗ ನೀಲಗಿರಿ, ಕಾರವಾರ, ಹೊಸೂರು, ಮಡಕಶಿರ, ಕಾಸರಗೋಡು ಮೊದಲಾದ ಪ್ರದೇಶಗಳನ್ನು ಸೇರಿಸಿಕೊಳ್ಳುವುದಕ್ಕೆ ಅಡ್ಡಿ ಆತಂಕಗಳು ಏನು ಇವೆ? ಇಷ್ಟು ವರ್ಷಗಳಾದರೂ ಕೂಡ ಸರ್ಕಾರವಾಗಲೀ, ಮಾನ್ಯ ಸದಸ್ಯರುಗಳಾಗಲೀ ಈ ವಿಚಾರದಲ್ಲಿ ಏನೊಂದು ಆಸಕ್ತಿಯನ್ನೂ ತೋರಿಸುತ್ತಿಲ್ಲ ಎಂಬುದು ಬಹುಶಃ ಮೈಸೂರು ದೇಶದ ಜನತೆಗೆ ಗೊತ್ತಿರತಕ್ಕ ವಿಚಾರ. ಇವತ್ತಿನ ದಿವಸ ಈ ಒಂದು ಆಯೋಗವನ್ನು ನೇಮಿಸಿ ಯಾವ ಒಂದು ಗಂಡಾಂತರ ಬರಲಿದೆಯೋ ಏನೋ, ಈಗಾಗಲೇ ಈ ಆಯೋಗದ ಪೂರ್ವಭಾವಿಯಾಗಿ ಮಾನ್ಯ ಮುಖ್ಯಮಂತ್ರಿಗಳಿಬ್ಬರೂ ಸಮಾಲೋಚನೆ ನಡೆಸಬೇಕೆಂದು ಇದೆ. ಆದರೆ, ಆ ಸಮಾಲೋಚನೆಯು ಈ ಮಾನ್ಯ ಸಭೆಗೆ ಒಳಪಟ್ಟಿರತಕ್ಕಂತಹ ಒಂದು ವಿಷಯವಾಗಿರಬೇಕು. ಈ ಮಾನ್ಯ ಸಭೆಯಲ್ಲಿ ಮಾನ್ಯ ಸದಸ್ಯರುಗಳು ಏನು ಸಲಹೆಗಳನ್ನು ಕೊಟ್ಟಿದ್ದಾರೋ ಅದಕ್ಕನುಗುಣವಾಗಿ, ಆ ವಿಚಾರವನ್ನು ಇತ್ಯರ್ಥ ಮಾಡಬೇಕು. ಇಲ್ಲದಿದ್ದರೆ, ಇದಕ್ಕಾಗಿ ನಾಲ್ಕೈದು ದಿವಸಗಳಿಂದ ಏನು ಇಲ್ಲಿ ಚರ್ಚೆ ಮಾಡಿದ್ದೇವೋ ಅದರ ಪರಿಣಾಮ ಒಳ್ಳೆಯದಾಗುವುದಿಲ್ಲ; ಮತ್ತು ಇದಕ್ಕಾಗಿ ಮಾಡಿದ ವ್ಯಯ, ಶಕ್ತಿ ಎಲ್ಲಾ ವ್ಯರ್ಥವಾಗುತ್ತದೆ. ಈ ವಿಚಾರವನ್ನು ಮಾನ್ಯ ಸರ್ಕಾರ ತಿಳಿದುಕೊಂಡು ಆಯೋಗದ ನೇಮಕಕ್ಕೆ ಒಪ್ಪಿದ್ದಾರೆಂದು ಅವರ ನಿಲುವಿನಿಂದ ಅರ್ಥವಾಗುತ್ತದೆ. ನಮ್ಮ ಸ್ಪಷ್ಟವಾದ ನಿಲುವೇನೆಂದರೆ, ಈ ಸಣ್ಣಪುಟ್ಟ ಹೊಂದಾಣಿಕೆಗಳ ವಿಚಾರ ಮಾತ್ರ ಸಮಾಲೋಚನೆ ಮಾಡಬೇಕು. ರಾಷ್ಟ್ರದ ಭದ್ರತೆಗೆ ಗಂಡಾಂತರ ಆಗಬಾರದು; ನಮ್ಮ ರಾಜ್ಯದ ಹಿತಕ್ಕೆ ಯಾವಾಗಲೂ, ಯಾವ ರೀತಿಯಲ್ಲೂ ಹಾನಿಯಾಗಬಾರದು. ಈ ಷರತ್ತುಗಳನ್ನು ಹಾಕಿ ಮಾನ್ಯ ಮುಖ್ಯಮಂತ್ರಿಯವರು ಸಮಾಲೋಚನೆ ನಡೆಸಿದರೆ ಸರಿ. ಅದಕ್ಕೆ ಅವರು ಒಪ್ಪದಿದ್ದರೆ, ಆಯೋಗವನ್ನು ನೇಮಕ ಮಾಡುವುದಕ್ಕೆ ಸಾಧ್ಯವಿಲ್ಲ. ಆದ್ದರಿಂದ ಮಾನ್ಯ ಮುಖ್ಯಮಂತ್ರಿಯವರು ನಮ್ಮ ದೇಶದ ಹಿತವನ್ನು ಕಾಪಾಡುವುದಕ್ಕೂ ಮತ್ತು ಜನತೆಯ ವಿಶ್ವಾಸವನ್ನು ಗಳಿಸಲಿಕ್ಕೂ ಒಂದು ಸ್ಪಷ್ಟವಾದ ನಿಲುವನ್ನು ತೆಗೆದುಕೊಳ್ಳಬೇಕೆಂದು ತಿಳಿಸಿ, ಇಷ್ಟು ಮಾತನಾಡಲು ನನಗೆ ಅವಕಾಶ ಕೊಟ್ಟಂತಹ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಕೆ. ಪಿ. ರೇವಣಸಿದ್ದಪ್ಪ (ತಿಪಟೂರು).—ಮಾನ್ಯ ಅಧ್ಯಕ್ಷರೇ, ಈ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ದೇಶದಲ್ಲಿ ಎದ್ದಿರತಕ್ಕಂತಹ ಅಧಿಕ ಪ್ರಮಾಣದ ಅಪರಾಧಗಳು ಜಾಸ್ತಿ ಯಾಗುತ್ತಾ, ಜನತೆಯ ಗಮನವನ್ನು ಈ ಕೆಟ್ಟ ಪ್ರಸಂಗಗಳಿಗೆ ಪದೇ ಪದೇ ಎಳೆಯುವಂತೆ ಮಾಡಿ ದೇಶಕ್ಕೆ ಒಂದು ಗೊಂದಲವನ್ನು ತಂದೊಡ್ಡಿದ್ದಾರೆ. ಇದಕ್ಕೆ ಮೊದಲನೆ ಅಪರಾಧಿ ನಮ್ಮ ಕೇಂದ್ರದ ಪ್ರಧಾನಿಯವರು, ಎರಡನೆಯ ಅಪರಾಧಿ, ರಕ್ಷಣಾ ಮಂತ್ರಿ ಚೌವನ್ ಮತ್ತು ಮೂರನೇ ಅಪರಾಧಿ ನಮ್ಮ ಮಾನ್ಯ ಮುಖ್ಯಮಂತ್ರಿಯವರು.

Mr. SPEAKER.—The Hon'ble Member will kindly revise his language.

ಶ್ರೀ ಕೆ. ಪಿ. ರೇವಣಸಿದ್ದಪ್ಪ.—ಈ ಮೂರು ಜನ ನಾಯಕರು ಏನು ತಿಳಿದುಕೊಂಡಿದ್ದಾರೆಂದರೆ, ಚುನಾವಣೆ ಹತ್ತಿರ ಬಂತು, ಅದಕ್ಕೋಸ್ಕರವಾಗಿ ಪಕ್ಷಾತೀತವಾಗಿ ನಮಗೆ ಅದು ಸೇರಬೇಕು, ಮತ್ತೊಂದು ಸೇರಬೇಕು ಎಂದು ಏನೇನೋ ಪ್ರಯತ್ನ ಮಾಡುತ್ತಿದ್ದಾರೆ. ನಮ್ಮ ನಾಯಕರು ಕೂಡ ನಮಗೆ ಮಡಕಶಿರ ಬರಬೇಕು, ಕಾಸರಗೋಡು ಬರಬೇಕು, ಹಾಗೂ ಇನ್ನಿತರ ಪ್ರದೇಶಗಳು ಬರಬೇಕೆಂದು ಶುರುಮಾಡಿದ್ದಾರೆ. ಅವರು ಆ ಕಡೆ ಸೇರಬೇಕೆಂದು ಹೇಳುತ್ತಾರೆ; ಇವರು ಈ ಕಡೆ ಸೇರಬೇಕೆಂದು ಹೇಳುತ್ತಾರೆ. ಈ ರೀತಿಯಲ್ಲಿ ಹೇಳುವುದೇ ವಿನಾ ಇವರಿಗೆ ತರಲಿಕ್ಕೆ ಇಷ್ಟವಿಲ್ಲ ಅವರಿಗೆ ಬಿಡುವುದಕ್ಕೆ ಇಷ್ಟವಿಲ್ಲ. ನಮ್ಮ ಮಹಾರಾಷ್ಟ್ರ ಏಕೀಕರಣ ಸಮಿತಿಯ ಮುಖಂಡರು 7 ಜನ ಚುನಾವಣೆಯಲ್ಲಿ ಹಿಂದೆಯೂ ಗೆದ್ದಿದ್ದಾರೆ. ಈ ಸಲ ಕೂಡ ಚುನಾವಣೆಯಲ್ಲಿ ಗೆದ್ದ ಕಡೆ ಹೋಗುತ್ತಾರೆ. ಈ ರೀತಿ ಇದ್ದರೆ ನಮ್ಮ ದೇಶದಲ್ಲಿ ಯಾವ ರೀತಿ ನೆಮ್ಮದಿಯಿಂದ ಇರಲಿಕ್ಕೆ ಸಾಧ್ಯ ಎನ್ನುವುದನ್ನು ನಾವು ಯೋಚನೆ ಮಾಡಬೇಕು. ನಾನಾದರೂ ತಿಳಿದುಕೊಂಡಿದ್ದೆ, ಇವರು ದೇಶದ ಬಹಳ ದೊಡ್ಡ ಜನರು, ಸಣ್ಣಪುಟ್ಟ ಗಡಿ ವಿವಾದಕ್ಕೋಸ್ಕರ ಇವರನ್ನು ಆರಿಸಿಲ್ಲ ಎಂದು. ಆದರೆ ಇತ್ತೀಚೆಗೆ ಅವರ ಭಾವನೆ ನೋಡಿದರೆ, ಅವರ ಬಗೆಗೆ ನಮ್ಮ ಅಭಿಪ್ರಾಯವನ್ನು ಬದಲಾಯಿಸ ಬೇಕಾಗಿದೆ. ಅವರ ತತ್ವ ಇಂಡಿಯಾ ದೇಶದಲ್ಲೇ ಮೇಲ್ಮಟ್ಟದ್ದು ಎಂದು ನಾನು ಭಾವಿಸಿದ್ದೆ. ನಮ್ಮ ರಕ್ಷಣಾ ಮಂತ್ರಿಯವರಂತವರು ಅನೇಕರು ಇದ್ದಾರೆ. ಅಂಥ ರಕ್ಷಣಾ ಮಂತ್ರಿಯವರು ಬಹಳ ಜನ ಆಗಿದ್ದಾರೆ, ಹೋಗಿದ್ದಾರೆ. ಇದು ಈಗ ಏನಾಗಿದೆ ಎಂದರೆ, ಒಂದು ಕುರಿಯ ಕತೆಯಂತಾಗಿದೆ. ಆ ಕತೆಯು ಜ್ಞಾಪಕಕ್ಕೆ ಬರುತ್ತದೆ. ಹಿಂದೆ ಒಬ್ಬ ತನ್ನ ಕುರಿ ಕಳೆದುಹೋಗಿದೆ ಎಂದು ಕೇಸ್ ಹಾಕಿದನಂತೆ. ಅಷ್ಟರಲ್ಲಿ ಕೆಲವು ಸಮಯದ ನಂತರ ಕುರಿ ಸತ್ತು ಹೋಯ್ತು. ಇನ್ನು ಕುರಿ ಸತ್ತುಹೋಯ್ತಲ್ಲ ಕುರಿಯ ಚರ್ಮಕ್ಕಾದರೂ ವ್ಯಾಜ್ಯ ನಡೆಸೋಣವೆಂದು ಯೋಚಿಸಿದ. ವ್ಯಾಜ್ಯ ಮುಂದುವರಿಯಿತು. ಆ ಹೊತ್ತಿಗೆ ಚರ್ಮ ಕೂಡ ಕೊಳೆತು ಹೋಯ್ತಂತೆ. ಕೊನೆಗೆ ಕೇಸೇ ಫೈಸಲಾಗಲಿಲ್ಲ. ಇಂದು ಜನರು ಮುಂದುವರಿದಿದ್ದಾರೆ. ಮುಖಂಡರು ಜನರ ಅಭಿಪ್ರಾಯ ವಿಲ್ಲದೆ ಏನು ತೀರ್ಮಾನ ಮಾಡಿಕೊಂಡರೂ ಜನರು ಒಪ್ಪುವುದಿಲ್ಲ. ಈ ಏಕಸದಸ್ಯ ಆಯೋಗವನ್ನು ನಮ್ಮ ಮಾನ್ಯ ಮುಖ್ಯಮಂತ್ರಿಯವರು ಒಪ್ಪಿಕೊಂಡು ಬರುವುದಕ್ಕೆ ಅಧಿಕಾರ ಕೊಟ್ಟವರು ಯಾರು ? ಅವರು ಯಾವ ರೀತಿ ಅದಕ್ಕೆ ಒಪ್ಪಿಕೊಂಡರು ? ಕೆಲವರು ವಾದ ಮಾಡುತ್ತಾರೆ. ನಮಗೆ ಕಾಸರಗೋಡು ಬರಬೇಕು, ನೀಲಗಿರಿ ಬರಬೇಕು, ಮಡಕಶಿರ ಬರಬೇಕು ಎಂದು. ಆದರೆ ಅದು ಏಕಸದಸ್ಯ ಆಯೋಗ ಆದರೆ ಬರುತ್ತದೆ, ಮೂರು ಜನರ ಆಯೋಗ ಆದರೆ ಬರುವುದಿಲ್ಲವೆ ? ನ್ಯಾಯ ದೊರಕಬೇಕಾದರೆ ಒಬ್ಬರಲ್ಲ, ಮೂರು ಜನ ಸದಸ್ಯರಿರುವ ಕಮಿಟಿ ಇರಲೇ ಬೇಕೆಂದು ನಾನು ಒತ್ತಾಯದಿಂದ ಹೇಳುತ್ತೇನೆ. ಮಾನ್ಯ ಮುಖ್ಯಮಂತ್ರಿಯವರು ಹೇಳುತ್ತಾರೆ, ಚುನಾವಣೆ ಆದ ನಂತರ ಗಡಿ ಸಮಸ್ಯೆ ಬರಲಿ, ಸಣ್ಣಪುಟ್ಟ ಹೊಂದಾಣಿಕೆ ಮಾಡಬಹುದು ಎಂದು. ನಾನಾದರೂ ಹೇಳುತ್ತೇನೆ, ಯಾವಾಗಲೂ ಸಣ್ಣ ಸಣ್ಣ ವಿಷಯಗಳನ್ನೇ ಮಾತನಾಡುತ್ತಾ ಹೋದರೆ ನಮ್ಮ ಮುಖ್ಯಮಂತ್ರಿಗಳು ದೊಡ್ಡ ದೊಡ್ಡ ವಿಷಯವನ್ನು ಯಾವಾಗ ಮಾತನಾಡುವುದು ? ಇದನ್ನು ಬಿಟ್ಟು ದೊಡ್ಡ ದೊಡ್ಡ ವಿಷಯವನ್ನು ಮಾತನಾಡಲಿ ಎಂದು ಇನ್ನಾದರೂ ಕೇಳಿಕೊಳ್ಳುತ್ತೇನೆ. ಕುಲುಮೆಗಳು ನಮ್ಮ ಊರಿನಲ್ಲಿವೆ. ಸಣ್ಣ ಕುಲುಮೆಗಳೂ ಇವೆ. ಚಮ್ಮಟಿಗೆ ತೆಗೆದುಕೊಂಡು ಹೊಡೆಯುವುದೇ ನೀವು ಈಗ ಸಲಹೆ ಮಾಡುವುದು. ಅಂಥಾದ್ದು ಬೇಡ. ಅಧಿಕಾರ ಉಳಿಸಿಕೊಳ್ಳುವ ದೃಷ್ಟಿಯಿಂದ ಒತ್ತಡಕ್ಕೆ ಸಿಕ್ಕಿಕೊಂಡು ಕೆಲಸ ಮಾಡಬೇಡಿ. ಇತ್ತ ಸಂಜೀವರೆಡ್ಡಿಯವರಿಗೆ ಹೇಳಿದೆ 'ಏಂಟಿಕೆ ? ಜಟ್ಲು ಚಪ್ಪು ವದ್ದಂಡಿ' ಎನ್ನುವುದು, ಅತ್ತ ಕಾಮರಾಜರವರಿಗೆ ಹೇಳಿದೆ 'ಒನ್ನು ಸೊಲ್ಲ ವೇಂಡ, ನಾನ್ ಎಲ್ಲ ಪೇಸಿರ್ಕೆ ನಮ್ಮ ಪಾಡ್ ಇಪ್ಪಡಿಯೇ' ಎಂದು ಹೇಳುವುದು ಸರಿಯಲ್ಲ. ಅದು ಬಿಟ್ಟು ಯಾರ ಬೆದರಿಕೆಗೂ ಜಗ್ಗದ ಕೆಲಸ ಮಾಡುವುದು ನಿಮ್ಮ ಕರ್ತವ್ಯ. ಶ್ರೀಮಾನ್ ಲಕ್ಕಪ್ಪ ನವರು ಮಾತನಾಡುತ್ತಾ 'ಅಂಗ, ವಂಗ, ಕಳಿಂಗ' ಎಲ್ಲಾ ಕರ್ನಾಟಕದಲ್ಲಿ ಸೇರಿತ್ತೆಂದು ಹೇಳಿದರು. ಹೀಗಿರುವಾಗ ಯಾರೋ ದೊಡ್ಡ ಮನುಷ್ಯರು ನಮ್ಮ ಊರಿಗೆ ಬಂದು, ಅವರು ಇಲ್ಲ ವ್ಯಾಪಾರ, ಉದ್ಯೋಗ ಮಾಡಿ ವಿದ್ಯಾವಂತರಾಗುವುದಕ್ಕೆ ಅವಕಾಶ ಕೊಟ್ಟಿದ್ದನ್ನು ಉಪಯೋಗಿಸಿಕೊಂಡು

(ಶ್ರೀ ಕೆ. ಪಿ. ರೇವಣಸಿದ್ದಪ್ಪ)

ಈ ಪ್ರಾಂತ್ಯವೆಲ್ಲಾ ನಮಗೇ ಸೇರಬೇಕು ಎಂದು ವಾದ ಮಾಡುವುದು ಎಷ್ಟುಮಾತ್ರವೂ ಸರಿಯಲ್ಲ. ಅಲ್ಲಿಯ ಹಳ್ಳಿಯ ಜನರು, ಅವಿದ್ಯಾವಂತರು ತಮ್ಮನ್ನು ಆಯ್ಕೆಮಾಡಿ ವೋಟುಕೊಟ್ಟು ಕಳುಹಿಸಿದ್ದು ಈ ಪ್ರಾಂತ್ಯವನ್ನು ನೀವು ಇತರರ ಪಾಲು ಮಾಡುವುದಕ್ಕಲ್ಲವೆಂದು ಈ ನಾಯಕರಿಗೆ ಹೇಳಲಿಚ್ಛಿಸುತ್ತೇನೆ.

ಮಡಕಶಿರ, ಕಾಸರಗೋಡು—ಈ ಭಾಗಗಳ ವಿಷಯದಂತೆ ಇನ್ನೂ ಅನೇಕ ಪ್ರದೇಶಗಳು ಹಿಂದೂಸ್ಥಾನದ ಇತರೇ ಪ್ರಾಂತ್ಯಗಳಲ್ಲೂ ಬೇಕಾದಷ್ಟಿದ್ದರೂ ಯಾರೂ ಇಂದು ಅವುಗಳ ವಿಷಯದಲ್ಲಿ ಅಷ್ಟು ಒತ್ತಾಯ ಮಾಡುತ್ತಿಲ್ಲ. ಹೀಗಿರುವಾಗ ಮಹಾರಾಷ್ಟ್ರದವರು ಈಗ ಗಡಿಪ್ರಶ್ನೆಯನ್ನೆತ್ತಿದ್ದಾರೆಂದರೆ ಹಿಂದೂಸ್ಥಾನದಲ್ಲಿ ಮತ್ತೆಲ್ಲಿಯೂ ಇಂಥ ಪ್ರಶ್ನೆಗಳು ಇಲ್ಲವೆ? ಇದ್ದಮೇಲೆ ಅವೆಲ್ಲವನ್ನೂ ಒಂದು ಉಚ್ಚಮಟ್ಟದ ನ್ಯಾಯಾಲಯದ ಮುಂದಿಟ್ಟು ಒಂದೇ ಸಾರಿ ಬಗೆಹರಿಸುವುದಕ್ಕೆ ಪ್ರಯತ್ನ ಮಾಡುವುದು ಒಳ್ಳೆಯದು. ಚುನಾವಣೆಯಾದನಂತರ ಮಾತನಾಡುತ್ತೇವೆನ್ನುವುದು ಬೇಡ. ಒಂದೊಂದನ್ನೇ ಮಾಡಬೇಕಾಗಿಲ್ಲ ನಮ್ಮಲ್ಲಿ ಸಮಸ್ಯೆಗಳು—ಅನ್ನ, ಬಟ್ಟೆ. ವಸತಿ, ದೊಡ್ಡ ದೊಡ್ಡ ಕಾರ್ಖಾನೆಗಳನ್ನು ಏರ್ಪಡಿಸುವುದು ಮುಂತಾಗಿ ಅನೇಕವಾಗಿವೆ. ಅವುಗಳಿಗೆ ಹೆಚ್ಚಿನ ಗಮನ ಕೊಡಬೇಕೆಂದು ಹೇಳಿ ನಾನು ಮುಕ್ತಾಯ ಮಾಡುತ್ತೇನೆ.

Mr. SPEAKER.—Now I am referring to those who might have liked to express their views with regard to the views of the M. E. S. members. Sri B. R. Suntankar has taken 88 minutes ; Sri B. P. Kadam has taken 37 minutes...

Sri B. P KADAM.—Including interruptions.

Mr. SPEAKER.—I do not want any interruptions when I am speaking. Let him verify and tell me.

Sri V. S. Patil has taken 47 minutes; Sri Bapu Rao Hulsurkar 17 minutes and Sri L. B. Birje 10 minutes. If Sri Kadam makes a request in writing, I will also find out how many times he was interrupted and how many members interrupted and he may add it to that. Let us do things properly. That is what I am trying to see. I mention this to Sri Samaji to show that every viewpoint is covered. There may be a view which I am not aware of and the hon. member may be aware of. So, let him not repeat what is already said.

Sri N. O. SAMAJI.—[*Marathi*]

Mr. SPEAKER.—I have heard the member patiently. There is no new point.

12-00 NOON.

ಶ್ರೀ ಕೆ. ಪಿ. ರೇವಣ ಸಿದ್ದಪ್ಪ.—ಪಾಯಿಂಟ್ ಆಫ್ ಆರ್ಡರ್, ಸ್ವಾಮಿ. ಮಾನ್ಯ ಸದಸ್ಯರು ಉದ್ವೇಗದಿಂದ ನಮಗೆ ತಿಳಿಯದ ಭಾಷೆಯಲ್ಲಿ ಏನೋ ಕೋಪದಿಂದ ಮಾತನಾಡುತ್ತಿದ್ದಾರೆ. ಅವರು ನಿಧಾನವಾಗಿ ಮಾತನಾಡಲು ಅಪ್ಪಣೆ ಮಾಡಬೇಕು, ಸ್ವಾಮಿ.

Sri N. O. SAMAJI.—[*Marathi*]

Mr. SPEAKER.—May I understand that he created the agitation for this purpose?

Sri N. O. SAMAJI.—[*Marathi*]

Mr. SPEAKER.—Order, order. The member will resume his seat. There must be some limit. If the member speaks anything more I will ask him to retire. I call upon Sri Keshavamurthy to speak.

† ಶ್ರೀ ಎಚ್. ಆರ್. ಕೇಶವಮೂರ್ತಿ (ಗಂಡಸಿ).—ಮಾನ್ಯ ಅಧ್ಯಕ್ಷರೇ, ಭಾಷಾವಾರು ಪ್ರಾಂತದ ವಿಷಯದಲ್ಲಿ ನಮ್ಮ ಅಣ್ಣತಮ್ಮಂದಿರು ಎಲ್ಲ ಮಾತನಾಡಿದ್ದಾರೆ. ಅದರಿಂದ ನಾನು ಹೆಚ್ಚು ಹೇಳಬೇಕಾದ್ದೇನೂ ಇಲ್ಲ. ಆದರೆ ನಾವು ಒಂದು ವಿಷಯವನ್ನು ತಿಳಿದುಕೊಳ್ಳಬೇಕು. ನಾವು ಮೊದಲು ಹಿಂದೂದೇಶದವರು ಅಥವಾ ಇಂಡಿಯನ್ಸ್, ಆಮೇಲೆ ಮಹಾರಾಷ್ಟ್ರದವರು ಅಥವಾ ಮೈಸೂರಿನವರು ಎಂದು ತಿಳಿದುಕೊಳ್ಳಬೇಕು. ಭಾಷಾವಾರು ಪ್ರಾಂತ ವಿಭಜನೆ ಮಾಡಿದ್ದೇ ತಪ್ಪು. ಹಾಗೆ ಮಾಡಿದ ಮೇಲೆ ಅದನ್ನು ಸರಿಪಡಿಸಿಕೊಳ್ಳುವುದು ನಮ್ಮ ಕರ್ತವ್ಯ. ಭಾಷಾವಾರು ಪ್ರಾಂತದ ಬಗ್ಗೆ ನಮ್ಮ ದೇಶದಲ್ಲಿ ಒಂದು ವಿಚಿತ್ರವಾದ ವಾದವಿದೆಯೇ ಹೊರತು ಪರದೇಶಗಳಲ್ಲಿ ಇದೆಯೇ ಎಂದು ನಾನು ಕೇಳುತ್ತೇನೆ. ರಷ್ಯ ದೇಶದಲ್ಲಿ 140 ಭಾಷೆಗಳಿವೆ. ಅಲ್ಲಿ ಈ ತರಹ ವಾದವನ್ನು ಎಬ್ಬಿಸಿ ಹೋರಾಡುತ್ತಿದ್ದಾರೆಯೇ, ಅವರು ಜಗಳವಾಡುತ್ತಿದ್ದಾರೆಯೇ ಎಂದು ಕೇಳುತ್ತೇನೆ. ಉಜಬೆಕಿಸ್ಥಾನದಲ್ಲಿ ಯಾವ ಭಾಷೆ ಇದೆ? ಆದರೆ ಅಲ್ಲಿ ಈ ತರಹ ಜಗಳ ಆಡುತ್ತಿದ್ದಾರೆಯೇ ಎಂದು ನಾನು ಅವರನ್ನು ಕೇಳುತ್ತೇನೆ?

ಅದೇರೀತಿಯಲ್ಲಿ ಅಮೆರಿಕಾ ದೇಶದ ಸಂಯುಕ್ತ ಸಂಸ್ಥಾನಗಳಲ್ಲಿ ಯಾವ ಯಾವ ಕಡೆಯಿಂದಲೋ ಬಂದವರು ಇದ್ದಾರೆ, ಜರ್ಮನ್ ರೀಜನ್, ಫ್ರೆಂಚ್ ರೀಜನ್, ಬೆಲ್ಜಿಯನ್ ರೀಜನ್‌ಗಳಿಂದ ಬಂದಿರುವ ಜನರೆಲ್ಲ ಇದ್ದಾರೆ. ಅವರೆಲ್ಲ ತಮ್ಮ ಭಾಷೆಗಳನ್ನು ಬಿಟ್ಟು ಒಂದೇ ಒಂದು ರಾಷ್ಟ್ರ ಭಾಷೆ ಯಾಗಿ ಇಂಗ್ಲೀಷ್ ಭಾಷೆಯನ್ನೇ ಕಲಿತು ಆ ದೇಶದಲ್ಲಿ ಆಡಳಿತವನ್ನು ನಡೆಸುತ್ತಿದ್ದಾರೆ. ಅಲ್ಲಿ ಈ ತರಹ ವಾದವಿದೆಯೇ ಎಂದು ಕೇಳುತ್ತೇನೆ. ಇಂಥ ವಿಚಿತ್ರ ವಾದಗಳನ್ನು ನಾವು ನಮ್ಮ ಮುಂದೆ ಇಟ್ಟುಕೊಂಡು ಅದನ್ನೇ ಉಲ್ಬಣವಾಗಿ ಮಾಡಿ ನಮ್ಮ ಕಾಲವನ್ನು ವ್ಯರ್ಥ ಮಾಡುತ್ತಿದ್ದೇವೆ. ಈ ಪ್ರಪಂಚದಲ್ಲಿ ನಮ್ಮ ದೇಶ ಎಷ್ಟು ಹಿಂದೆ ಇದೆ, ಪಾಶ್ಚಾತ್ಯದೇಶಗಳು ಎಷ್ಟು ಮುಂದೆ ಇವೆ, ನಾವು ಅವರೊಡನೆ ಓಡುವುದಕ್ಕೆ ಸಾಧ್ಯವೇ ಎಂದು ನಾನು ಕೇಳುತ್ತಿದ್ದೇನೆ. ವ್ಯವಸಾಯದಲ್ಲಿ, ಹಾಗೂ ಕೈಗಾರಿಕೆಯಲ್ಲಿ ನಾವು ಏನು ಪ್ರಗತಿ ಸಾಧಿಸುತ್ತಿದ್ದೇವೆ, ನಾವು ಎಷ್ಟು ಹಿಂದೆ ಇದ್ದೇವೆ ಎಂದು ನೋಡಿದರೆ, ನಾವು ಈ ಶುಷ್ಕ ವಾದವನ್ನು ನಮ್ಮ ಮುಂದೆ ಇಟ್ಟುಕೊಂಡು ನಾವು ಹಿಂದೆ ಹೋಗು ತ್ತಿದ್ದೇವೆಯೇ ಹೊರತು ಮುಂದುವರಿಯುತ್ತ ಇಲ್ಲ ಎಂದು ನಾನು ಬಹಳ ವಿಷಾದದಿಂದ ಹೇಳುತ್ತಿ ದ್ದೇನೆ. ಮಹಾರಾಷ್ಟ್ರದ ಪರವಾಗಿರುವವರು 7 ಮಂದಿ ಸದಸ್ಯರು ನಮ್ಮ ಈ ಸಭೆಯಲ್ಲಿದ್ದಾರೆ. ಅವರು ನಮ್ಮ ಮೈಸೂರು ದೇಶದ ಕನ್ನಡಿಗರನ್ನು ಪ್ರೀತಿಸುತ್ತಿಲ್ಲ ಎಂದು ಬಹಳ ವಿಷಾದದಿಂದ ಹೇಳು ತ್ತಿದ್ದೇನೆ. ಮರಾಠಿ ಜನರು, ಮಹಾರಾಷ್ಟ್ರದವರು ಎಲ್ಲರೂ ಇಂದು ದೇವರ ಸರಿಸಮಾನರಾದ ಶಿವಾಜಿ ಮಹಾರಾಜರ ಫೋಟೋವನ್ನು ತಮ್ಮ ಮನೆಗಳಲ್ಲಿಟ್ಟುಕೊಂಡು ಅದನ್ನು ಪೂಜಿಸುವಂತೆ ನಮ್ಮ ಕನ್ನಡಿಗರು ಕೂಡ ಪೂಜಿಸುತ್ತಿಲ್ಲವೇ ಎಂದು ನಮ್ಮ ಮಹಾರಾಷ್ಟ್ರ ಬಾಂಧವರನ್ನು ಕೇಳು ತ್ತೇನೆ. ಹಾಗಿರುವಾಗ ಈ ರೀತಿ ಮಹಾರಾಷ್ಟ್ರದ ಬಾಂಧವರು ವಿರೋಧ ಮಾಡುತ್ತಿದ್ದರೆ ನಾವು ಶಿವಾಜಿ ಮಹಾರಾಜರ ಫೋಟೋ ಇಟ್ಟುಕೊಂಡು ಪೂಜೆ ಮಾಡಬೇಕೇ ಬೇಡವೇ ಎಂದು ಆಲೋಚನೆ ಮಾಡಬೇಕಾಗುತ್ತದೆ, ಅಂಥ ಸನ್ನಿವೇಶವನ್ನು ಅವರು ತಂದೊಡ್ಡುತ್ತಿದ್ದಾರೆ. ಹಿಂದೆ ನಮ್ಮ ಹಳೆಯ ಮೈಸೂರು ರಾಜ್ಯದಲ್ಲಿ ಸರ್ವೆ ಇಲಾಖೆಯಲ್ಲಿ ಮಹಾರಾಷ್ಟ್ರದಿಂದ ಬಂದ ಜನರು ಸರ್ವೆ ಕೆಲಸ, ಭೂಮಿ ಅಳತೆ ಮಾಡಿದರು, ಅವರಿಗಿಂತ ಆ ಕೆಲಸದಲ್ಲಿ ದಕ್ಷರು ಆಗ ಯಾರೂ ಇರಲಿಲ್ಲ. ಅವರ ಕಾರ್ಯದಕ್ಷತೆ ಮತ್ತು ಬುದ್ಧಿವಂತಿಕೆಯನ್ನು ಕಂಡು ವಿಸ್ಮಯ ಹೊಂದಿ ಅವರಿಗೆ ಶಹಬಾಸ್ ಗಿರಿ ಕೊಟ್ಟಿದ್ದೇವೆ. ಅದೇ ರೀತಿಯಲ್ಲಿ ಮುಂಬಯಿಯನ್ನು ಕಟ್ಟಲು ನಮ್ಮ ಮೈಸೂರು ಎಂಜಿನಿ ಯರುಗಳು ಹೋಗಿ ಸಹಾಯ ಮಾಡಲಿಲ್ಲವೇ? ಹಾಗಿರುವಾಗ ಈ ರೀತಿ ರಾಜಕೀಯ ವಾದ ಮಾಡುವುದರ ಅರ್ಥವಾದರೂ ಏನು? ಈ ದಿವಸ ನಮ್ಮ ಪ್ರದೇಶ ಮಹಾರಾಷ್ಟ್ರಕ್ಕೆ ಸೇರಬೇಕೆಂದು ಕೇಳುವುದು, ನಾಳೆ ಮೈಸೂರು ದೇಶದ ಇನ್ನು ಕೆಲವು ಭಾಗಗಳು ಸೇರಬೇಕೆಂದು ಮತ್ತೆ ಕೇಳು ವುದು, ಇದರಲ್ಲಿ ರಾಜಕೀಯವನ್ನು ತಂದು ಹಾಕುವುದು ಸರಿಯೇ ಎಂದು ನಾನು ಕೇಳುತ್ತೇನೆ. ಈ ಸಭೆಗೆ ಬಂದಿರುವ ಮಹಾರಾಷ್ಟ್ರ ಏಕೀಕರಣ ಸಮಿತಿಯ ಸದಸ್ಯರೆಲ್ಲರೂ ವಿದ್ಯಾವಂತರು, ಕೆಲ ವರು ಲಾಯರುಗಳು. ಅಂಥವರು ಇಂಥ ಸಣ್ಣ ವಿಚಾರಗಳಿಗೆ ಗಮನಕೊಟ್ಟು ಅದನ್ನು ಬೃಹದಾ ಕಾರವಾಗಿ ಬೆಳೆಸಿ ವಿವಾದವನ್ನೆಬ್ಬಿಸಿ ಕೇಂದ್ರ ಸರಕಾರದವರಿಗೂ, ಪ್ರೆಸಿಡೆಂಟ್‌ರವರೆಗೂ ಇದನ್ನು ತೆಗೆದುಕೊಂಡು ಹೋಗಬೇಕಾದ ಪ್ರಮೇಯವಾದರೂ ಏನಿತ್ತು? ಇದೇ ರೀತಿಯಲ್ಲಿ ಮುಂದುವರೆ ದರೆ ಇಂಡಿಯಾ ದೇಶದ ಒಗ್ಗಟ್ಟು ಮತ್ತು ಸ್ವಾತಂತ್ರ್ಯ ಕಾಪಾಡಿಕೊಳ್ಳಲು ಸಾಧ್ಯವೇ ಎಂದು ಕೇಳುತ್ತೇನೆ. ಸೈನ್ಯದಲ್ಲಿರುವವರು ಯುದ್ಧ ಮಾಡಬೇಕಾದಾಗ ಇವರು ಮಹಾರಾಷ್ಟ್ರದ ಸಿಪಾಯಿಗಳು, ಇವರು ಮೈಸೂರು ಸಿಪಾಯಿಗಳು ಎಂದು ಬೇಧಮಾಡುವ ಸನ್ನಿವೇಶ ಬರುತ್ತ ದೆಯೇ? ಈ ದಿವಸ ಈ ರೀತಿ ಮುಂದುವರಿದರೆ ಭಾಷಾ ವಾದವನ್ನು ಕೊನೆಗಾಣಿಸುವುದಕ್ಕೆ ಸಾಧ್ಯವೇ? ಎಸ್.ಆರ್.ಸಿ. ವರದಿಯ ಪ್ರಕಾರ ಭಾಷಾವಾರು ಪ್ರಾಂತ್ಯಗಳನ್ನು ಹಿಂದೆ ರಚಿಸಿದರು. ಅದು ತಪ್ಪೋ ನೆಪ್ಪೋ ಅದನ್ನು ಒಪ್ಪಿಕೊಂಡ ಮೇಲೆ ಮತ್ತೆ ಅದರ ಮೇಲೆ ವಾದಮಾಡುವುದು

(ಶ್ರೀ ಹೆಚ್. ಆರ್. ಕೇಶವಮೂರ್ತಿ)

ಸರಿಯೇ ! ತೆಂಗಿನ ಮರವನ್ನು ಎಷ್ಟು ಕೆತ್ತಿದರೂ ಕೂಡ ಚಕ್ಕೆ ಬರುತ್ತದೆ, ಅದನ್ನು ನುಣಪು ಮಾಡಲು ಸಾಧ್ಯವೇ ಇಲ್ಲ. ಅದೇ ರೀತಿ ಭಾಷಾವಾರು ಪ್ರಾಂತವನ್ನು ಒಂದೊಂದು ಭಾಷೆಗೆ ಒಂದೊಂದರಂತೆ ಮಾಡುವುದು ಸಹ ಅಸಾಧ್ಯ. ಅದನ್ನು ಮಾಡಬಾರದಾಗಿತ್ತು; ಮಾಡಿದ್ದು ತಪ್ಪು; ಅದನ್ನು ಒಪ್ಪಿಕೊಳ್ಳಬೇಕು. ಈ ದಿವಸ ಇಂಟರ್‌ನ್ಯಾಷನಲ್ ಲ್ಯಾಂಗ್ವೇಜ್ ಬೇಕು, ನ್ಯಾಷನಲ್ ಲ್ಯಾಂಗ್ವೇಜ್ ಬೇಕು, ರೀಜನಲ್ ಲ್ಯಾಂಗ್ವೇಜ್ ಬೇಕು ಎಂದು ಹೇಳುತ್ತಾರೆ. ಇಂದಿನ ಭಾಷಾವಾರು ಗೊಂದಲವನ್ನು ತಪ್ಪಿಸುವುದಕ್ಕೆ ಇಂಡಿಯಾ ಸರಕಾರ ವಿದ್ಯಾಭ್ಯಾಸದ ಇಲಾಖೆಯನ್ನು ತಮ್ಮ ಕೈಗೆ ತೆಗೆದುಕೊಳ್ಳಬೇಕು. ಪ್ರಾಂತಗಳಿಗೆ ಇದನ್ನು ಬಿಡಬಾರದು, ಬಿಟ್ಟರೆ ಗೊಂದಲವುಂಟಾಗುತ್ತದೆ. ಇಂಡಿಯಾ ಸರಕಾರ ವಿದ್ಯಾಭ್ಯಾಸದ ಇಲಾಖೆಯನ್ನು ನಡೆಸಿ ಜನರನ್ನು ಸರಿಯಾಗಿ ತರಬೇತು ಮಾಡಬೇಕು. ನಮ್ಮ ಭಾಷೆ ನಮಗೆ ಬರಬೇಕು. ನಾನು ಮಹಾರಾಷ್ಟ್ರದ ಸದಸ್ಯರಲ್ಲಿ ಛಾಲೆಂಜ್ ಮಾಡುತ್ತೇನೆ, ಮರಾಠಿಯನ್ನು ನ್ಯಾಷನಲ್ ಲ್ಯಾಂಗ್ವೇಜ್ ಮಾಡಲಿ, ಇಂಡಿಯಾದಲ್ಲೆಲ್ಲಾ ಅದು ಬಳಕೆಗೆ ಬರಲಿ, ನಾವು ಅದನ್ನು ಕಲಿಯಲು ತಯಾರಾಗಿದ್ದೇವೆ. ಈ ರೀತಿಯ ಅಭಿಪ್ರಾಯ ಅವರೂ ಇಟ್ಟುಕೊಳ್ಳಬೇಕೇ ಹೊರತು ಕನ್ನಡ ಬೇಡ ಮರಾಠಿ ಎಲ್ಲಾ ಪ್ರಾಂತಗಳಲ್ಲೂ ಇರಬೇಕು ಎಂದು ಹೇಳುವುದು ಸರಿಯಲ್ಲ, ಮರಾಠಿ ಭಾಷೆಯನ್ನು ನ್ಯಾಷನಲ್ ಲ್ಯಾಂಗ್ವೇಜ್ ಮಾಡಿದಾಗ ಮೈಸೂರಿನವರು ಅದನ್ನು ಕಲಿಯಲು ತಯಾರಾಗಿರುತ್ತಾರೆ. ಆಗ ಎಲ್ಲರೂ ಕಲಿಯಲೇಬೇಕು. ಅದು ಮುಖ್ಯ. ಹಾಗೆಯೇ ಇಂಟರ್‌ನ್ಯಾಷನಲ್ ಲ್ಯಾಂಗ್ವೇಜ್ ಕೂಡ ಮುಖ್ಯ, ಅದನ್ನು ಕಲಿಯಬೇಕು. ರೀಜನಲ್ ಲ್ಯಾಂಗ್ವೇಜ್ ಎಂದರೆ ಯಾವ ಯಾವ ಪ್ರದೇಶದಲ್ಲಿ ಪ್ರಾಂತೀಯ ಭಾಷೆ ಯಾವುದಿರುತ್ತದೋ ಅದನ್ನು ಕಲಿಯಬೇಕು. ಇದನ್ನು ಸರಿಸಮ ಮಾಡುವುದಕ್ಕೆ ವಿದ್ಯಾಭ್ಯಾಸದ ಇಲಾಖೆಯನ್ನು ಇಂಡಿಯಾ ಸರಕಾರವೇ ನಡೆಸಬೇಕು. ಪ್ರಾಂತಗಳಿಗೆ ಅದನ್ನು ಬಿಡದೆ ರೀಜನಲ್ ಲ್ಯಾಂಗ್ವೇಜ್, ನ್ಯಾಷನಲ್ ಲ್ಯಾಂಗ್ವೇಜ್ ಮತ್ತು ಇಂಟರ್‌ನ್ಯಾಷನಲ್ ಲ್ಯಾಂಗ್ವೇಜ್ ಹೀಗೆ ಈ 3 ಭಾಷೆಗಳನ್ನು ಕಲಿಯುವಂತೆ ವ್ಯವಸ್ಥೆ ಮಾಡಬೇಕು. ಹೀಗೆ ಮಾಡಬೇಕೇ ಹೊರತು ಪೊಲಿಟಿಕಲ್ ಡಿವಿಜನ್ ಮಾಡಿ ಬೇರೆ ರೀತಿ ಮಾಡುವುದು ಸರಿಯಾಗಿರುವುದಿಲ್ಲ. ಮೈಸೂರು ಸರಕಾರವಾಗಲಿ ಅಥವಾ ಮಹಾರಾಷ್ಟ್ರ ಸರಕಾರವಾಗಲಿ ಆಡಳಿತ ನಿರ್ವಹಣೆಗೆ ಮತ್ತು ಭಾಷೆಗೆ ಸಂಬಂಧವಿಲ್ಲ. ಭಾಷಾವಾರು ಆಧಾರದ ಮೇಲೆ ದೇಶವನ್ನು ವಿಭಜನೆ ಮಾಡುವುದು ಪೊಲಿಟಿಕಲ್ ಕ್ಲಿಕ್. ರಾಜಕೀಯಕ್ಕಾಗಿ, ಸ್ವಾರ್ಥವನ್ನು ಸಾಧಿಸಿಕೊಳ್ಳುವುದಕ್ಕಾಗಿ ಇಂಡಿಯಾ ದೇಶವನ್ನು ಭಾಷಾವಾರು ಆಧಾರದ ಮೇಲೆ ವಿಭಜನೆ ಮಾಡಿರುವುದು ಒಂದು ಪೊಲಿಟಿಕಲ್ ಕ್ಲಿಕ್. ಹೀಗೆ ಮಾಡಿದರೆ ದೇಶ ಉಳಿಯುವುದಿಲ್ಲ. ಕಳೆದ ಐದು ವರ್ಷಗಳಿಂದ ಭಾಷಾವಾರು ಪ್ರಶ್ನೆ ಇರಲಿಲ್ಲವೇ ! 5 ವರ್ಷಗಳ ಅವಧಿಯ ಕೊನೆಯ ವರ್ಷದಲ್ಲಿ ಏಕೆ ಈ ವಿಚಾರ ಉಲ್ಬಣವಾಗಬೇಕು ! ಇದುವರೆಗೇನು ಮಾಡುತ್ತಿದ್ದರು ? ಇಲ್ಲಿರುವ ಮಹಾರಾಷ್ಟ್ರದ ಪರವಾಗಿ ಬಂದಿರುವ 7 ಮಂದಿ ಸದಸ್ಯರು ತಾವು ಚುನಾಯಿತರಾಗಿ ಬಂದ ಒಂದೆರಡು ತಿಂಗಳಲ್ಲಿ ಇದಕ್ಕೇಕೆ ಗಮನಕೊಡಲಿಲ್ಲ ? ಈಗೇಕೆ ಇದಕ್ಕೆ ಪ್ರಾಮುಖ್ಯತೆ ಬಂತು ! ಅವರ ದೂರದ ಉದ್ದೇಶ ಎಲ್ಲರಿಗೂ ಗೊತ್ತಾಗುತ್ತದೆ. ಇದನ್ನು ನೋಡಿದರೆ ದೇಶದ ಕೆಲಸಕಾರ್ಯ ಮುಖ್ಯವಲ್ಲ, ರಾಜಕೀಯ ಮುಖ್ಯ, ಮುಖ್ಯವಾದ ಸ್ಥಾನಗಳು ತಮಗೆ ಬೇಕೆಂಬ ಉದ್ದೇಶದಿಂದ ಈ ಭಾಷಾವಾರು ಗೊಂದಲವನ್ನೆಬ್ಬಿಸಿದರೆ ಇದರಿಂದ ದೇಶಕ್ಕೆ ಒಳ್ಳೆಯದಾಗುವುದಿಲ್ಲ.

ಭಾಷೆ ವಿಷಯದಲ್ಲಿ ಇನ್ನೊಂದು ಸಲಹೆ ಮಾಡುತ್ತೇನೆ. ಮಹಾರಾಷ್ಟ್ರದ ಮುಖ್ಯಮಂತ್ರಿಗಳು 7ನೆಯ ತಾರೀಖು ಬರಲಿದ್ದಾರೆ, ಮುಖ್ಯಮಂತ್ರಿಗಳು ಇಡೀ ದೇಶಕ್ಕೆ ಮಾರ್ಗದರ್ಶಕರಾಗಿರಬೇಕು, ಭಾಷಾವಾರು ಗೊಂದಲ ತಪ್ಪಿಸಬೇಕು. ಕೆಲವು ಪ್ರಾಂತಗಳು ಮಹಾರಾಷ್ಟ್ರಕ್ಕೆ ಬರಬೇಕು, ಕೆಲವು ಮೈಸೂರಿಗೆ ಬರಬೇಕು ಎಂದು ಕೆಲವರು ಹೇಳಬಹುದು. ಈಗ ಬೆಂಗಳೂರಿನಲ್ಲಿ ಯಾವ ಭಾಷೆ ಮಾತನಾಡುವವರಿದ್ದಾರೆ ! ತಮಿಳರು, ತೆಲುಗು ಭಾಷೆಯವರು ಮುಂತಾದವರಿದ್ದಾರೆ. ನಾಳೆ ತಮಿಳು ನಾಡಿನವರು ಬೆಂಗಳೂರು ತಮಗೆ ಸೇರಬೇಕೆಂದು ಕೇಳಬಹುದು. ಈ ಭಾಷಾವಾರು ಪ್ರಾಂತ್ಯಗಳಿಗೆ ಕೊನೆ ಮೊದಲಿದೆಯೇ ! ಇದನ್ನು ಯೋಚನೆ ಮಾಡಬೇಕು. ಆದುದರಿಂದ ಭಾಷಾವಾರು ಪ್ರಾಂತದ ಕೂಗಾಟವನ್ನು ನಿಲ್ಲಿಸಿ ದೇಶದ ಹಿತದೃಷ್ಟಿಯಿಂದ ಕೆಲಸ ಮಾಡಬೇಕು ಎಂದು ಕೇಳಿಕೊಳ್ಳುತ್ತೇನೆ. ನನ್ನ ಅಣ್ಣತಮ್ಮಂದಿರಿಗೆ ಶಿವಾಜಿ ಪಕ್ಷದವರಿಗೆ ನಾನು ಹೇಳುವುದು, ಅವರು ಗಂಭೀರವಾಗಿ ಸರಿಯಾದ ಪ್ರಯತ್ನ ಮಾಡಬೇಕು, ದೈವಭಕ್ತಿಯನ್ನು ಹೆಚ್ಚಿಸಬೇಕು, ಭಾಷಾವಾರು ಗೊಂದಲಕ್ಕೆ ಹೆಚ್ಚು ಗಮನಕೊಡಬಾರದು, ಇತರರಿಗೆ ಮಾರ್ಗದರ್ಶಕರಾಗಿರಬೇಕು ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

Mr. SPEAKER.—I want to know whether there is any other member who wants to participate in the debate excluding the Chief Minister or any of the Ministers who may intervene hereafter. I find that Sri Saranappa wants to participate.

[*Sri A. R. Panchagavi rose to speak.*]

Sri T. N. MADAPPA GOWDA.—Sir, before the Deputy Speaker begins his speech, we would like to know the views of the Chair on the Konkani and Marathi languages.

Mr. SPEAKER.—Kindly refer to the proceedings. I have already made it abundantly clear and I continue to hold the same opinion.

Sri A. R. PANCHAGAVI (Sampagaon).—Mr. Speaker, Sir, without entering into the controversies I wish to refer to some injustices that have already occurred and that might occur on account of this linguistic division of our country. I come from an area which is part of Belgaum District and when Mysore State was carved out Ghataprabha was thought to be one of the major projects and the Engineers' opinion was that it was one of the very important projects that ought to have been finished early. Even from the national point of view, it was said to be a very important irrigation project.

An envisaged early the project was like this. Two major dams were to be constructed one at Hadalga and another at Ajra on the river Ghataprabha and the Left Bank Canal as already existing was to be continued up to 72 miles over the branch extending to more than 50 miles and the Right Bank Canal was to be taken up right from Hadalga itself. The whole scheme would have brought under its command about 11 lak acres and the area to be irrigated was 7 lakh acres. After the reorganisation of States the dam sites of Hadalga and Ajra went to Maharashtra and when Mysore wanted to get these areas for implementation of the scheme, the linguistic division came in the way and so it is our unfortunate lot that even now the entire Ghataprabha scheme has not been completed. Even the foundation has not been completed. We have not only lost several lakhs of tons of foodgrains that ought to have been grown by this time, but we are permanently deprived of more than a lakh of acres getting irrigation facilities. This is most fertile area. Immediately after States reorganisation the Chief Minister of Maharashtra was approached for the site for the construction of the dam there. He is now the Defence Minister of India. I do not want to say anything against anybody, but the fact is that we were not allowed and we were not given the facilities for implementing the scheme as orginally planned before State reorganisation and after State reorganisation Maharashtra came in the way of this scheme and we were not allowed to execute this scheme and there by we are now permanently deprived of the benefits of irrigation for these 1 lakh acres from Yergaty (down to Badami). If this is going to be the result of State reorganisation, I for one would always oppose any move now for re-dividing any of this border areas or to re-allot some border area to another State without considering the economic aspects of the country. In our emotion,

(SRI A. R. PANCHAGAVI)

we are likely to neglect the development of the country. This is what actually happened in the case of Ghataprabha. So I appeal to the Hon'ble member Sri Kadam to think of all the developmental aspects of his own area. The kalinadi scheme which is a boon to Mysore will suffer from the claims that have been put forward for Karwar. Of cource, really speaking they have no claim for Karwar. It is not on the border and it does not in any respect belong to Maharashtra, nor can any person rightly lay claim for it. Supposing for argument sake it is a correct claim, then our Kalinadi scheme and the Karwar harbour both will suffer and the economic development of that area will completely suffer. If these are the consequences going to flow from reorganisation of States or from the redistribution of boundaries, I for one will always oppose, it. With that end in view, we have been opposing this move for appointment of one man Commission or three-men Commission.

Another aspect that has got to the taken into consideration is this. All along we have been agitating over this question, but I would submit that the common man is not so much concerned about this whether he remains in one State or goes to another State, as far as the common man is concerned, he is not very much concerned with it. What he is concerned with, is, the economic development and the over-all development of the country as a whole. But in our emotions, we are apt to forget this factor, and we begin to fight amongst ourselves for areas. People who are placed in high offices ought to think of the whole of India as such and not of parts, but unfortunately even they enter into such minor conflicts. I was pained to learn from papers the other day that when our Chief Minister asked for a few months' time to settle these issues with the Chief Minister of Maharashtra, the Defence Minister of India was willing to give only two week's time. If this is the State of affairs, if this is the spirit in which we are entering into controversies, woe be to our country. I for one will always oppose such a move for division of the country by any person howso ever highly placed he may be. I do not wish to enter into controversies about the merits of the case. Facts and figures have been placed from both sides. I do not want to deal with them at the stage. I only wanted to place before the House the developmental aspect of the case. I thank you, sir, for giving me this opportunity.

‡ಶ್ರೀ ವಿ. ಶರಣಪ್ಪ (ದೇವದುರ್ಗ).—ಸಭಾಪತಿಗಳೇ, ಇದುವರೆಗೂ ಈ ಮಾನ್ಯ ಸಭೆಯ ಸದಸ್ಯರು ನಮ್ಮ ಮೈಸೂರು ಮತ್ತು ಮಹಾರಾಷ್ಟ್ರ ಗಡಿ ವಿವಾದದ ಬಗ್ಗೆ ತಮ್ಮ ತಮ್ಮ ಅಮೂಲ್ಯವಾದ ಅಭಿಪ್ರಾಯ ಮತ್ತು ವಿಚಾರಗಳನ್ನು ವ್ಯಕ್ತ ಮಾಡಿದ್ದಾರೆ. ಇಲ್ಲಿ ಕೆಲವು ಮಹಾರಾಷ್ಟ್ರವಾದಿ ಸದಸ್ಯರೂ ಕೂಡ ಈ ಒಂದು ಗಡಿ ಪ್ರಶ್ನೆ ಬಗ್ಗ ನಮ್ಮ ವಿರೋಧಪಕ್ಷದ ನಾಯಕರು ತಂದಂತಹ ಒಂದು ನಿಲುವಳಿ ಸೂಚನೆಯ ಮೇಲೆ ತಮ್ಮ ಒಂದು ವಿರೋಧ ಅಭಿಪ್ರಾಯವನ್ನು ವ್ಯಕ್ತಪಡಿಸಿ ನಮ್ಮ ಮೈಸೂರು ರಾಜ್ಯದಲ್ಲಿದ್ದಂಥ ಈ ಭಾಗಗಳು ನಮ್ಮವು ಆ ಭಾಗಗಳು ನಿಮ್ಮವು ಎಂದು ಹೇಳಿ ವಾಲಿ ಸುಗ್ರೀವನ ವಾದವನ್ನು ಈ ಸಭೆಯ ಮುಂದೆ ತಂದಿದ್ದಾರೆ. ಈಗ ಈ ವಿಷಯವನ್ನು ನಾವು ಸ್ವಲ್ಪ ಕೂಲಂಕಷವಾಗಿ ತಾಳ್ಮೆಯಿಂದ ಒಂದು ರಾಷ್ಟ್ರದ ಭಾವನೆಯಿಂದ ವಿಚಾರ ಮಾಡಿದ್ದೇ ಆದರೆ ರಾಜ್ಯಗಳ ಪುನರ್ವಿಗಂಡಣೆಯಾದ ಮೇಲೆ ಸುಮಾರು ಹತ್ತು ವರ್ಷ ಒಂದೊಂದು ಭಾಗಕ್ಕೆ ಅಂಟಿಕೊಂಡು ಒಂದೊಂದು ಆಡಳಿತದಲ್ಲಿ ಇದ್ದು ಕೆಲವೊಂದು ಜನರ ಸ್ವಾರ್ಥ, ಇಚ್ಚೆ, ಆಕಾಂಕ್ಷೆಗಳನ್ನು

ಈಡೇರಿಸುವುದಕ್ಕೆ ಕೆಲವೊಂದು ಭಾಗಗಳಲ್ಲಿ ತಮ್ಮ ತಮ್ಮ ಒಂದು ರಾಜಕೀಯವನ್ನು ಒಂದು ಸಂಕುಚಿತ ಭಾವನೆಯಿಂದ ಈ ಭಾಗ ಮಹಾರಾಷ್ಟ್ರದ್ದು, ಆ ಭಾಗ ಕನ್ನಡಿಗರದು, ಈ ಭಾಗ ಆಂಧ್ರರದು, ಆ ಭಾಗ ಕೇರಳದ್ದು ಎಂದು ಹೇಳಿಕೊಂಡು ಬರುತ್ತಾ ಇರುವುದು, ಈ ವಾದ ರಾಷ್ಟ್ರಕ್ಕೆ ಹಿತಕರವಾದುದಲ್ಲ. ಮತ್ತು ದೇಶಕ್ಕೆ ಮುಂದೆ ಒಳ್ಳೆಯ ಒಂದು ವಿಚಾರ ಮತ್ತು ಒಳ್ಳೆಯ ಭಾವನೆಯನ್ನು ತಂದು ಕೊಡತಕ್ಕ ವಿಚಾರವಲ್ಲ ಎಂದು ಈ ದಿವಸ ಹೇಳಬಹುದು.

12-30 P.M.

ಎಸ್. ಆರ್. ಸಿ. ರಿಪೋರ್ಟಿನಲ್ಲಿ, ಯಾವುದೇ ಒಂದು ಪ್ರದೇಶದ ವಿಷಯವನ್ನು ತೀರ್ಮಾನ ಮಾಡಬೇಕಾಗಿದ್ದರೆ ಅಲ್ಲಿ ಒಂದು ಭಾಷೆಯನ್ನು ಮಾತನಾಡತಕ್ಕ ಜನರು ಕೊನೆಯ ಪಕ್ಷ ಸೇಕಡ 70ಕ್ಕೆ ಕಡಮೆ ಇಲ್ಲದೆ ಇದ್ದುದಾದರೆ ಅಂಥ ಪ್ರದೇಶವನ್ನು ಎಲ್ಲಿಗೆ ಸೇರಿಸಬೇಕೋ ಅಲ್ಲಿಗೆ ಸೇರಿಸಬೇಕೋ ಅಲ್ಲಿಗೆ ಸೇರಿಸಬಹುದು ಎಂಬುದಾಗಿ ಹೇಳಿರತಕ್ಕ ವಿಷಯ ತಮಗೆಲ್ಲರಿಗೂ ತಿಳಿದಿರತಕ್ಕದೇ ಆಗಿದೆ. ನಾವು ಇಲ್ಲಿ ಸೇರಿರತಕ್ಕ ಸಭೆಯಲ್ಲಿ 208 ಜನ ಸದಸ್ಯರುಗಳಿದ್ದೇವೆ. ನಿಲ್ಲಿ ಮರಾಠಿ ಮಾತನಾಡತಕ್ಕ ಸದಸ್ಯರು ಕೇವಲ ಏಳು ಜನರಿದ್ದಾನೆ. ಅಂದರೆ ಅವರ ಸೇಕಡ ಸಂಖ್ಯೆ ಮೂರೂವರೆ ಆಗಬಹುದು. ಈ ದಿವಸ ಮಹರಾಷ್ಟ್ರೀಯರು ಕೇಳುತ್ತಿರುವ ಪ್ರದೇಶಗಳು ಆ ಎಸ್.ಆರ್.ಸಿ. ವರದಿಯಲ್ಲಿ ಹೇಳಿರುವಂತೆ ಅಲ್ಲಿ ಕನ್ನಡ ಮಾತನಾಡತಕ್ಕ ಜನರು ಸೇಕಡ 70ಕ್ಕೂ ಮೇಲಿದ್ದು, ಆ ಪ್ರದೇಶಗಳು ಈ ಭಾಷಾವಾರ ದೃಷ್ಟಿಯಿಂದಲೂ ಮತ್ತು ಇನ್ನಿತರ ದೃಷ್ಟಿಗಳಿಂದಲೂ ಅಂದರೆ ಐತಿಹಾಸಿಕವಾಗಿಯೂ, ಸಾಂಸ್ಕೃತಿಕವಾಗಿಯೂ ಮತ್ತು ಭೌಗೋಳಿಕವಾಗಿಯೂ ಅವು ಮೈಸೂರು ರಾಜ್ಯದಲ್ಲೇ ಇರಬೇಕೆಂದು ಇಲ್ಲಿಗೆ 10 ವರ್ಷಗಳ ಹಿಂದೆಯೇ ತೀರ್ಮಾನ ಮಾಡಿದ್ದರೂ ; ಕೇವಲ ಮೂರೂವರೆ ಪರ್ಸೆಂಟಿರತಕ್ಕ ಮರಾಠಿ ಸದಸ್ಯರು ಅದನ್ನು ಒಪ್ಪದೆ ಒಂದು ಹಟಮಾರಿತನವನ್ನು ವ್ಯಕ್ತ ಮಾಡುತ್ತಿರುವುದು ದೇಶಕ್ಕೆ ಒಳ್ಳೆಯದಲ್ಲ ಎಂದು ಹೇಳುತ್ತೇನೆ. ಈಗಾಗಲೇ ಇಲ್ಲಿ ನಡೆದಂಥ ಚರ್ಚೆಯಲ್ಲಿ ಬಂದ ವಿಷಯಗಳನ್ನು ನೋಡಿದರೆ ದೇಶದಲ್ಲಿ ಕಾಂಗ್ರೆಸ್ ಸಂಸ್ಥೆಗೂ ಒಂದು ಕಳಂಕವನ್ನು ತರತಕ್ಕ ಪ್ರಯತ್ನದಲ್ಲಿ ಕೆಲವರು ತೊಡಗಿದ್ದಾರೆಂಬುದು ಕಂಡುಬರುತ್ತಿದೆ ; ಇದು ಸರಿಯಲ್ಲ. ಈ ದಿವಸ ಇಂಥ ಒಂದು ಗಡೀ ಹೊಂದಾಣಿಕೆ ಪ್ರಶ್ನೆ ಇರತಕ್ಕದು ಕೇವಲ ಮೈಸೂರು ಮತ್ತು ಮಹರಾಷ್ಟ್ರಗಳ ನಡುವೆ ಮಾತ್ರವೇ ಅಲ್ಲ, ಈ ಪ್ರಶ್ನೆ ನಮ್ಮ ಅಕ್ಕಪಕ್ಕದಲ್ಲಿರತಕ್ಕ ಇನ್ನಿತರೇ ರಾಜ್ಯಗಳಾದ ಆಂಧ್ರ, ಕೇರಳ ಮತ್ತು ತಮಿಳುನಾಡು, ಒರಿಸ್ಸಾ ಮತ್ತು ಮಧ್ಯಪ್ರಾಂತ ಇಲ್ಲೆಲ್ಲಾ ಈ ಸಮಸ್ಯೆ ಇದ್ದೇ ಇದೆ. ಈ ರಾಜ್ಯಗಳ ಮಧ್ಯೆ ಕೆಲವು ಸಣ್ಣ ಪುಟ ಹೊಂದಾಣಿಕೆಗಳು ಆಗಬೇಕಾಗ್ತಿದೆ. ಅದನ್ನು ತೀರ್ಮಾನ ಮಾಡಲು ಯಾವ ರೀತಿಯ ತತ್ವಗಳನ್ನು ಅನುಸರಿಸಬೇಕು ಎಂಬುದನ್ನು ಆಲೋಚಿಸಿ, Terms of Reference ಎಂದು ನಾವೇನು ಹೇಳುತ್ತೇವೆ. ಅದನ್ನು ಸಣ್ಣಪುಟ್ಟ ಹೊಂದಾವಣಿಕೆಗೆ ಅಳವಡಿಸಿ ಒಂದು ಯೋಗ್ಯರೀತಿಯಲ್ಲಿ ಇದನ್ನು ತೀರ್ಮಾನ ಮಾಡಲು ಒಂದು ಉಚ್ಛ ಮಟ್ಟದ ಸಮಿತಿಯನ್ನು ಕಾಂಗ್ರೆಸ್ಸಿನವರಿಂದಾಗಲೀ ಅಥವಾ ದೇಶದಲ್ಲಿರತಕ್ಕ ಇತರ ತಜ್ಞರಿಂದಾಗಲೀ ನೇಮಕ ಮಾಡಬೇಕಾದ್ದು ಅಗತ್ಯ ಎಂಬ ಅಂಶವನ್ನು ಜನತೆಯ ಮುಂದೆ ಇಟ್ಟಿದ್ದಾರೆ. ದೇಶದಲ್ಲಿರತಕ್ಕ ಜನತೆ ಇದರ ಬಗ್ಗೆ ಒಂದು ಅಭಿಪ್ರಾಯವನ್ನು ಕೊಡಬೇಕಾದ್ದು ಅನಿವಾರ್ಯ. ಈ ಒಂದು ಉದ್ದೇಶಕ್ಕಾಗೇ ಮಹರಾಷ್ಟ್ರದ ಮುಖ್ಯ ಮಂತ್ರಿಗಳಾದ ಶ್ರೀ ವಿ. ಪಿ. ನಾಯಕ್‌ರವರು ಬರುವ ತಿಂಗಳು 7ನೇ ತಾರೀಖು ಮೈಸೂರಿಗೆ ಬರತಕ್ಕವರಿದ್ದಾರೆ. ಆದರೆ ಅವರು ಬರುವುದಕ್ಕೆ ಮುನ್ನವೇ ಸಣ್ಣ ಪುಟ್ಟ ಹೊಂದಾಣಿಕೆಗಳಿಗೆ ಅವರು ಒಪ್ಪುವುದಿಲ್ಲವೆಂಬ ಧೋರಣೆಯನ್ನು ತಾಳಿರುವುದಾಗಿ ಹೇಳಲಾಗುತ್ತಿದೆ. ಅಂದರೆ, ಅವರ ಧೋರಣೆಯನ್ನು ನೋಡಿದರೆ ಇದೊಂದು ಬಗೆಹರಿಯದ ಸಮಸ್ಯೆಯಾಗಿಯೇ ಉಳಿಯಬೇಕಾಗುತ್ತದೆ. ನಮ್ಮ terms of referenceನಲ್ಲಿ ಕೇವಲ ಸಣ್ಣ ಪುಟ್ಟ ಹೊಂದಾಣಿಕೆ ಅಂದರೆ, ಒಂದೆರಡು ಹಳ್ಳಿಗಳು ಅಥವಾ ಈಗ ಇರತಕ್ಕ ಗಡಿಯಿಂದ ಇತ್ತ ಮೂರು ನಾಲ್ಕು ಅತ್ತ ಮೂರು ನಾಲ್ಕು ಮೈಲಿ ಫಾಸಲೆಯೊಳಗೆ ಇರತಕ್ಕ ಹಳ್ಳಿಗಳಲ್ಲಿ ಎಲ್ಲಿ ಸೇಕಡ 70ಕ್ಕಿಂತ ಹೆಚ್ಚು ಜನರು ಒಂದು ಭಾಷೆ ಮಾತನ್ನಾಡುತ್ತಾರೋ ಅಂಥ ಪ್ರದೇಶಗಳನ್ನು ಅವರಿಗೆ ಕೊಡಬೇಕಾದಲ್ಲಿ ಅವರಿಗೆ ಕೊಟ್ಟು ನಮಗೆ ಬರಬೇಕಾದ್ದನ್ನು ನಾವು ತೆಗೆದುಕೊಳ್ಳುಂತೆ ಹೊಂದಾವಣಿಕೆ ಆಗುವುದಾಗಿದ್ದಲ್ಲಿ ಅಂಥ ಬದಲಾವಣೆಗೆ ಅನುಗುಣವಾದ terms of reference ರಚಿಸಿ ಇದನ್ನು ತೀರ್ಮಾನ ಮಾಡಬೇಕಾದ್ದು ಉಚಿತವಾದ್ದು ಎಂದು ಹೇಳುತ್ತೇನೆ. ಇದಕ್ಕೆ ಮಹರಾಷ್ಟ್ರದವರು ಒಪ್ಪುವುದಿಲ್ಲ ಎಂದರೆ, ಆ ಕಾಶ್ಮೀರದ ಪ್ರಶ್ನೆಯ ಬಗ್ಗೆ ಹಿಂದೂಸ್ಥಾನ ಮತ್ತು ಪಾಕೀಸ್ತಾನಗಳು ವಾದಿಸಿದಂತಾಗಿ ಅಲ್ಲೇನು ಒಂದು ಪರಿಣಾಮ ಈ ದಿವಸ ಉದ್ಭವಿಸಿದೆಯೋ ಅದೇ ಪರಿಣಾಮ ಇಲ್ಲಿಯೂ ಉದ್ಭವವಾಗುತ್ತದೆ, ಇದನ್ನು ಯಾವ ಕಾಂಗ್ರೆಸ್ಸಿಗೂ ಬಿಡಿಸಲು ಸಾಧ್ಯವಾಗುವುದಿಲ್ಲ. ಅಂಥ ಹಟಮಾರಿತನದ ವಾದದಿಂದ ಇಂಥ ವಿಷಯಗಳು ಇತ್ಯರ್ಥ

(ಶ್ರೀ ವಿ. ಶರಣಪ್ಪ)

ವಾಗಲಾರವು. ಈ ವಿಚಾರದಲ್ಲಿ ನಮ್ಮ ರಾಜ್ಯದ ಮುಖ್ಯ ಮಂತ್ರಿಗಳು ಸಣ್ಣ ಪುಟ್ಟ ಹೊಂದಾವಣಿಕೆಯ ಬಗ್ಗೆ ಒಪ್ಪಿಗೆಯನ್ನು ವ್ಯಕ್ತಪಡಿಸಿರತಕ್ಕದ್ದು ದೇಶದ ಹಿತದೃಷ್ಟಿಯಲ್ಲಿ ಬಹಳ ಒಳ್ಳೆಯದೆಂದು ನಾನು ಹೇಳುತ್ತೇನೆ.

ಈ ವಿಚಾರದಲ್ಲಿ ಮುಖ್ಯವಾದದ್ದು ಟರ್ಮ್ಸ್ ಆಫ್ ರೆಫರೆನ್ಸ್. ಅದನ್ನು ಸರಿಯಾದ ರೀತಿಯಲ್ಲಿ ಮಾಡಿದ ಮೇಲೆ ಅದಕ್ಕೆ ಮಹರಾಷ್ಟ್ರೀಯರು ಒಪ್ಪದ ಪಕ್ಷಕ್ಕೆ ಅದು ನಾಳೆ ಕಾಂಗ್ರೆಸ್ ವರ್ಕಿಂಗ್ ಕಮಿಟಿಯ ಮುಂದೆ, ಎ.ಐ.ಸಿ.ಸಿ.ಯ ಮುಂದೆ ಆನಂತರ ಪಾರ್ಲಿಯಮೆಂಟಿನ ಮುಂದೆ ಬರಲೇಬೇಕಾಗುವುದು. ಆ ವೇಳೆಯಲ್ಲಿ ನಮಗೆ ಆಂಧ್ರ ಮತ್ತು ಕೇರಳ, ತಮಿಳು ನಾಡುಗಳಿಂದ ಬರತಕ್ಕ ಪ್ರದೇಶಗಳನ್ನು ಮೊದಲು ನಿರ್ಧರ ಮಾಡುವಂತೆ ಮಾಡಿ ಆನಂತರ ಬೇರೆಯವರಿಗೆ ಹೋಗತಕ್ಕ ಸಣ್ಣ ಪುಟ್ಟ ಭಾಗಗಳೇನಿವೆ ಅವುಗಳನ್ನು ಅವರಿಗೆ ಕೊಡುವಂತೆ ಮಾಡಬೇಕಾದ್ದು ಅತಿ ಮುಖ್ಯವಾದ ವಿಷಯ ಇಂಥ ಒಂದು ನ್ಯಾಯವಾದ ಮಾರ್ಗವನ್ನು ಬಿಟ್ಟು ಬೆಳಗಾಂ ನಮ್ಮದು ಎಂದು ಅವರು ಹೆಮ್ಮೆ ಪಟ್ಟುಕೊಂಡರೇನು ಹೇಳಲಿ? ನಾವು ಈ ದಿವಸ ಗಡಿ ನಿರ್ಣಯ ಸಮಿತಿಯಲ್ಲಿ ಇಬ್ಬರು ಇಲ್ಲವೇ ಮೂರು ಜನ ಅಥವಾ ನಾಲ್ಕು ಜನರು ಇರಲೆಂದು ಕೇಳುತ್ತಿದ್ದರೆ ಮಹರಾಷ್ಟ್ರೀಯರು ಭಾರತಕ್ಕಿರುವ ಒಬ್ಬ ರಾಷ್ಟ್ರಾಧ್ಯಕ್ಷರ ಬದಲು ಇಬ್ಬರು ರಾಷ್ಟ್ರಾಧ್ಯಕ್ಷರಿರಬೇಕೆಂದು ಕೇಳುಂತೆ ವರ್ತಿಸುತ್ತಿರುವುದು ನ್ಯಾಯವಾದುದಲ್ಲ. ಇಂಥ ಪ್ರಶ್ನೆಯನ್ನು ಇತ್ಯರ್ಥ ಮಾಡತಕ್ಕ ವೇಳೆಯಲ್ಲಿ ನಾಯಕರಾದವರಲ್ಲಿ ತಾಳ್ಮೆ, ಶಾಂತಿ, ಸಭ್ಯವರ್ತನೆಗಳಿರಬೇಕಾದ್ದು ಅತ್ಯಗತ್ಯ. ದೇಶದಲ್ಲಿರತಕ್ಕ ಜನರು ಮುಂದೆ ಎಲ್ಲರೂ ಒಂದು ಹೊಂದಾವಣಿಕೆಯಿಂದ ನಾವೆಲ್ಲರೂ ಭಾರತೀಯರು ಎಂಬ ಭಾವನೆಯನ್ನು ಇಟ್ಟುಕೊಂಡು ಸಹ ಬಾಳ್ವೆ ಮಾಡುವಂತೆ ಇದನ್ನು ಬಿಡಿಸತಕ್ಕದ್ದು ಬಹು ಮುಖ್ಯವಾದ ವಿಷಯ ಎಂಬುದನ್ನು ಈ ಮಾನ್ಯ ಸಭೆ ಮನಗಾಣಬೇಕು. ಈ ದಿವಸ ನಾವು ತೀರ್ಮಾನ ಮಾಡಲು ಹೊರಟಿರತಕ್ಕ ಪ್ರಶ್ನೆ ಇಲ್ಲಿರತಕ್ಕ 208 ಜನ ಸದಸ್ಯರಿಗೆ ಮಾತ್ರವೇ ಸಂಬಂಧವಾಗಿರದೆ ಇದು ದೇಶದಲ್ಲಿರತಕ್ಕ ಇಡೀ ಎರಡೂವರೆ ಕೋಟಿ ಕನ್ನಡಿಗರಿಗೆ ಸಂಬಂಧಪಟ್ಟ ಪ್ರಶ್ನೆ ಎಂಬುದನ್ನು ನಾವು ಮರೆಯಬಾರದು. ನಾವು ಇದು ಕೈಗೊಳ್ಳುವ ತೀರ್ಮಾನದ ಪರಿಣಾಮ ಎರೆಡೂವರೆ ಕೋಟಿ ಕನ್ನಡಿಗರಿಗೆ ಸೇರತಕ್ಕದ್ದಾಗಿದೆ. ಒಟ್ಟಿನಲ್ಲಿ ನಾವೆಲ್ಲರೂ ನಮ್ಮ ಕನ್ನಡಿಗರ ಹಿತರಕ್ಷಣೆಯನ್ನು ಮರೆಯಬಾರದೆಂದು ಹೇಳಿ ಆ ರೀತಿ ಎಲ್ಲರೂ ಏಕ ಮನಸ್ಸಿನಿಂದ ಇದಕ್ಕೆ ಪ್ರಯತ್ನ ಮಾಡಬೇಕೆಂದು ತಮ್ಮೆಲ್ಲರನ್ನು ಪ್ರಾರ್ಥಿಸಿಕೊಂಡು ನನಗೆ ಎರಡು ಮಾತುಗಳನ್ನಾಡುವುದಕ್ಕೆ ಅವಕಾಶ ಮಾಡಿಕೊಟ್ಟ ಅಧ್ಯಕ್ಷರನ್ನು ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† **Sri M. SRINIVASA NAYAK** (Mangalore-1).—Mr. Speaker Sir, I do not want to speak at length on this subject. I only wish to touch upon the point pressed by the Maharashtrian friends who say that Konkani is a dialect of Marathi. I want to say that Konkani and Marathi languages are not subsidiary to each other. Konkani has a heritage and indepence of its own. As you were pleased to remark at an earlier date, Konkani is a language spoken by gods. It is such a sweet language that today even non-Konkani people also are trying to learn that language and speak that language. It is such an independent and comprehensive language; that it is not dependent on any other language for words. So, our Maharashtrian friends in this House or anybody outside cannot sit in judgement on that Konkani is a language which is very old and which is spoken from nearly four thosand years. It is not a language which is dependent on any other lanaguage, because Marathi or any other language is a subsidiary language of Hindi.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ನಾಲ್ಕು ಸಾವಿರ ವರ್ಷಗಳ ಹಿಂದಿನ ಚರಿತ್ರೆ ಹೇಗೆ ಇತ್ತು ಎನ್ನುವುದನ್ನೂ ಹೇಳಬಹುದು.

ಶ್ರೀ ಎಂ. ಶ್ರೀನಿವಾಸ್ ನಾಯಕ್.—ಆಗಿನಿಂದಲೂ ಅಲ್ಲಿ ಕೊಂಕಣ ಭಾಷೆ ಇತ್ತು ದೇವನಾಗರಿ

ಅಲ್ಲ. We are not borrowing the Devanagari script to communicate the language of Konkani as is done to communicate the language of Marathi. So, if the Maharashtra friends were to say that Konkani is a subsidiary of Marathi, we, Konkani speaking people strongly refute it. I feel even my friend, Sri Kadam will agree with me in this respect.

Sri B. P. KADAM.—I oppose you strongly.

Sri M SRINIVASA NAYAK.—I am going to refute the allegation of Sri Kadam and say that Konkani is an independent language and it is not a dependent language on Marathi. So, the people in this State or people in Maharashtra State or people residing in the borders of the State are not only speaking Marathi, but speak Konkani also and it cannot be taken as the subsidiary language of the Marathi people.

Sri C. J. MUCKANNAPPA.—Do you mean to say that because Konkani is an independent language, you want a separate Konkani State ?

Sri M. SRINIVASA NAYAK.—I do not subscribe to that view nor we want to have a Konkani State. There is a drama and a poem written in Konkani and even Bhagavadgita is translated into Konkani and the medium of Kannada is used. I would like to say only a few words. In the year 1923, when Mahatma Gandhi wanted to divide this country on linguistic basis, he wanted to have Mysore State with the districts of Belgaum and South Kanara extending upto Tirukarapur. Neither Maharashtra nor Kerala friends raised any objection that the State as envisaged by Mahatma Gandhi is not a viable State. In the year 1924, when the A.I.C.C. was held in Karanataka area, it was held in Belgaum. But, when the S.R.C. came, they divided South Kanara district between Kasargod and Manjeshwar and the South Kanara people have already stated that it is not reasonable. Kannadigas in Kasargod, nearly 2 lakhs of people, were always feeling that the Mysore Government was not prepared to force the issue of getting a fair deal from the opening of the mutual border, because no other border issue has been opened. But, since the Chief Minister has been urging to include the issue of ther contiguous areas in Maharashtra as well as Kerala in the purview of the Commission, these issues have to be reopened. Kannadigas have been pleased that their cause has been championed by the Mysore Government. I wish to express on this occasion that the decision taken by the Chief Minister is one which has been avowed by the people of Kasargod, because they expect that justice will be done to them. The border issue between Madras and Andhra has been settled by mutual agreement. The boder issue between us and Andhra has also been settled by mutual agreement. Such issues have to be resolved either through negotiation or by a Commission or arbitration. The course that is to be adopted will be to apppoint a Commission and the Commission's report will come before the Government of India and the Parliament and any adjustment required could be affected thereafter. So, our Chief Minister has been wise enough to select the wisest course of agreeing to one-man Commission. Whatever report the Commission

(SRI M. SRINIVASA NAYAK)

